ಜನಶಕ್ತಿ


ಕನ್ನಡ ವಾರಪತ್ರಿಕೆ

Blog janashakthi.wordpress.com e-mail js_weekly@yahoo.com


ಸಂಪುಟ 7 ಸಂಚಿಕೆ 46

ನವೆಂಬರ್ 17, 2013 ಪುಟ 16 ರೂ. 10/-






ಗುಜರಾತ್ 'ಅಭಿವೃದ್ಧಿ' - ಒಂದು ಮಾದರಿಯೇ?



ಧರ್ಮಸ್ಥಳದ ಎಲ್ಲ ಅತ್ಯಾಚಾರಗಳು, ಅಸಹಜ ಸಾವುಗಳು ಮತ್ತು ಭೂ ಅವ್ಯವಹಾರಗಳು ಸಿಬಿಐ ತನಿಖೆಗೆ ಒಳಪಡಲಿ





ಚುನಾವಣಾ ಅಭಿಪ್ರಾಯ ಸಂಗ್ರಹಗಳು -ನಿಷೇಧ ಬೇಡ, ಸಮಯ ಮಿತಿ ಇರಲಿ

'ಅಸಾರಾಮ'ನ ಪಾತಕ ಕೃತ್ಯಗಳು ಮತ್ತು ಸಂಘ ಪರಿವಾರ

ಚೋಮನ ದುಡಿ ಮತ್ತೆ ಬಲವಾಗಿ ಮೊಳಗಬೇಕು

"ಹಿಡಿದ ದುಡಿ, ಎತ್ತಿದ ಕೈ, ತುಂಬಿದ ಆವೇಶ ಎಲ್ಲವೂ ಇದ್ದಕ್ಕಿದ್ದಂತೆಯೇ ಇವೆ. ಆದರೆ ಚೋಮನಿಲ್ಲ"
'ಡಮ ಢಮ್ಮ ಢಮ ಡಕ್ಕ, ಡಮ ಢಮ್ಮ ಡಕ ಢಕ್ಕ' ಚೋಮನ ದುಡಿಯ ಈ ಮೊಳಗು ಕನ್ನಡಿಗರಿಗೆ ಪರಿಚಿತವಾದದ್ದು 1931ರಲ್ಲಿ ಸಾಹಿತ್ಯ ಲೋಕದಲ್ಲಿ ಮೊಳಗಿದ ಈ ದುಡಿ ಅಂದಿಗೆ ತೀರ ಹೊಸತೇ ಆಗಿತ್ತು. ಇಡೀ ಸಾಹಿತ್ಯ ಲೋಕವನ್ನು ಪ್ರಭಾವಿಸಿತು. ಅದೇ ಸಮಯದಲ್ಲಿ ಕುವೆಂಪುರವರ ಪಾಂಚಜನ್ಯ ಮೊಳಗಿತು. ಅದೇ ಆಸುಪಾಸಿನಲ್ಲೇ ಬೇಂದ್ರೆಯವರ ಕುರುಡು ಕಾಂಚಾಣ, ತುತ್ತಿನ ಚೀಲ ಹುಟ್ಟಿದ್ದು. ಮುಂದೆ ಚೋಮನ ದುಡಿ ಸಿನೆಮಾ ಆಗಿ ಹೊಸ ಅಲೆಯನ್ನೇ ಎಬ್ಬಿಸಿತು. 70–80 ರ ದಶಕದಲ್ಲಿ ದುಡಿಯ ಈ ಮೊಳಗು ಮತ್ತಷ್ಟು ಅಬ್ಬರದಿಂದ ಭೂ ಚಳುವಳಿಯಾಗಿ, ದಲಿತ ಚಳುವಳಿಯಾಗಿ ಇಡೀ ಕರ್ನಾಟಕವನ್ನೇ ವ್ಯಾಪಿಸಿತು. ಅಂದು ಭೂಮಿಯಲ್ಲಿ ತಮ್ಮ ಪಾಲನ್ನೂ ಕೇಳುತ್ತಾ ಆರಂಭವಾದ ಈ ಧ್ವನಿ ಮುಂದಕ್ಕೆ ಆಡಳಿತದಲ್ಲಿ, ರಾಜಕೀಯದಲ್ಲಿ ಪಾಲನ್ನು ಕೇಳುತ್ತಾ, ಸಾಹಿತ್ಯ, ಸಾಂಸ್ಕೃತಿಕ ಲೋಕಗಳನ್ನೂ, ಬೆಚ್ಚಿ ಬೀಳಿಸುವಂತೆ ವ್ಯಾಪಿಸುತ್ತಾ ನಡೆದಿದೆ. ಅದೇ ಸಮಯದಲ್ಲಿ ಈ ಕಹಳೆಯ ಧ್ವನಿಯನ್ನು ಅಡಗಿಸುವ ಹುನ್ನಾರಗಳೂ ಅದಕ್ಕಿಂತ ಪ್ರಬಲವಾಗಿ ನಡೆದಿವೆ. ಗುರುತರವಾದ ಸವಾಲುಗಳು ಎದುರಾಗಿವೆ. ಅದನ್ನೆಲ್ಲಾ ಎದುರಿಸಿ ಚೋಮನ ದುಡಿ
ಮತ್ತೆ ಮೊಳಗಬೇಕಾಗಿದೆ. ಕಾಲ ಕಾಲಕ್ಕೆ ಬದಲಾಗುತ್ತಿರುವ ಸನ್ನಿವೇಶವನ್ನು ಅನುಸರಿಸಿ ಹೊಸ ಹೊಸ ವಿಷಯಗಳ ಹೂರಣದೊಂದಿಗೆ ದುಡಿ ಅನುರಣಿಸಬೇಕಾಗಿದೆ. ಆ ದಿಕ್ಕಿನಲ್ಲಿ ಕೆಲವು ಚಿಂತನೆಗಳನ್ನು ಹಂಚಿಕೊಳ್ಳುವುದು ಈ ಕಾಲಂನ ಉದ್ದೇಶ

ಚೋಮನ ದುಡಿ

ಜಿ. ಎನ್. ನಾಗರಾಜ್

70 ರ ದಶಕದಿಂದಲೇ ಆರಂಭವಾದರೂ 1991 ರಿಂದ ಜಾಗತೀಕರಣ, ಖಾಸಗೀಕರಣ, ಉದಾರಿಕರಣವೆಂಬ ತ್ರಿವಳಿಗಳ ಜೊತೆ ಈಗ ಭಾರತಕ್ಕೆ ಇದುವೇ ದಾರಿ, ಇದೊಂದೇ ದಾರಿ ಎಂಬ ಹೆಸರಿನಲ್ಲಿ ಅಧಿಕೃತ ನೀತಿಯಾದ ಖಾಸಗೀಕರಣ ಸರ್ಕಾರಿ ಹಾಗೂ ಸಾರ್ವಜನಿಕ ವಲಯದ ಉದ್ಯೋಗಗಳನ್ನು ಕಬಳಿಸುತ್ತ ಬಂದಿದೆ. ಅದರ ಜೊತೆಯಲ್ಲಿಯೇ ಮೀಸಲಾತಿಯಿಂದ ದೊರಕುವ ಉದ್ಯೋಗದ ಪ್ರಮಾಣ ತೀವ್ರವಾಗಿ ಕುಗ್ಗಿದೆ. ಸ್ವಾತಂತ್ರ್ಯಾನಂತರದ ಮೊದಲ ದಶಕಗಳಲ್ಲಿ ಹೆಚ್ಚಿದ ಶಿಕ್ಷಣ ಸೌಲಭ್ಯದಿಂದಾಗಿ ಮೊಟ್ಟ ಮೊದಲು ವಿದ್ಯಾಭ್ಯಾಸದ ಅವಕಾಶ ದೊರೆತ ದಲಿತರು, ಕೆಳಜಾತಿಗಳು, ಮಹಿಳೆಯರು ಗಣನೀಯ ಪ್ರಮಾಣದಲ್ಲಿ ನಿಗದಿತ ಅರ್ಹತೆ ಪಡೆದುಕೊಂಡು ಉದ್ಯೋಗದ ಬಾಗಿಲು ತಟ್ಟಲಾರಂಭಿಸಿದ ಕೂಡಲೇ ಆ ಬಾಗಿಲುಗಳನ್ನು ಭದ್ರವಾಗಿ ಮುಚ್ಚಲಾಗಿದೆ. "ನೀವು ಕಾಲಾಂತರದಿಂದ ಸರ್ಕಾರೀ ಉದ್ಯೋಗಗಳಿಂದ ಹೊರಗೇ ಇರಿಸಲ್ಪಟ್ಟವರು, ಈಗಲೂ ಹೊರಗೇ ಇರಿ" ಎಂದು ನಿಂದಿಸಿ ಹೊರದಬ್ಬಿದಂತಾಗಿದೆ.


ಈ ಸಮಯದಲ್ಲಿಯೇ ದೇಶದ ಆರ್ಥಿಕತೆ ವೇಗವಾಗಿ ಬೆಳೆದಿದೆ. ವಿವಿಧ ರೀತಿಯ ಉದ್ಯೋಗಾವಕಾಶಗಳು ಸೃಷ್ಟಿಯಾಗಿವೆ. ಖಾಸಗೀರಂಗದಲ್ಲಿ. ಅಪಾರ ಆಸ್ತಿ, ಸಂಪತ್ತುಗಳನ್ನುಳ್ಳ ಮೇಲ್ಜಾತಿಗಳ ಮೇಲ್ವರ್ಗಗಳು ಈ ವೇಗದ ಅರ್ಥಿಕ ಬೆಳವಣಿಗೆಯ ಲಾಭ ಪಡೆದು, ಒಟ್ಟು ಸಮುದಾಯದ ಸ್ವತ್ತುಗಳನ್ನು ಕಾನೂನು ಬದ್ಧವಾಗಿ ಅಥವಾ ಕಾನೂನಿನ ಕಣ್ಣಿಗೆ ಮಣ್ಣೆರಚಿ ಆಕ್ರಮಿಸಿಕೊಂಡು ಖಾಸಗೀರಂಗವನ್ನು ವಿಸ್ತರಿಸಿಕೊಂಡಿವೆ. ಇಲ್ಲಿ ಸೃಷ್ಟಿಯಾದ ಉದ್ಯೋಗಾವಕಾಶಗಳನ್ನು ಕಬಳಿಸಿವೆ. ಬೆಂಗಳೂರಿನ ಐಟಿ ಉದ್ಯೋಗಿಗಳ ಬಗ್ಗೆ ನಡೆದ ಅಧ್ಯಯನಗಳಲ್ಲಿ ಅವರ ಜಾತಿ ವಿಭಜನೆ ಹೀಗಿದೆ– ಸುಮಾರು ಶೇ. 70 ಕ್ಕಿಂತ ಹೆಚ್ಚು ಬ್ರಾಹ್ಮಣ, ಕ್ಷತ್ರಿಯ, ರಜಪೂತ, ವೈಶ್ಯ ಮೊದಲಾದ ಮೇಲ್ಜಾತಿಗಳು, ಒಂದು ಅಧ್ಯಯನದಲ್ಲಿ ಶೇ.48ರಷ್ಟು ಉದ್ಯೋಗಿಗಳು ಬ್ರಾಹ್ಮಣರು. ದಲಿತರು ಶೇ. 1, ಹಿಂದುಳಿದ ಜಾತಿಗಳು ಶೇ. 3, ಮುಸ್ಲಿಮರು ಶೇ.2, ಭೂ ಒಡೆತನ ಪಡೆದ ಜಾತಿಗಳು ಶೇ. 21. ಇನ್ನು ಇತ್ತೀಚೆಗೆ ವ್ಯಾಪಕವಾಗಿ ಬೆಳೆದ ಮಾಧ್ಯಮರಂಗದ ಬಗ್ಗೆ ಅಧ್ಯಯನಗಳು ಕಡಿಮೆಯಾದರೂ, ಅದರ ಮೇಲ್‌ಜಾತಿ ಪ್ರಾಧಾನ್ಯದ ಬಗ್ಗೆ ಕೆಲವು ಉಲ್ಲೇಖಗಳಿವೆ. ಇಂತಹ ಅನೇಕ ರಂಗಗಳಲ್ಲಿ ಹಿಂದೆಂದೂ ಊಹಿಸಲಾಗದ ದೊಡ್ಡ ಪ್ರಮಾಣದ ಸಂಬಳ, ಸಾರಿಗೆಗಳನ್ನು ಪಡೆದು ಇದು ತಮ್ಮ ವಿಶೇಷ ಮೆರಿಟ್‌ನ ಫಲ ಎಂದು ಅಹಂಕಾರವನ್ನು ಪ್ರದರ್ಶಿಸುತ್ತಿವೆ.

ದಲಿತರು, ಕೆಳಜಾತಿಗಳು ಇರುವ ಸ್ವಲ್ಪ ಸರ್ಕಾರೀ ಕೆಲಸಗಳಲ್ಲಿನ ಮೀಸಲಾತಿಗಾಗಿ ಸ್ಪರ್ಧಿಸುತ್ತಾ ತಮ್ಮ ತಮ್ಮಲ್ಲೇ ಬಡಿದಾಡುವ ಸ್ಥಿತಿಯನ್ನು ತಲುಪಿವೆ. ಮೀಸಲಾತಿ ಉದ್ಯೋಗಗಳನ್ನು ಪಡೆಯಲೂ ಅಪಾರ ಲಂಚ ತೆರುವ ಅದಕ್ಕಾಗಿ ತಮ್ಮ ಅಲ್ಪ ಸ್ವಲ್ಪ ಸ್ವತ್ತುಗಳನ್ನು ಕಳೆದುಕೊಳ್ಳುವ ಸಂಕಟ–ಕ್ಕೆ ಒಳಗಾಗಿವೆ. ಅನೇಕ ಸರ್ಕಾರೀ ರಂಗದ ಹುದ್ದೆಗಳು ಇಂದು ಹೊರಗುತ್ತಿಗೆ, ಗುತ್ತಿಗೆ, ಗೌರವ ಸಂಭಾವನೆಯ ಕೆಲಸಗಳು, ಅತಿಥಿ ಕೆಲಸಗಳು, ಸ್ವಯಂ ಸೇವೆ ಎಂಬ ಹೆಸರಿನಲ್ಲಿ ಸರ್ಕಾರದ ಸಂಬಳ ಸಾರಿಗೆಗಳಿಂದ ವಂಚಿಸಲ್ಪಡುತ್ತಿವೆ. ಮತ್ತು ಇಂತಹ ಲಕ್ಷಾಂತರ ಉದ್ಯೋಗಗಳಲ್ಲಿ ಅವು ಸರ್ಕಾರದ ಯೋಜನೆಗಳಾಗಿದ್ದರೂ ಮೀಸಲಾತಿಯ ಸೌಲಭ್ಯವಿಲ್ಲದೆ ದಲಿತರು ಕೆಳಜಾತಿಗಳು ಅವಕಾಶ ಕಳೆದುಕೊಳ್ಳುತ್ತಿದ್ದಾರೆ. ಈ ಹೊರಗುತ್ತಿಗೆಗಳನ್ನು ಪಡೆದ ಮೇಲ್ಜಾತಿ, ಮೇಲ್ವರ್ಗಗಳ ಜನರು ತಮಗೆ ಬೇಕಾದ– ಹೆಚ್ಚಾಗಿ ತಮ್ಮ ಬಂ ಧು ಬಾಂಧವರು ತಮ್ಮ ಜಾತಿಗಳ ಜನರನ್ನು ತುಂಬಿಕೊಳ್ಳಲು ಸುವರ್ಣಾವಕಾಶವೆಂಬಂತೆ ಬಳಸಿಕೊಳ್ಳುತ್ತಿದ್ದಾರೆ.

ಆಳುವ ಪಕ್ಷಗಳು ಸಾಮಾಜಿಕ ನ್ಯಾಯದ ಬಗ್ಗೆ ಅಬ್ಬರದ ಧ್ವನಿಯೆತ್ತುತ್ತಲೇ ಸಾಮಾಜಿಕ ಅಸಮಾನತೆಯನ್ನು ಉಲ್ಬಣಗೊಳಿಸುವ ಈ ನೀತಿಗಳನ್ನು ಅನುಸರಿಸುತ್ತಿದ್ದಾರೆ. ಸರ್ಕಾರೀ ವಲಯದಿಂದ ತಪ್ಪಿಸಿ ಖಾಸಗಿ ರಂಗಕ್ಕೆ ಆರ್ಥಿಕತೆಯ ಮುಖ್ಯ ನಾಳಗಳನ್ನು ಒಪ್ಪಿಸಿರುವ ಹಿನ್ನೆಲೆಯಲ್ಲಿ ಖಾಸಗೀರಂಗದಲ್ಲಿ ಮೀಸಲಾತಿ ನೀಡುವ ಅವಶ್ಯಕತೆ ಉಂಟಾಗಿದೆ. ಈ ಬಗೆಗಿನ ಕೂಗು ಎದ್ದ ತರುವಾಯ ಸ್ವತಃ ಇಂದಿನ ಪ್ರಧಾನಿಯವರು ಖಾಸಗೀ ರಂಗದಲ್ಲಿ ಮೀಸಲಾತಿಯ ಪ್ರಸ್ತಾಪ ಮಾಡಿದರು. ಖಾಸಗೀ ರಂಗದಿಂದ ಧಿಕ್ಕಾರದ ದನಿ ಬಂದ ಕೂಡಲೆ ಅಷ್ಟೇ ವೇಗವಾಗಿ ಅವರ ಸ್ವರ ಅಡಗಿ ಹೋಯಿತು. ಅವರ ಸ್ವರ ಅಡಗಿ ಹೋಯಿತು ಎಂಬುದು ಸಹಜವಾದದ್ದೇ.

ಮೀಸಲಾತಿಯ ಕೂಗು ಮತ್ತೆ ಮೊಳಗಬೇಕಾಗಿರುವ ಸಮಯದಲ್ಲಿ ಮೆರಿಟ್ ಮತ್ತು ಮೀಸಲಾತಿಯ ಪ್ರಶ್ನೆ

ಆದರೆ ಖಾಸಗೀಕರಣದಿಂದಾಗಿ ಲಕ್ಷಾಂತರ ನೌಕರಿಗಳನ್ನು ಕಳೆದುಕೊಳ್ಳುತ್ತಿರುವ ದಲಿತರ, ಕೆಳಜಾತಿಗಳ ಬಡ ಯುವಜನರು ಇವರು ತಮ್ಮ ಗಟ್ಟಿ ದನಿಯನ್ನೆತ್ತದೆ ಏಕೆ ಕೇವಲ



ಗೊಣಗುವುದರಲ್ಲಿಯೇ ತೃಪ್ತರಾಗಿದ್ದಾರೆ ? ಈಗಲಾದರೂ ಎಲ್ಲ ದಲಿತ, ಕೆಳ ಜಾತಿಗಳ ಜನರೂ ಒಗ್ಗೂಡಿ ಖಾಸಗಿರಂಗದಲ್ಲಿ ಮೀಸಲಾತಿಗಾಗಿ ಪ್ರಬಲವಾದ ಹೋರಾಟ ನಡೆಸಬೇಕಾಗಿದೆ. ಇದು ದಲಿತರ ಪ್ರಶ್ನೆ ಮಾತ್ರವಲ್ಲ ಪ್ರಜಾಸತ್ತಾತ್ಮಕ ಮನೋಭಾವದ ಎಲ್ಲ ಜನರ ಪ್ರಶ್ನೆಯೂ ಆಗಬೇಕಿದೆ

ಮೀಸಲಾತಿ ತಂದರೆ ದಕ್ಷತೆ ಹಾಳಾಗುತ್ತದೆ

ಖಾಸಗಿ ರಂಗದ ಲಾಭಕೋರರು ಈ ರಂಗದಲ್ಲಿ ಮೀಸಲಾತಿ ತಂದರೆ ದಕ್ಷತೆ, ಎಫಿಷಿಯೆನ್ಸಿ ಮುಳುಗಿ ಹೋಗುತ್ತದೆ, ಉದ್ದಿಮೆಗಳು ನಷ್ಟಕ್ಕೊಳಗಾಗುತ್ತವೆ. ಮೆರಿಟ್ ಆಧಾರದ ಮೇಲೆ ನೇಮಕ ಮಾಡಿದರೆ ಮಾತ್ರ ಅವು ಯಶಸ್ವಿಯಾಗುತ್ತವೆ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಈ ವಾದಕ್ಕೆ ಸಮರ್ಥವಾದ ಪ್ರತ್ಯುತ್ತರ ನೀಡಬೇಕಾಗಿದೆ.

ಈ ಬಗ್ಗೆ ಬಹಳ ಸಾರಿ ದಲಿತ, ಹಿಂದುಳಿದ ಜಾತಿಯ ನಾಯಕರೂ ಕೂಡ ಒಂದು ರೀತಿ ಹಿಂಜರಿಕೆಯ ಉತ್ತರ ನೀಡುವುದನ್ನು ನೋಡುತ್ತಿದ್ದೇವೆ. ದಲಿತರಿಗೆ ಸಾವಿರಾರು ವರ್ಷಗಳಿಂದ ಅನ್ಯಾಯವಾಗಿದೆ ಅವರಿಗೆ ಈಗಲಾದರೂ ನ್ಯಾಯ ಒದಗಿಸಲು ಮೀಸಲಾತಿ ಅಗತ್ಯ. ಇದ–ರಿಂದ ಕೆಲ ಮೇಲ್ಜಾತಿ ಜನರಿಗೆ ಶಿಕ್ಷಣ, ಉದ್ಯೋಗಗಳಲ್ಲಿ ಅನ್ಯಾಯವಾದರೂ ಸಹಿಸಿಕೊಳ್ಳಬೇಕು. ದಲಿತರು, ಕೆಳಜಾತಿಗಳವರೂ ಕೂಡ ಮೇಲ್ಜಾತಿಯವರಷ್ಟೇ ಬುದ್ಧಿವಂತರೇ. ಆದರೆ ಶಿಕ್ಷಣದ ಸೌಲಭ್ಯಗಳಲ್ಲಿ ಅಸಮಾನತೆಯಿಂದಾಗಿ ಅವರಿಗೆ ಕಡಿಮೆ ಅಂಕಗಳು ಬರುತ್ತವೆ. ಅದನ್ನು ಸರಿದೂಗಿಸಲು ಮೀಸಲಾತಿ ಬೇಕು. ಹೀಗೆ.

ಕೇವಲ ಹತ್ತು ವರ್ಷ ಮಾತ್ರ ಮೀಸಲಾತಿ ಸಾಕು ಎಂದು ಅಂಬೇಡ್ಕರ್‌ರವರು ಪ್ರತಿಪಾದಿಸಿದಾಗ ಮೀಸಲಾತಿ ಒಂದು ತಾತ್ಕಾಲಿಕ ಅನ್ಯಾಯ, ಆದಷ್ಟೂ ಬೇಗ ಮೀಸಲಾತಿ ಅವಶ್ಯವಿಲ್ಲದಂತೆ ಮಾಡಬೇಕು ಎಂಬ ಭಾವನೆ ಅವರಿಗೂ ಇತ್ತೇ ಅಥವಾ ಸಂವಿಧಾನ ಸಭೆಯ ಮೇಲ್ಜಾತಿ ವರ್ಗ ಮೀಸಲಾತಿಯನ್ನು ಒಪ್ಪಿಕೊಳ್ಳಲೆಂದು ಹತ್ತು ವರ್ಷದ ಮಿತಿಗೆ ಒಪ್ಪಿಕೊಂಡರೋ ? ಗೊತ್ತಿಲ್ಲ.

ಜಾತಿ ವ್ಯವಸ್ಥೆಯೇ ಮೀಸಲಾತಿ. ಇಂದಿನ ಮೀಸಲಾತಿ ಎಂಬುದು ಅದನ್ನು ತೊಡೆಯುವ ಸಾಧನ

ಆದರೆ ನಮ್ಮ ಉತ್ತರಗಳು ಯಾವುದೇ ಹಿಂಜರಿಕೆಯಿಲ್ಲದ ಎದುರುತ್ತರಗಳಾಗಿರಬೇಕು.

ಪುಟ 4 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಾರಸ್ವಾದಕ್ಕೀಯ

ಧರ್ಮಸ್ಥಳದ ಎಲ್ಲ ಅತ್ಯಾಚಾರಗಳು, ಅಸಹಜ ಸಾವುಗಳು ಮತ್ತು ಭೂ ಅವ್ಯವಹಾರಗಳು ಸಿಬಿಐ ತನಿಖೆಗೆ ಒಳಪಡಲಿ

ಒಂದು ವರ್ಷದ ಹಿಂದೆ ಅಪಹರಣ, ಅತ್ಯಾಚಾರಕ್ಕೀಡಾಗಿ ಕೊಲೆಯಾದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ವಿದ್ಯಾರ್ಥಿನಿ ಸೌಜನ್ಯಾಳಿಗೆ ನ್ಯಾಯ ನೀಡಲು ಒತ್ತಾಯಿಸಿ ಎದ್ದಿರುವ ಕೂಗು ಒಂದು ರಾಜ್ಯವ್ಯಾಪಿ ಆಂದೋಲನದ ಸ್ವರೂಪವನ್ನು ಪಡೆಯುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಅದರಲ್ಲೂ ಮುಖ್ಯವಾಗಿ ಬೆಳ್ತಂಗಡಿ ತಾಲೂಕಿನಲ್ಲಿ ಅದು ಕಡಲಲ್ಲಿ ಎದ್ದಿರುವ ತೂಫಾನಿನ ಅಲೆಯಂತೆ ಭಾಸವಾಗುತ್ತಿದೆ. ಗ್ರಾಮ ಗ್ರಾಮಗಳಿಂದ ಜನಗಳು ಕಿತ್ತೆದ್ದು ಬರುವುದನ್ನು, ಪ್ರತಿಭಟನೆಗಳಲ್ಲಿ ಭಾಗವಹಿಸುವುದನ್ನು ಗಮನಿಸಿದರೆ ಅವರು ಬಹು ದಿನಗಳಿಂದ ಇಂತಹ ಒಂದು ಸಂದರ್ಭಕ್ಕಾಗಿ ಕಾಯುತ್ತಿದ್ದರೇನೋ ಎಂದು ಕಾಣುತ್ತದೆ.

ಸೌಜನ್ಯಾ ಪ್ರಕರಣದ ಕುರಿತು ಸಿಐಡಿ ಮಧ್ಯಂತರ ವರದಿ ಹೊರಬಿದ್ದ ನಂತರವಂತೂ ಜನರ ಆಕ್ರೋಶ ಹೆಚ್ಚಾಗಿದೆ. ಇದೊಂದು 'ಸುಳ್ಳಿನ ಕಂತೆ' ಎಂದು ಆಕ್ಷೇಪ ವ್ಯಕ್ತಪಡಿಸಿರುವ ವಿವಿಧ ಸಂಘಟನೆಗಳು ಇದನ್ನು ಸಾರಾಸಗಟಾಗಿ ಸರ್ಕಾರ ತಿರಸ್ಕರಿಸಿ ಕೂಡಲೇ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಆಗ್ರಹ ಪಡಿಸುತ್ತಿವೆ.

ಆರಂಭದಿಂದಲೇ ಪೊಲೀಸರು ಅಪರಾಧಿಗಳ ರಕ್ಷಣೆಗೆ ಟೊಂಕ ಕಟ್ಟಿ ನಿಂತಿದ್ದಾರೆ. ಸಾಕ್ಷ್ಯಾಧಾರಗಳನ್ನು ನಾಶಪಡಿಸಲು ಪೊಲೀಸರೇ ನೆರವಾಗಿದ್ದಾರೆ. ಅದಕ್ಕೆ ತಕ್ಕಂತೆ, ಸಿಐಡಿ ವರದಿಯನ್ನು ಸಿದ್ಧಪಡಿಸಲಾಗಿದೆ. ಸೌಜನ್ಯಾಳ ಮೇಲೆ ಅತ್ಯಾಚಾರವೇ ನಡೆದಿಲ್ಲ ಎಂದು ವರದಿಯು ಪ್ರಕರಣವನ್ನೇ ತಿರುಚುವ ಪ್ರಯತ್ನ ಮಾಡಿದೆ. ಆದರೆ ಈ ವರದಿಯನ್ನು ಸೌಜನ್ಯಾಳ ಹೆತ್ತವರಾಗಲಿ, ನ್ಯಾಯಕ್ಕಾಗಿ ಹೋರಾಟಕ್ಕಿಳಿದಿರುವ ಸಂಘಟನೆಗಳಾಗಲಿ, ಉಜಿರೆ, ಧರ್ಮಸ್ಥಳ ಪ್ರದೇಶದ ಜನರಾಗಲಿ ಒಪ್ಪಿಕೊಳ್ಳಲು ಸಿದ್ಧರಿಲ್ಲ. ಹೀಗಾಗಿ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂಬ ಕೂಗು ಗಟ್ಟಿಯಾಗಿದೆ.

ಇದನ್ನು ಗಮನಿಸಿದ ಕಾಂಗ್ರೆಸ್ ಮಂತ್ರಿಗಳು ಮತ್ತು ನಾಯಕರು ತಮ್ಮ ಧಾಟಿಯನ್ನು ಬದಲಾಯಿಸಿ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡಬೇಕೆಂದು ಹೇಳಿಕೆ ನೀಡುತ್ತಿದ್ದಾರೆ. ಸ್ವತಃ ಧರ್ಮಸ್ಥಳದ ಹೆಗಡೆಯವರು ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆಯಬೇಕಾದ ಪರಿಸ್ಥಿತಿ ಉಂಟಾಗಿದೆ.

ಆದರೆ, ಧರ್ಮಸ್ಥಳ ಮತ್ತು ಸುತ್ತಲಿನ ಗ್ರಾಮಗಳ ಜನತೆ ಇಂದು ಸೌಜನ್ಯಾ ಪ್ರಕರಣ ಒಂದನ್ನು ಮಾತ್ರ ಸಿಬಿಐ ತನಿಖೆಗೆ ಒಪ್ಪಿಸುವಂತೆ ಒತ್ತಾಯಿಸುತ್ತಿಲ್ಲ. ಕಳೆದ ಎರಡು, ಮೂರು ದಶಕಗಳಲ್ಲಿ ಇಲ್ಲಿ 400 ಕ್ಕೂ ಹೆಚ್ಚು ಅಸಹಜ ಸಾವುಗಳು, ಕೊಲೆಗಳು, ಅತ್ಯಾಚಾರಗಳು ಸಂಭವಿಸಿವೆ. ಇವುಗಳ ಪೈಕಿ ಬಹುತೇಕ ಪ್ರಕರಣಗಳಲ್ಲಿ ಯಾವ ತನಿಖೆಯೂ ನಡೆದಿಲ್ಲ. ಕೆಲವು ಪ್ರಕರಣಗಳಲ್ಲಿ ಕಾಟಾಚಾರದ ತನಿಖೆಯನ್ನು ಕೈಗೊಂಡು 'ಪತ್ತೆಯಾಗದ ಪ್ರಕರಣ' ಎಂದು ಪ್ರಕರಣಗಳನ್ನು ಮುಚ್ಚಿ ಹಾಕುತ್ತಾ ಬರಲಾಗಿದೆ. ಹೀಗಾಗಿ, 400 ಕ್ಕೂ ಹೆಚ್ಚು ಕುಟುಂಬಗಳಿಗೆ ಇಲ್ಲಿ ಅನ್ಯಾಯವಾಗಿದೆ. ಅವರೆಲ್ಲರೂ ನ್ಯಾಯಕ್ಕಾಗಿ ಕಾಯುತ್ತಿದ್ದಾರೆ. ಸೌಜನ್ಯ ಅವರೆಲ್ಲರ ನೋವಿನ ಸಂಕೇತವಾಗಿದ್ದಾರೆ. ಇದುವರೆಗೆ ಭಯಭೀತಿಯಿಂದ ಧೃತಿಗೆಟ್ಟ ಅವರನ್ನು ಈಗ ಯಾರೂ ತಡೆಯುವಂತಿಲ್ಲ.


ಅದೆಷ್ಟೋ ಜನ ದಲಿತರು, ಬಡ ರೈತರು ತಮ್ಮ ಭೂಮಿಯನ್ನು ಕಳೆದುಕೊಂಡಿದ್ದಾರೆ. ಅದೆಷ್ಟೋ ಜನ ಬಡ ಗೇಣಿದಾರರು ಭೂಮಿಯ ಹಕ್ಕಿನಿಂದ ವಂಚಿತರಾಗಿದ್ದಾರೆ. ಅವರೂ ಸಹ ನ್ಯಾಯಕ್ಕಾಗಿ ಆಗ್ರಹಿಸುತ್ತಿದ್ದಾರೆ. ಅವರೆಲ್ಲರಿಗೂ ನ್ಯಾಯ ಸಿಗುವಂತಾಗಲೂ ಕಳೆದ 30–40 ವರ್ಷಗಳಿಂದ ಇಲ್ಲಿ ಮುಚ್ಚಿಹಾಕಲ್ಪಟ್ಟ ಎಲ್ಲ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂಬುದು ರಾಜ್ಯದ ಜನತೆಯ ಒಕ್ಕೊರಲಿನ ಒತ್ತಾಯ ಆಗಬೇಕಾಗಿದೆ. ಸಿಬಿಐ ತನಿಖೆಯಿಂದ ಎಲ್ಲ ಸತ್ಯ ಹೊರಬರುತ್ತದೆ ಎಂಬ ಗ್ಯಾರಂಟಿ ಏನೂ ಇಲ್ಲ. ಆದಾಗ್ಯೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದೇ ಹಸ್ತಕ್ಷೇಪ ಮಾಡದೆ ಸ್ವತಂತ್ರವಾದ ಮತ್ತು ಸಮಗ್ರವಾದ ತನಿಖೆಗೆ ಅವಕಾಶ ಮಾಡಿಕೊಟ್ಟರೆ ಸೌಜನ್ಯಾಳ ಹೆತ್ತವರೂ ಸೇರಿದಂತೆ ನೂರಾರು ಕುಟುಂಬಗಳಿಗೆ ನ್ಯಾಯ ದೊರೆಯುವ ಸಾಧ್ಯತೆ ಇದೆ. ●

'ಸ್ಫೋಟ' – ಅಪರಾಧಗಳು ಮತ್ತು ತೊಲಗಲೇಬೇಕಾದ ಪೂರ್ವಾಗ್ರಹಗಳು

ಅದು ಕೋಮುಗಲಭೆಯೋ, ಭಯೋತ್ಪಾದನೆಯೋ– 'ಹಂಗಾದ್ರೆ ಅವರೇ ಇರ್ತಾರೆ! ಇನ್ಯಾರು?' ಎನ್ನುವ ಮಾತುಗಳ ಹಿಂದೆ ಇರುವುದೇನು? ಅವರು ಎಂದರೆ ಯಾರು?

ಅಮೇರಿಕಾದ ಇಲಿನಾಯ್ ವಿಶ್ವವಿದ್ಯಾಲಯದಲ್ಲಿ ವಿಜ್ಞಾನದ ಸಂಶೋಧನೆಯಲ್ಲಿ ಮಗ ಡಾಕ್ಟರೇಟ್ ಪದವಿ ಪಡೆಯಲಿರುವ ಸಂದರ್ಭಕ್ಕೆ ಸಾಕ್ಷಿಯಾಗಿ ಸಂಭ್ರಮಿಸಲು ತೆರಳಲಿದ್ದ ಅಪ್ಪನಿಗೆ ಮಗನ ಮಾತು ಕೇಳಿ ಕ್ಷಣ ಕಾಲ ಏನು ಮಾಡುವುದು ಎಂದು ತಿಳಿಯದ ಸ್ಥಿತಿ!

'ಅಪ್ಪಾ ನೀನು ಇಲ್ಲಿಗೆ ಬಂದಾಗ ಪೈಜಾಮ ಕುರ್ತಾ ಹಾಕಬೇಡ, ಅವನ್ನು ಇಲ್ಲಿಗೆ ತರಲೇಬೇಡ'. 'ಯಾಕೆ' ಎಂದು ತಿಳಿಯಲು ಪ್ರಪಂಚದ ಜ್ಞಾನವಿದ್ದ ಬುದ್ಧಿಜೀವಿ ಅಪ್ಪನಿಗೆ ಹೆಚ್ಚು ಕಾಲ ಹಿಡಿಯಲಿಲ್ಲ. 'ಅಮೇರಿಕಾ ಒಂದು ಹುಚ್ಚರ ಸಂತೆ' ಎಂದೇ ಭಾವಿಸಿದ್ದ ಅಪ್ಪನಿಗೆ ಅರ್ಥವಾದದ್ದು ಅಮೇರಿಕಾದಲ್ಲಿ ಪೈಜಾಮ–ಕುರ್ತಾ ಹಾಕುವವರು ಮುಸ್ಲಿಮರೇ ಇರಬೇಕು ಎಂಬ ಸರಳ ವ್ಯಾಖ್ಯಾನ ವ್ಯಾಪಕ ಅಂತ! ಸಾಕಲ್ಲ ಮುಸ್ಲಿಮರು ಎಂದರೆ ಭಯೋತ್ಪಾದಕರು ತಾನೇ? ಆದ್ದರಿಂದ ಅಂತಹ ಹಣೆ ಪಟ್ಟಿ, ಅನುಮಾನಗಳಿಗೆ ನಾವ್ಯಾಕೆ ಆಹಾರವಾಗಬೇಕು? ಏರ್‌ಪೋರ್ಟ್‌ನಿಂದ ಆರಂಭಗೊಂಡು ಹೋದಲ್ಲೆಲ್ಲಾ ತನಿಖೆಯೆಂಬ ತಿವಿತದ ಹಿಂಸೆಯನ್ನು ಯಾಕೆ ಅನುಭವಿಸಬೇಕು? ಹೀಗಾಗಿ ಜೀನ್ಸ್ ಪ್ಯಾಂಟು, ಟಿ ಶರ್ಟ್ ಮಾಲ್‌ನಿಂದ ಬ್ಯಾಗು ಸೇರಿತು.



ಸೆಪ್ಟಂಬರ್ /11ರ ಘಟನೆಯಾದ ಮೇಲೆ ಅಮೇರಿಕಾದ ಆಳುವವರು ಹರಿಯಬಿಟ್ಟ ಭಯೋತ್ಪಾದಕತೆಯ ವ್ಯಾಖ್ಯಾನಕ್ಕೆ ಅಲ್ಲಿನ ಜನ, ಜಗತ್ತಿನ ಜನರೇ ಬಲಿ ಬಿದ್ದಿದ್ದಾರೆ. 'ಮುಸ್ಲಿಮರೆಲ್ಲಾ ಭಯೋತ್ಪಾದಕರಲ್ಲ, (ಆಹಾ! ಎಂಥಾ ಉದಾರತೆ) ಆದರೆ ಭಯೋತ್ಪಾದಕರೆಲ್ಲಾ ಮುಸ್ಲಿಮರೇ' ಎಂಬ ಭಯೋತ್ಪಾದಕ ಅಮೇರಿಕಾದ ಆಕ್ರಮಣಕಾರೀ ಯುದ್ಧ ಸಿದ್ಧಾಂತವೇ ಇಂದು ಅವರ ನೆಚ್ಚಿನ ನೆಂಟರಾದ ದೇಶಗಳಲ್ಲಿಯೂ ಅನುರಣಿಸುತ್ತಿದೆ. ಅವರ ಬಾಲ ಬಡುಕರೆಲ್ಲಾ ಅದನ್ನು ಸ್ವರ್ಗದಿಂದ ಸಿಕ್ಕ ಸಿದ್ಧಾಂತದಂತೆ ಪುನರುಚ್ಚಾರ ಮಾಡುತ್ತಿದ್ದಾರೆ. ಇದನ್ನು ನಂಬಿಸಲು ಮಾಧ್ಯಮಗಳೆಂಬ ತುತ್ತೂರಿಗಳು ಕರ್ಕಶ ನಾದ ಊದುತ್ತಲೇ ಇವೆ. ಭಾರತದಲ್ಲಿಯೂ ಇದೇ ಹಾಡು ಹಾಡುವವರಿಗೇನು ಕಡಿಮೆ ಇಲ್ಲ. ಸಂಘಪರಿವಾರವೋ ಅದು ಹೇಳಿ ಕೇಳಿ ಅಮೇರಿಕಾದಂತಹ ಸಾಮ್ರಾಜ್ಯಶಾಹಿಗಳ ರಾಜಕೀಯ ಹಿತಾಸಕ್ತಿಗಳಿಗೆ, ದೇಶೀಯ ಕಾರ್ಪೋರೇಟ್ ಕಂಪನಿಗಳ, ಪಾಳೇಗಾರಿ ಪ್ರಭುಗಳಿಗೆ ವಿನಮ್ರ ಸೇವಕರಾಗಿದೆ ಬಿಡಿ.



ಧರ್ಮಸ್ಥಳ ಮತ್ತು ಸುತ್ತಮುತ್ತಲ 462 ಅಸಹಜ ಸಾವುಗಳತನಿಖೆ ಸಿಬಿಐನಿಂದ ಆಗಬೇಕೆಂದು ಬೆಳ್ತಂಗಡಿಯಲ್ಲಿ ಎಸ್‌ಎಫ್‌ಐ ನೇತೃತ್ವದಲ್ಲಿ ನಡೆದ ಸಹಸ್ರಾರು ವಿದ್ಯಾರ್ಥಿಗಳ ಬೃಹತ್ ಪ್ರತಿಭಟನೆ

ಆದರೆ ಇಂತಹ ವಾದವನ್ನು ಪ್ರಜಾಸತ್ತಾತ್ಮಕ ಸಂವಿಧಾನ ಪಾಲಿಸಬೇಕಾದ ಸರಕಾರದ ಸಂಸ್ಥೆಗಳೇ ನಿರ್ದೇಶನವನ್ನಾಗಿ ಪರಿಪಾಲಿಸತೊಡಗಿದರೆ? ಎಂತಹ ಅನಾಹುತ ಆದೀತು?

'ನಾವು ಕಸ್ಟಡಿಗೆಂದು ಪೋಲೀಸ್ ಠಾಣೆಯಲ್ಲಿರಿಸಿದ್ದ 16 ದಿನಗಳೂ ಚಿತ್ರಹಿಂಸೆ ಅನುಭವಿಸಿದ್ದಾಯ್ತು. ನಮ್ಮನ್ನು ನ್ಯಾಯಾಲಯವು ಜೈಲಿಗೆ ಕಳುಹಿಸಿದಾಗ ಒಂದಿಷ್ಟು ನೆಮ್ಮದಿಯಿಂದ ನಿದ್ದೆ ಮಾಡಬಹುದಲ್ಲಾ ಅಂತಾ ನಿಟ್ಟುಸಿರು ಬಿಟ್ಟೆವು. ಆದರೆ ಆರು ತಿಂಗಳ ಕಾಲ ಅಲ್ಲಿಯೇ ಕೊಳೆತ ನಮ್ಮ ಸ್ಥಿತಿ, ಪಟ್ಟ ಪಾಡು, ಅನುಭವಿಸಿದ ಹಿಂಸೆ ನರಕಕ್ಕಿಂತಲೂ ಹೀನ'. ಹೀಗೆ ಹೇಳುವಾಗ ಭಯೋತ್ಪಾದನೆಯ ಆರೋಪದ ಮೇಲೆ ಜೈಲು ಸೇರಿದ್ದ ಪೀರ್ ಮೊಹಿದ್ದೀನ್ ನಾಲಿಗೆಯಲ್ಲಿ ಕಂಪನ.

ಇದೇ 2013 ಎಪ್ರಿಲ್ 17ರಂದು (ವಿಧಾನಸಭಾ ಚುನಾವಣೆಯ ಪ್ರಕ್ರಿಯೆ ನಡೆದಿದ್ದ ಅವಧಿ) ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಬಿಜೆಪಿ ರಾಜ್ಯ ಕಛೇರಿಯ ಬಳಿ ಆದ ಬಾಂಬ್ ಸ್ಫೋಟದ ಪ್ರಕರಣದಲ್ಲಿ ಭಾಗಿಯಾದ ಆರೋಪದಿಂದ ಬಂಧಿತರಾದ 17 ಜನರಲ್ಲಿ ಪೀರ್ ಮೊಹಿದ್ದೀನ್, ಸದ್ದಾಂ ಹುಸೇನ್, ತೆಂಕಾಸಿ ಹನೀಫಾ ಎನ್ನುವವರ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದಿರುವುದರಿಂದ ನಿರ್ದೋಷಿಗಳೆಂದು ಖುಲಾಸೆಯಾಗಿದ್ದಾರೆ. ಮೊಹಿದ್ದೀನ್ ಬೆಂಗಳೂರಿನ ಟ್ಯಾನರಿ ರೋಡ್‌ನಲ್ಲಿ ಚಹಾ ಪುಡಿ ಮಾರುವ ಒಬ್ಬ ಸಣ್ಣ ವ್ಯಾಪಾರಿ. ಭಯೋತ್ಪಾದಕರೊಂದಿಗೆ ನಂಟಿರುವ ಶಂಕೆಯ ಮೇಲೆ ಎಪ್ರಿಲ್ 19ರಂದು ಚೈನ್ನೈನ ಬಜಾರಿನಲ್ಲಿರುವಾಗ ಪೋಲೀಸರಿಂದ ಬಂಧಿತನಾಗಿದ್ದ. ಆರು ತಿಂಗಳ ಚಿತ್ರ ಹಿಂಸೆಯನ್ನು ಈ ಎಲ್ಲರೂ ಅನುಭವಿಸಿದ್ದಾರೆ.

ಈ ಪ್ರಕರಣ ಎಲ್ಲಾ ನಾಗರೀಕರನ್ನೂ ಚಿಂತೆಗೀಡು ಮಾಡುವಂತಹುದು. ಎಲ್ಲೇ ಸ್ಫೋಟ, ಭಯೋತ್ಪಾದನೆ ಕೃತ್ಯಗಳು ಸಂಭವಿಸಿದ ಕೂಡಲೇ ತಕ್ಷಣ ಹೊರ ಬರುವ ಮಾತು ಅವರು ಆದರೆ ಮುಸ್ಲಿಂ ಭಯೋತ್ಪಾದಕರೇ ಇರಬೇಕು ಎಂದು. (ಸಂಜೋತ ಎಕ್ಸ್‌ಪ್ರೆಸ್ ರೈಲು ಸ್ಫೋಟ, ಹೈದರಾಬಾದ್‌ನ ಮೆಕ್ಕಾ ಮಸೀದಿ ಸ್ಫೋಟಗಳು ನಡೆದಾಗಲೂ ಅಮಾಯಕ ಮುಸ್ಲಿಂ ಯುವಜನರನ್ನು ಬಂಧಿಸಿ ಹಿಂಸಿಸಲಾಗಿತ್ತು. ಕೊನೆಗೆ ಪ್ರಗ್ಯಾಸಿಂಗ್–ಕರ್ನಲ್ ಪುರೋಹಿತ್ ಮುಂತಾದ ನಿಜವಾದ ಅಪರಾಧಿಗಳ ಬಂಧನವಾದ ಮೇಲೂ ವರ್ಷಗಟ್ಟಲೇ ಬಿಟ್ಟಿರಲಿಲ್ಲ.) ಆಳ ತನಿಖೆ ನಡೆಸಿ ಕ್ರಮ ವಹಿಸಬೇಕಾದ ಪೋಲೀಸ್ ಇಲಾಖೆಯೇ ಈ ಪೂರ್ವಗ್ರಹಕ್ಕೆ ಬಲಿಯಾಗಿದೆ. ಇದು ಕೇವಲ ಒಂದು ಪ್ರಕರಣವಲ್ಲ. ರಾಜ್ಯದಲ್ಲಿಯೂ ಇಂತಹ ಹತ್ತಾರು ಪ್ರಕರಣಗಳಿವೆ. ಸುಮಾರು ಎರಡು ವರುಷಗಳ ಹಿಂದೆ ಬಿಜೆಪಿ ನಾಯಕರಾದ ಅನಂತಕುಮಾರ್, ಪ್ರಹ್ಲಾದ ಜೋಷಿ, ಈಶ್ವರಪ್ಪ, ಜಗದೀಶ್‌ಶೆಟ್ಟರ್, ಸಂಕೇಶ್ವರ್‌ರವರನ್ನು ಹತ್ಯೆಗೈಯ್ಯಲು ಸಂಚು ರೂಪಿಸಲಾಗಿತ್ತೆಂದು ಹುಬ್ಬಳ್ಳಿಯಲ್ಲಿ ಬಂಧಿಸಿದ್ದು ಮುಸ್ಲಿಂ ಯುವಕರನ್ನು, ಅದರಲ್ಲಿ ಡೆಕನ್ ಹೆರಾಲ್ಡ್ ಪತ್ರಿಕೆಯ ವರದಿಗಾರನನ್ನೂ ಒಳಗೊಳಿಸಲಾಗಿತ್ತು. ಅಪಾರ ಹಿಂಸೆ ಅನುಭವಿಸಿದ್ದೂ ಆಯ್ತು. ನಂತರ ಯಾವುದೇ ಸಾಕ್ಷ್ಯಾಧಾರಗಳಿಲ್ಲದೇ ಅವರನ್ನೆಲ್ಲಾ ನ್ಯಾಯಾಲಯ ಖುಲಾಸೆಗೊಳಿಸಿತು.

ಪುಟ 4 ಕ್ಕೆ

ಚೋಮನ ದುಡಿ ......

ಪುಟ 2 ರಿಂದ

ನಮ್ಮ ಸಮಾಜದಲ್ಲಿ ಜಾತಿ ವ್ಯವಸ್ಥೆಯೆಂಬುದೇ ಪ್ರತಿಭೆಯನ್ನು ಆಧರಿಸದ, ಹುಟ್ಟಿನ ಆಧಾರದ ಮೇಲೆ ಉದ್ಯೋಗವನ್ನು ನಿಗದಿಪಡಿಸುವ ಅನರ್ಥಕಾರೀ ಮೀಸಲಾತಿ. ಈ ಮೀಸಲಾತಿಯನ್ನು ತೊಡೆಯುವುದೇ ಸಂವಿಧಾನ ಆಧಾರಿತವಾದ ಇಂದಿನ ಮೀಸಲಾತಿಯ ಗುರಿ. ಇಂದಿಗೂ ಜಾತಿ ಬದ್ಧವಾಗಿರುವ ಸಮಾಜದಲ್ಲಿ ಖಾಸಗಿ ಎಂದರೇ ಜಾತಿ ಬದ್ಧ ಮೀಸಲಾತಿಗೆ ಮುಕ್ತ ಅವಕಾಶ ಎಂದರ್ಥ. ಇದ-ಕ್ಕೆ ಅಸಂಖ್ಯ ಉದಾಹರಣೆಗಳನ್ನು ನೀಡಬಹುದು. ರಾಷ್ಟ್ರೀಕರಣಕ್ಕೆ ಮೊದಲು ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ವಿಜಯಾ ಭ್ಯಾಂಕ್, ಕರ್ನಾಟಕ ಬ್ಯಾಂಕ್ ಇತ್ಯಾದಿಗಳ ಉದ್ಯೋಗಿಗಳ ಜಾತಿಯನ್ನು ಗಣತಿ ಮಾಡಿದರೆ ತಾನೆತಾನಾಗಿ ಈ ಸತ್ಯ ಹೊರಬರುತ್ತದೆ. ರಾಷ್ಟ್ರೀಕರಣಗೊಂಡ ಅನೇಕ ದಶಕಗಳ ನಂತರವೂ ಅದೇ ಜಾತಿ ರಚನೆ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಮುಂದುವರಿದಿದೆ ಎನ್ನುವುದು ಅಲ್ಲಿ ಕೆಲಸ ಮಾಡಿದವರ ಅನುಭವ. ಹಾಗೆಯೇ ಮೈಸೂರು ಸಂಸ್ಥಾನದ ಕೆಲ ಮೇಲ್ಜಾತಿ ದಿವಾನರುಗಳ ಕಾಲದಲ್ಲಿ ಬೆಂಗಳೂರಿನ ಕೆಲ ಭಾಗಗಳು ಮೇಲ್ಜಾತಿಗಳವರಿಗೋಸ್ಕರವಾಗಿ ಮೀಸಲಿಡಲ್ಪಟ್ಟವು. ಇಂದಿಗೂ ವಿವಿಧ ಜಾತಿಗಳ ಶ್ರೀಮಂತರ ಹಿಡಿತದಲ್ಲಿರುವ ಶಿಕ್ಷಣ ಸಂಸ್ಥೆಗಳಲ್ಲಿ ಅವರದೇ ಜಾತಿ, ಉಪಜಾತಿಗಳವರ ಮೇಲುಗೈ ಎದ್ದು ಕಾಣುತ್ತದೆ.

ಹೀಗೆ ಜಾತಿಬದ್ಧ ಮೀಸಲಾತಿಗೆ ಖಾಸಗೀರಂಗ ತುತ್ತಾಗಿರುವುದರಿಂದಲೇ ಅದನ್ನು ತೊಡೆದು ಹಾಕಲು ಸಂವಿಧಾನ ಬದ್ಧ ಮೀಸಲಾತಿ ಅವಶ್ಯವಾಗಿದೆ.

ಯಾವುದು ದಕ್ಷತೆ, ಯಾವುದು ಸಾಮರ್ಥ್ಯ?

ದಕ್ಷತೆ, ಸಾಮರ್ಥ್ಯ ಎಂದರೇನು ಎಂಬುದನ್ನುಮೊದಲು ಸ್ಪಷ್ಟಪಡಿಸಿಕೊಳ್ಳಬೇಕು. ಅದು ಎಲ್ಲ ಕಾಲಕ್ಕೂ, ಎಲ್ಲ ಹುದ್ದೆಗಳಿಗೂ ಒಂದೇ ಆಗಿರುತ್ತದೆಯೇ? ಅಥವಾ ಆಯಾ ಕೆಲಸಕ್ಕೆ ತಕ್ಕಂತೆ ಬೇರೆ ಬೇರೆಯಾಗಿರುತ್ತದೆ-ಯೇ? ಸಾಮ್ರಾಟ, ಬಾದಶಾಹರ ಕಾಲಕ್ಕೆ ಯಾವುದು ದಕ್ಷತೆಯೋ ಅದೇ ಬ್ರಿಟಿಷ್ ದೊರೆಗಳ ಕಾಲದಲ್ಲಿಯೂ ದಕ್ಷತೆ ಎಂದು ಪರಿಗಣಿತವಾಯಿತೇ? ಜ್ಯೋತಿಷ್ಯ ಹೇಳುವುದರ ಸಾಮರ್ಥ್ಯ ರೈಲ್ವೆ, ಕೈಗಾರಿಕೆಗಳಲ್ಲಿ ಸಲ್ಲುತ್ತದೆಯೇ? ಬ್ರಿಟಿಷರ ವಸಹತುಶಾಹೀ ಆಡಳಿತಕ್ಕೆ ಯಾವುದು ದಕ್ಷತೆಯೋ ಅದು ಪ್ರಜಾಪ್ರಭುತ್ವದ ಸಮಯದಲ್ಲಿ ಅಧಿಕಾರಶಾಹೀ ದಬ್ಬಾಳಿಕೆಯೆಂದು ಪರಿಗಣಿತವಾಗುವುದಿಲ್ಲವೇ? ಹೀಗೆ ಹಲವು ಪ್ರಶ್ನೆಗಳು ಏಳುತ್ತವೆ. ಆದರೆ ಇದನ್ನೆಲ್ಲಾ ಮುಚ್ಚಿ ಹಾಕಲು ದಕ್ಷತೆ, ಸಾಮರ್ಥ್ಯಗಳಿಗೆ ಒಂದೇ ಸ್ವರೂಪ. ಅವು ಕೆಲವರಲ್ಲಿ ಮಾತ್ರ ನಿಧಿಯಂತೆ ನಿಕ್ಷೇಪವಾಗಿರುತ್ತದೆ ಎಂದು ಎಲ್ಲರನ್ನೂ ನಂಬಿಸಲು ಅದನ್ನೇ ಆಳುವ ನೀತಿಯನ್ನಾಗಿಸಲು ನಡೆಸಿದ ಪ್ರಯತ್ನಗಳು ಯಶಸ್ವಿಯಾಗಿ ಬಿಟ್ಟಿವೆ. ಏಕೆಂದರೆ ಅದ-ಕ್ಕೆ ಸವಾಲು ಹಾಕುವ ಜನಪರ ಸೊಲ್ಲನ್ನು ಸಕಾರಣವಾಗಿ ಪರಿಣಾಮಕಾರಿಯಾಗಿ ಸಮಾಜದ ಮುಂದೆ ಮಂಡಿಸಿಲ್ಲ.

ಕೆಲವು ಉದಾಹರಣೆಗಳನ್ನು ನೋಡೋಣ.

ಇಂದು ಪ್ರಜಾಪ್ರಭುತ್ವ ವ್ಯವಸ್ಥೆಯ ಸರ್ಕಾರ ವಿವಿಧ ರೀತಿಯ ಕಲ್ಯಾಣ ಕಾರ್ಯಕ್ರಮಗಳಲ್ಲಿ, ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ತೆ-ೂಡಗಿದೆ. ಇವುಗಳಲ್ಲಿ ತೊಡಗಿದ ಅಧಿಕಾರಿಗಳು- ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತಾಲುಕಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ಹೀಗೆ ರಾಜ್ಯ ಮಟ್ಟದ ಪ್ರಧಾನ ಕಾರ್ಯದರ್ಶಿ ಹುದ್ದೆಯವರೆಗೆ ಇರುವ ಅಧಿಕಾರಿಗಳಲ್ಲಿ ಇರಬೇಕಾದ ದಕ್ಷತೆ, ಸಾಮರ್ಥ್ಯ ಯಾವುದು ? ಇಂಗ್ಲಿಷ್, ಆಲ್ಜೀಬ್ರ, ಕ್ಯಾಲ್ಕುಲಸ್, ಭೌತಶಾಸ್ತ್ರ ಇತ್ಯಾದಿಗಳಲ್ಲಿ ತೆಗೆದ ಉತ್ತಮ ಅಂಕಗಳೋ, ಅಥವಾ ಗ್ರಾಮೀಣ ಪರಿಸ್ಥಿತಿಯ ಅನುಭವ ಮತ್ತು ತಿಳುವಳಿಕೆಯೋ ? ಈ ವಿಷಯಗಳ ತಿಳುವಳಿಕೆ ಬೇಕಾಗಿಯೇ ಇಲ್ಲ ಎಂಬುದು ನನ್ನ ವಾದವಲ್ಲ. ಆದ-ರೆ ಯಾವ ಕೆಲಸಕ್ಕೆ ಯಾವುದು ಮುಖ್ಯ ಎನ್ನುವ ಪ್ರಶ್ನೆ ಇದು. ಈ ಹುದ್ದೆಗಳಲ್ಲಿ ಕೆಲಸ ಮಾಡುವ ಉನ್ನತಾಧಿಕಾರಿಗಳನ್ನು ಆಯ್ಕೆ ಮಾಡುವಾಗ ಐಎಎಸ್/ಕೆಎಎಸ್ ಅಧಿಕಾರಿಗಳನ್ನು ಆಯ್ಕೆ ಮಾಡುವಾಗ ಅವರ ಗ್ರಾಮೀಣ ಪ್ರದೇಶದ ಅನುಭವ ಮತ್ತು ತಿಳುವಳಿಕೆಯನ್ನು ಮಾನದಂಡವಾಗಿ ಮಾಡಲಾಗಿದೆಯೇ? ಅಥವಾ ಕೇವಲ ಪದವಿಗಳಲ್ಲಿ ಪಡೆದ ಅಂಕಗಳು ಮಾತ್ರವೇ ಮಾನದಂಡವಾಗಿದೆಯೇ? ಅವರಿಗೊಂದು ಲಿಖಿತ ಪರೀಕ್ಷೆ ಎಂದು , ಇರುತ್ತದಲ್ಲ, ಅದರಲ್ಲಿ ಯಾವ ವಿಷಯಗಳ ಮೇಲೆ ಅವರ ಸಾಮರ್ಥ್ಯದ ಪರೀಕ್ಷೆ ನಡೆಸಲಾಗುತ್ತದೆ? ಅವರು ಮುಂದೆ ಯಾವ ಕೆಲಸ ಮಾಡಬೇಕಾಗಿದೆಯೋ ಆ ವಿಷಯಗಳು ಏನಾದರೂ ಇರುತ್ತವೆಯೇ? ಅವರು ತಮ್ಮ ಪದವಿಗಳಲ್ಲಿ ಯಾವ ವಿಷಯಗಳನ್ನು ಓದಿ ಆಗಲೇ ಪರೀಕ್ಷೆಗಳನ್ನು ಪಾಸು ಮಾಡಿರುತ್ತಾರೆಯೋ ಅವೇ ವಿಷಯಗಳಲ್ಲಿ ಅದೇ ಕಾಲೇಜುಗಳ ಪ್ರಾಧ್ಯಾಪಕರೇ ಸಿದ್ಧಪಡಿಸಿದ ಪ್ರಶ್ನೆ ಪತ್ರಿಕೆಗಳಿಗೆ ಅದೇ ರೀತಿಯಲ್ಲಿ ಉತ್ತರಿಸಬೇಕಾಗಿದೆ. ಇದರಲ್ಲಿ ಭ್ರಷ್ಟಾಚಾರದ ಗೊಂದಲಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿಲ್ಲ. ಎಲ್ಲವೂ ಸಾಚ ಆಗಿ ನಡೆದಾಗ ಎಂತಹ ಮೆರಿಟ್ ಪರೀಕ್ಷೆಗೊಳಪಟ್ಟಿರುತ್ತದೆ ಎಂಬುದರ ಮೇಲಷ್ಟೇ ಗಮನ ಕೇಂದ್ರೀಕರಿಸಲಾಗಿದೆ.

ಹಾಗೆಯೇ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವ ಬ್ಯಾಂಕ್ ಅಧಿಕಾರಿಗಳಿಗೆ ಕೃಷಿ, ಪಶುಸಂಗೋಪನೆ, ಗ್ರಾಮೀಣ ಕುಶಲ ಕಲೆಗಳ ಅನುಭವ ಮುಖ್ಯವೋ ಮೇಲೆ ಹೇಳಿದ ವಿಷಯಗಳಲ್ಲಿ ಪಡೆದ ಅಂಕಗಳು ಪ್ರಧಾನವೋ? ಕುರಿ, ಕೋಳಿಗಳಿಗೆ ಕುಂಬಾರಿಕೆ, ಕಮ್ಮಾರಿಕೆಗಳಿಗೆ ವಿವಿಧ ತೋಟದ ಬೆಳೆಗಳಿಗೆ ಸಾಲ ಕೊಟ್ಟು ಅದನ್ನು ಅಭಿವೃದ್ಧಿಪಡಿಸಬೇಕಾದವರಿಗೆ ಅವುಗಳಿಗೆ ಬರಬಹುದಾದ ರೋಗ, ಅವುಗಳ ಆಹಾರ, ಆ ಕೆಲಸಗಳ ಸಮಸ್ಯೆಗಳು ಇವುಗಳ ಅರಿವಿಲ್ಲದೆ ಇರುವುದರಿಂದ ಇಂದು ಗ್ರಾಮೀಣ ಜನತೆ ಸಾಲ ಪಡೆಯುವುದರಲ್ಲಿ ನೂರೆಂಟು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದೆ. ಲಕ್ಷಾಂತರ ರೈತರ ಆತ್ಮಹತ್ಯೆ, ಕೂಲಿಕಾರರು ನೀರು, ನೆರಳಿಲ್ಲದೆ ವಲಸೆ ಹೋಗುತ್ತಿರುವುದು, ನಗರ ಪ್ರದೇಶಗಳ ಸ್ಲಂಗಳು ಇವರು ಹೇಳುವ ದಕ್ಷತೆ, ಸಾಮರ್ಥ್ಯದ ಜೀವಂತ ಉದಾಹರಣೆಗಳಾಗಿ ನಮ್ಮ ಕಣ್ಣ ಮುಂದಿವೆ.

ಹಾಗಾದರೆ ಮೆರಿಟ್ ಅಂದರೆ ಯಾವುದು? ಆ ಮೆರಿಟ್ ಅನ್ನು ಇಂದು ಅಳೆಯುತ್ತಿರುವ ರೀತಿ ಏನು? ಮೀಸಲಾತಿಯಿಂದಾಗಿ ಉತ್ತಮ ಶಿಕ್ಷಣ, ಬುದ್ಧಿಮತ್ತೆ, ಅಂಕಗಳನ್ನು ಪಡೆದವರಿಗೆ ಅನ್ಯಾಯವಾಗುತ್ತಿದೆ ಎಂದು ಬೊಬ್ಬೆ ಹೊಡೆಯುವವರು ಕೋಟ್ಯಾಂತರ ಜನರಿಗೆ ದಿನದಿನವೂ ಆಗುತ್ತಿರುವ ಅನ್ಯಾಯಕ್ಕೆ, ಅವರ ಜೀವನ ಹಾಳಾಗುತ್ತಿರುವುದಕ್ಕೆ ಏನು ಹೇಳುತ್ತಾರೆ? ಇದು ಕೇವಲ ಉದ್ಯೋಗ ನೀಡಲು ಅನುಸರಿಸುವ ಮಾನದಂಡಗಳ ಸಮಸ್ಯೆ ಮಾತ್ರವಲ್ಲ. ಶಿಕ್ಷಣಕ್ಕೆ ಪ್ರವೇಶಾವಕಾ[illegible] ನೀಡುವ ಮಾನದಂಡಗಳ ಪ್ರಶ್ನೆ ಮಾತ್ರವೇ ಅಲ್ಲ, ಶಿಕ್ಷಣದ ಪಠ್ಯಗಳನ್ನು, ಸಿಲಬಸ್ ಅನು[illegible] ರೂಪಿಸುವ ಪ್ರಶ್ನೆ, ಕಲಿಕೆಯ ವಿಧಾನಗ[illegible] ಪ್ರಶ್ನೆ, ಪರೀಕ್ಷೆಗಳನ್ನು ನಡೆಸುತ್ತಿರುವ ಪರಿಯ ಪ್ರಶ್ನೆಯೂ ಆಗಿದೆ. ಇವುಗಳನ್ನು ವಿಶದವಾಗಿ ಮುಂದಿನ ವಾರಗಳಲ್ಲಿ ಪರೀಕ್ಷೆಗೊಳಪಡಿಸೋಣ.

(ಕೃಪೆ : ಅಗ್ನಿ ವಾರಪತ್ರಿಕೆ) •

ಈ ವಾರ.....

ಪುಟ 3 ರಿಂದ

ಇವೆಲ್ಲಕ್ಕಿಂತಲೂ, ಇನ್ನಷ್ಟು ಧಾರುಣ ಘಟನೆ ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಧಾರವಾಡದ ಕೋರ್ಟ್‌ನ ಬಳಿ ಸಂಭವಿಸಿದ ಬಾಂಬ್ ಸ್ಫೋಟದ ಪ್ರಕರಣದಲ್ಲಿಯೂ ಮುಸ್ಲಿಂ ಯುವಕರನ್ನು ಆರೋಪಿಗಳನ್ನಾಗಿ ಬಂಧಿಸಿ ದೊಡ್ಡ ಪ್ರಚಾರ ನೀಡಲಾಗಿತ್ತು. ಅದರಿಂದ ಬಿಜೆಪಿಗೆ ರಾಜಕೀಯ ಲಾಭವೂ ಆಯ್ತು. ಆದರೆ ಮುಂದೆ ಬೇರೊಂದು ಪ್ರಕರಣದ (ಪ್ರಭಾಕರ ಕೋರೆ ಹತ್ಯೆ ಸುಪಾರಿ ಪ್ರಕರಣ) ತನಿಖೆ ನಡೆದಾಗ ಕೋರ್ಟ್‌ನಲ್ಲಿ ಸ್ಫೋಟ ನಡೆಸಿದ್ದು ಕ್ರಿಮಿನಲ್ ನಾಗರಾಜ ಜಂಬಲಗಿ ಮತ್ತು ಸಹಚರರು ಎಂಬುದು ಬಯಲಾಯಿತು. ಇವರೆಲ್ಲಾ ಶ್ರೀರಾಮಸೇನೆ ಕಾರ್ಯಕರ್ತರು, ಹಿಂದುತ್ವದ ಉಗ್ರ ಪ್ರತಿಪಾದಕ ಮುತಾಲಿಕನ ಶಿಷ್ಯರಾಗಿದ್ದರು. ಮುಂದೆ ಮುಖ್ಯ ಆರೋಪಿ ನಾಗರಾಜ ಜಂಬಲಗಿ ಜೈಲಿನಲ್ಲೇ ಕೊಲೆಯಾಗಿ ಹೋದ. ಸಾಕ್ಷಿದಾರರು ಬದುಕಿದ್ದರೆ ತಾನೇ? ಅವರನ್ನೇ ನಾಶಗೊಳಿಸಲಾಯ್ತು!

ಮುಸ್ಲಿಂ ಯುವಕರು, ನಾಗರೀಕರನ್ನು ಬಲಿಪಶುಗಳನ್ನಾಗಿಸುವ ಪ್ರಕರರಣಗಳು ಹತ್ತಾರು. ಮೈಸೂರಿನಲ್ಲಿ ಸಂಭವಿಸಿದ ಕೋಮುಗಲಭೆಯಲ್ಲಿ ಅಪಾರ ಹಾನಿ ಅನುಭವಿಸಿದ ಮುಸ್ಲಿಮರ ಮೇಲೆ ಹೆಚ್ಚಿನ ಕೇಸ್‌ಗಳು ದಾಖಲಾದವು, ಬಂಧನಗಳು ನಡೆದವು. ನಂತರ ಬಹುತೇಕ ನೂರಾರು ಯುವಕರ ಮೇಲಿದ್ದ ಕೇಸ್‌ಗಳಿಂದ ನ್ಯಾಯಾಲಯ ಬಿಡುಗಡೆಗೊಳಿಸಿತು. (ಎ.ಕೆ.ಸುಬ್ಬಯ್ಯನವರು ವಾದಿಸಿದ್ದರು) ಗಮನಿಸಬೇಕಾದ್ದೆಂದರೆ ಬಹುತೇಕ ಈ ಎಲ್ಲಾ ಪ್ರಕರಣಗಳು ನಡೆದದ್ದು ಬಿಜೆಪಿ ಸರಕಾರವಿರುವಾಗ. ಮಲ್ಲೇಶ್ವರಂ ಸ್ಫೋಟ, ಧಾರವಾಡದ ಪ್ರಕರಣ ಇವೆಲ್ಲಾ ಚುನಾವಣಾ ಪ್ರಕ್ರಿಯೆ ನಡೆದಿರುವಾಗಲೇ.

ದೇಶದ ಮಟ್ಟದಲ್ಲಿಯೂ ಹಲವಾರು ರಾಜ್ಯಗಳಲ್ಲಿ (ಬಿಜೆಪಿ ಮಾತ್ರವಲ್ಲ, ಕಾಂಗ್ರೆಸ್ ಆಡಳಿತ ಇರುವಲ್ಲಿಯೂ) ಇಂತಹುದೇ ಸ್ಥಿತಿ ಇದೆ. ಉತ್ತರ ಪ್ರದೇಶದ ನಿವೃತ್ತ ಪೋಲೀಸ್ ಐ.ಜಿ.ಯಾದ ಎಸ್.ಆರ್.ದಾರಾಪುರಿಯವರೇ 'ಮುಸ್ಲಿಂ ಯುವಕರನ್ನು ವಿಚಾರಣೆಗೆ ಬಂಧಿಸಿಟ್ಟಿರುವಾಗ ಅವರಿಗೆ ಹಂದಿ ಮಾಂಸ ತಿನ್ನುವಂತೆ, ಮೂತ್ರ ಕುಡಿಯುವಂತೆ ಒತ್ತಾಯಿಸಿ ಚಿತ್ರ ಹಿಂಸೆಯನ್ನು ನೀಡಲಾಗಿದೆ' ಎಂದು ಹಿಂದಿನ ಅನುಭವಗಳನ್ನು ಹೇಳಿದ್ದಾರೆ. (ರಾಷ್ಟ್ರೀಯ ಸಹರಾ-21 .2.2013) ಅಲ್ಲಿ ಬಂಧನದಲ್ಲೇ ಹಿಂಸೆ ತಾಳದೇ ಮೃತಪಟ್ಟ ಖಾಲಿದ್ ಮುಝಾಹಿದ್ ಎನ್ನುವ ಆರೋಪಿ ಖುಲಾಸೆಯಾಗಬೇಕೆಂದರೆ [illegible] ಲಕ್ಷ ರೂ. ನೀಡಬೇಕೆಂದು ಪೋಲೀಸರು ಒತ್ತಡ ಹೇರುತ್ತಿರುವುದನ್ನು ಬಹಿರಂಗ ಪಡಿಸಿದ್ದ. ಈಗಲೂ ನಿರಪರಾಧಿಗಳಾದ ಸಾವಿರಾರು ಮುಸ್ಲಿಂ ಯುವಕರು ದೇಶದ ಹಲವಾರು ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಪಾಲಕರು ಇನ್ನೂ ಹುಡುಕುತ್ತಿರುವ 'ಕಾಣೆ'ಯಾದ ನೂರಾರು ಜನ ಪೋಲೀಸರ ಗುಪ್ತ ಜಾಗಗಳಲ್ಲಿ ಹಿಂಸೆ ಅನುಭವಿಸುತ್ತಾ ದಿನಗಳನ್ನು ಎಣಿಸುತ್ತಿರುವುದಾಗಿ ಅದೇ ಉನ್ನತ ಪೋಲೀಸ್ ಅಧಿಕಾರಿ ಹೇಳುತ್ತಾರೆ. ಈ ಹಿಂಸೆ, ಅವಮಾನವನ್ನು ಅವ[illegible] ಮಾತ್ರವಲ್ಲ, ಇಡೀ ಕುಟುಂಬವೇ, ಬಳಗವೇ ಅನುಭವಿಸಬೇಕಾಗುತ್ತದೆ. ಹೋಗಲಿ ಒಂದು ವೇಳೆ ಹೊರ ಬಂದ ಮೇಲೂ ಅವರೆಲ್ಲಾ ಸ್ವಾಸ್ಥ್ಯದಿಂದ ಬದುಕಿಯಾರೇ? ಸಮಾಜವಾದರೂ ಹೇಗೆ ಇದ್ದೀತು?

ಇಷ್ಟೆಲ್ಲಾ ಸತ್ಯಗಳು, ಪ್ರಕರಣಗಳು ಕಣ್ಣೆದುರಿರುವಾಗಲೂ ಪೋಲೀಸರು ಸರಕಾರ ಯಾಕೆ ಪೂರ್ವಗ್ರಹ ಪೀಡಿತರಾಗಿ ವರ್ತಿಸುತ್ತಾರೆ. ಇದರ ಬಗ್ಗೆ ಸರಕಾರ, ಅದರ ಇಡೀ ಆಡಳಿತ ಯಂತ್ರ ಮತ್ತು ನಾಗರೀಕರು ಗಂಭೀರವಾಗಿ ಯೋಚಿಸಬೇಕು. ಅವರ ಚಿಂತನಾ ಕ್ರಮ, ವಿಧಾನ ಬದಲಾಗಬೇಕು. ಬೆಂಗಳೂರಿನ ಪ್ರಕರಣದಲ್ಲಿ ತಪ್ಪು ಎಸಗಿದ ಪೋಲೀಸ್ ಇಲಾಖೆಯನ್ನು ರಾಜ್ಯ ಮಾನವ ಹಕ್ಕುಗಳ ಆಯೋಗ ತೀವ್ರವಾಗಿ ತರಾ-ಟೆಗೆ ತೆಗೆದುಕೊಂಡಿದೆ. ಖುಲಾಸೆಯಾದ ಪ್ರತಿಯೊಬ್ಬರಿಗೂ ಎರಡು ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ನೀಡ[illegible] ಸರಕಾರಕ್ಕೆ ಸೂಚಿಸಿರುವುದು ಗಮನಾರ್ಹ, ಸ್ವಾಗತಾರ್ಹ.


ಈ ದೆಸೆಯಲ್ಲಿ ಈಗಲಾದರೂ ರಾಜ್ಯ ಸರಕಾರ ಎಚ್ಚೆತ್ತುಕೊಂಡು ಇಂತಹ ಪ್ರವೃತ್ತಿಗಳನ್ನು ತೆಗೆದು ಹಾಕಬೇಕು. ಈಗಲೂ ಬಿಜೆಪಿಯ ಆಳ್ವಿಕೆಯ ಕೋಮುವಾದೀ ವಿಷ ವಾಯುವಿನ ಪ್ರಭಾವ ಆಡಳಿತದಲ್ಲಿ ಇಲ್ಲದಿಲ್ಲ. ಅದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಸತತ ಯತ್ನದ ಮೂಲಕ ಸರಿಪಡಿಸಬೇಕು. ಎಲ್ಲಾ ಪ್ರಕರಣಗಳ ಬಗ್ಗೆ ಆಳವಾದ ವಿಮರ್ಶೆ, ತನಿಖೆ ಪುನಃ ನಡೆದು ಮಾನವ ಹಕ್ಕುಗಳನ್ನು ಕಾಯಬೇಕು.

ಅಂದ ಹಾಗೆ ಮಲ್ಲೇಶ್ವರಂ ಸ್ಫೋಟದ ರುವಾರಿಗಳು, ಭಾಗಿಗಳು ಯಾರು ಎಂಬುದು ಇನ್ನಷ್ಟೂ ನಿಷ್ಟುರ, ಆಳ ತನಿಖೆಯಿಂದ ಸತ್ಯ ಹೊರ ಬರಲಿ. ಭಯೋತ್ಪಾದಕ[illegible] ಬಣ್ಣವಿಲ್ಲ, ಧರ್ಮವಿಲ್ಲ, ಮನುಷ್ಯತ್ವವಂತೂ ಇಲ್ಲವೇ ಇಲ್ಲ. ಇಂತಹವರು ಯಾರೇ ಆಗಲಿ ಶಿಕ್ಷಾರ್ಹರು. •

ಜನಶಕ್ತಿ
ಕನ್ನಡ ವಾರಪತ್ರಿಕೆ

'ಸೌಜನ್ಯ' ಪ್ರಕರಣ ಮಾತ್ರವಲ್ಲ;
ಧರ್ಮಸ್ಥಳ ಸುತ್ತಮುತ್ತಲಿನ ಎಲ್ಲ 462 ಅಸಹಜ ಸಾವು, ಕೊಲೆ, ಅತ್ಯಾಚಾರ ಪ್ರಕರಣಗಳ ತನಿಖೆ ಸಿಬಿಐನಿಂದಾಗಲಿ

ಕರ್ನಾಟಕ ರಾಜ್ಯ ಸರ್ಕಾರ 'ಸೌಜನ್ಯ ಪ್ರಕರಣ'ವನ್ನು ಸಿಬಿಐ ತನಿಖೆಗೆ ಒಪ್ಪಿಸಿ ತೀರ್ಮಾನ ಕೈಗೊಂಡಿದೆ. ಇದು ಈ ವಿಷಯದಲ್ಲಿ ತೀವ್ರವಾದ ಹೋರಾಟವನ್ನು ನಡೆಸಿಕೊಂಡು ಬಂದ ಧರ್ಮಸ್ಥಳ ಸುತ್ತಮುತ್ತಲ ಹೋರಾಟನಿರತ ನೊಂದ ಜನರ ಮತ್ತು ಪ್ರಗತಿಪರ ಸಂಘಟನೆಗಳ ಗಟ್ಟಿಮನಸ್ಸಿನ ಚಳುವಳಿಗೆ ಸಿಕ್ಕ ಒಂದು ಹಂತದ ಗೆಲುವಾಗಿದೆ. ಹಿಂದೆ ರಾಜ್ಯ ಬಿಜೆಪಿ ಸರ್ಕಾರ ನೇಮಿಸಿದ್ದ ಸಿಐಡಿ ತನಿಖೆಯಿಂದ ಯಾವುದೇ ಮಹತ್ವದ ಫಲಿತಾಂಶ ಬರುವುದಿಲ್ಲ ಎಂಬುದು ಎಲ್ಲರಿಗೂ ಎಂದೋ ತಿಳಿದುಹೋಗಿತ್ತು. ಸಾಕ್ಷಿನಾಶವೇ ಪೋಲೀಸರ ಕೆಲಸವಾಗಿರುವ ಬೇರೆ ಇನ್ನೇನು ಫಲಿತಾಂಶ ಸಿಗುವುದು ಸಾಧ್ಯವಿರಲಿಲ್ಲ. ಈಗ ಸೌಜನ್ಯ ಪ್ರಕರಣದಲ್ಲಿ ಸಿಬಿಐ ತನಿಖೆ ಆರಂಭಗೊಂಡು ಬಿಟ್ಟರೆ ಎಲ್ಲವೂ ಆದಂತೆ ಆಗುವುದಿಲ್ಲ. ಧರ್ಮಸ್ಥಳ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಇತ್ತೀಚಿನ ವರ್ಷಗಳಲ್ಲಿ ಘಟಿಸಿರುವ ಸು. 462 ಅಸಹಜ ಸಾವು, ಆತ್ಮಹತ್ಯೆ, ಕೊಲೆ, ಅತ್ಯಾಚಾರ ಪ್ರಕರಣಗಳ ತನಿಖೆಯೂ ನಡೆದರೆ ಮಾತ್ರ ಸತ್ಯ ಹೊರಬರಲು ಸಾಧ್ಯ ಎಂದು ಚಳುವಳಿ ಮೊದಿನಿಂದಲೂ ಪ್ರತಿಪದಿಸುತ್ತಾ ಬಂದಿದೆ. ಅದರಲ್ಲೂ ವೇದವಲ್ಲಿ ಸಾವು, ಪದ್ಮಲತಾ ಅಪಹರಣ ಮತ್ತು ಅತ್ಯಾಚಾರ, ಕೊಲೆಯಂತಹ ಗಂಭೀರ ಪ್ರಕರಣಗಳ ಸಮಗ್ರ ತನಿಖೆ ಆಗಲೇಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಈ ಸಂಬಂಧದ 'ರಾಜ್ಯ ಮಟ್ಟದ ಹೋರಾಟ ಸಮಿತಿ'ಯು ನವೆಂಬರ್ 7 ರಿಂದ ಅನಿರ್ಧಿಷ್ಟಾವಧಿ ಧರಣಿ ಬೆಂಗಳೂರಿನ ಟೌನ್‌ಹಾಲ್ ಮುಂಭಾಗ ಆರಂಭಿಸಿದೆ. ಕಾಲಮಿತಿಯಲ್ಲಿ ತನಿಖೆ ಮುಗಿಯಬೇಕು. ಧರ್ಮಸ್ಥಳದಲ್ಲಿ ಅಪರಾಧ ಕೃತ್ಯಗಳಿಗೆ ತಡೆ ಹಾಕಬೇಕು ಎಂದೂ ಒತ್ತಾಯಿಸಲಾಗಿದೆ. ಹೋರಾಟ ಸಮಿತಿಯ ಅಧ್ಯಕ್ಷರಾದ ಡಾ.ವಸುಂಧರಾ ಭೂಪತಿ, ಸಂಘಟನಾ ಕಾರ್ಯದರ್ಶಿಗಳಾದ ಕೆ.ಎಸ್.ಲಕ್ಷ್ಮೀ, ಭರತ್‌ರಾಜ್.ಎನ್.ಎಲ್, ಹುಳ್ಳಿ ಉಮೇಶ್ ಮುಂತಾದವರು ನೇತೃತ್ವ ವಹಿಸಿರುವ ಧರಣದಲ್ಲಿ ಈ ಹೋರಾಟ ಸಮಿತಿಯ ಸಹಭಾಗಿ ಸಂಘಟನೆಗಳ ನೂರಾರು ಜನರು ಪಾಲ್ಗೊಂಡಿದ್ದರು. ಕರ್ನಾಟಕ ಲೇಖಕಿಯರ ಸಂಘದ ಡಾ.ವಸುಂಧರಾ ಭೂಪತಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ, ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿಜೆಕೆ ನಾಯರ್, ಅಂಗವಿಕಲರ ಮತ್ತು ಪಾಲಕರ ಒಕ್ಕೂಟದ ಮುಖಂಡರಾದ ಜಿ.ಎನ್. ನಾಗರಾಜ್, ದಲಿತ ಸಂಘರ್ಷ ಸಮಿತಿ(ಸಮತಾವಾದ)ದ ಗೌರಾವಾಧ್ಯಕ್ಷರಾದ ತಮ್ಮಣ್ಣ, ಮತ್ತು ಮುಖಂಡರಾದ ಮಾರಪ್ಪ, ಕರ್ನಾಟಕ ಸಮತಾ ಸೈನಿಕದಳದ ಮುಖಂಡರಾದ ಚನ್ನಕೃಷ್ಣಪ್ಪ-ಮಹಿಳಾ ಘಟಕದ ಅಧ್ಯಕ್ಷೆ ಕಮಲಮ್ಮ, ಹೋರಾಟಗಾರ್ತಿ ಇಂದಿರಾ ಕೃಷ್ಣಪ್ಪ ಮುಂತಾದವರು ಈ ಸಂದರ್ಭದಲ್ಲಿ ಚಳುವಳಿಗಾರರನ್ನು ಉದ್ದೇಶಿಸಿ ಮಾತನಾಡಿದರು.



ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್‌ವಾದ) ಮಹಿಳಾ ಒಕ್ಕೂಟ, ಅಖಿಲ ಭಾರತ ವಿಮಾ ನೌಕರರ ಸಂಘ, ನ್ಯಾಯಕ್ಕಾಗಿ ನಾವು, ಅಖಿಲ ಭಾರತ ಯುವಜನ ಫೆಡರೇಷನ್, ಬೆಂಗಳೂರು ರಂಗಾಸಕ್ತ ವಕೀಲರ ಬಳಗ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್, ವುಮೆನ್ಸ್ ವಾಯ್ಸ್, ಹೆಂಗಸರ ಹಕ್ಕಿನ ಸಂಘ, ಭಾರತೀಯ ಜನ ಕಲಾ ಸಮಿತಿ, ದಲಿತ ಬಹುಜನ ಚಳುವಳಿ, ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೇಸ್, ಟಿಪ್ಪುಸುಲ್ತಾನ್ ಯುನೈಟೆಡ್ ಫ್ರಂಟ್, ಕರ್ನಾಟಕ ರಾಜ್ಯ ಕೃಷಿ ಕೂಲಿಕಾರರ ಸಂಘ, ಜನಾರೋಗ್ಯ ಆಂದೋಲನ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ಸಮತಾ ಸೈನಿಕ ದಳ, ಭಾರತ ವಿದ್ಯಾರ್ಥಿ ಫೆಡರೇಷನ್, ಭಾರತೀಯ ಮಹಿಳಾ ಒಕ್ಕೂಟ, ವಿಮೋಚನಾ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಅಖಿಲ ಭಾರತ ವಕೀಲರ ಸಂಘ, ದಲಿತ ಸಂಘರ್ಷ ಸಮಿತಿ(ಸಮತಾವಾದ), ಆಟೋ ರಿಕ್ಷಾ ಚಾಲಕರ ಸಂಘ(ಎಆರ್‌ಡಿಯು), ಕರ್ನಾಟಕ ಲೇಖಕಿಯರ ಸಂಘ, ಸಮ ಸಮಾಜ ವೇದಿಕೆ, ಸಮತಾ, ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ, ಸಮುದಾಯ, ಕರ್ನಾಟಕ ರಾಜ್ಯ ಅಂಗವಿಕಲರ ಮತ್ತು ಪಾಲಕರ ಒಕ್ಕೂಟ, ಬೆಂಗಳೂರು ಮನೆ ಕೆಲಸಗಾರರ ಸಂಘ, ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್, ಡಾ.ಬಿ.ಆರ್.ಅಂಬೇಡ್ಕರ್ ದಲಿತ ಸಂಘರ್ಷ ಸಮಿತಿ, ಸಮಾಜ ಪರಿವರ್ತನಾ ಜನಾಂದೋಲನ, ಸಾವಿತ್ರಿ ಬಾಯಿ ಬಾಪುಲೆ ಮಹಿಳಾ ಸಂಘ, ದಲಿತ ಸಂಘರ್ಷ ಸಮಿತಿ(ಭೀಮವಾದ), ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್, ಅಖಿಲ ಭಾರತ ಕಿಸಾನ್ ಸಭಾ, ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳ ನೌಕರರ ಫೆಡರೇಷನ್, ಬಿಎಂಟಿಸಿ ಕಾರ್ಮಿಕರ ಸಂಘ, ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ, ಕರ್ನಾಟಕ ರಾಜ್ಯ ಅಕ್ಷರದಾಸೋಹ ನೌಕರರ ಸಂಘ, ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಫೆಡರೇಷನ್, ಕರ್ನಾಟಕ ರಾಜ್ಯ ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರ ಸಂಘ, ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ, ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕ ಸಂಘ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಕರ್ನಾಟಕ ಗಾರ್ಮೆಂಟ್ಸ್ ವರ್ಕರ್ಸ್ ಯೂನಿಯನ್, ದಲಿತ ಮಹಿಳಾ ವೇದಿಕೆ, ಬ್ಯಾಂಕ್ ಎಂಪ್ಲಾಯೀಸ್ ಫೆಡರೇಷನ್ ಆಫ್ ಇಂಡಿಯಾ ಮುಂತಾದ ಜನಪರ ಸಂಘಟನೆಗಳು ಸೇರಿದ ಹೋರಾಟ ಸಮಿತಿಯ ಅನಿರ್ಧಿಷ್ಟಾವಧಿ ಧರಣ ಬೆಂಗಳೂರಿನ ನಾಗರೀಕರ ಗಮನ ಸೆಳೆಯುತ್ತಾ ನಡೆಯುತ್ತಿದೆ.

ಧರ್ಮಸ್ಥಳದ ಸೌಜನ್ಯ ಅತ್ಯಾಚಾರ ಹಾಗೂ ಕೊಲೆ ಪ್ರಕರಣವೂ ಸೇರಿದಂತೆ ಎಲ್ಲ ಅಸಹಜ ಸಾವುಗಳ ಮತ್ತು ಭೂ ಅವ್ಯವಹಾರ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸಲು ಸಿಪಿಐ(ಎಂ) ಆಗ್ರಹ

(ನವೆಂಬರ್ 6 2013 ರಂದು ಬೆಳಿಗ್ಗೆ ಬೆಂಗಳೂರಿನಲ್ಲಿ ನಡೆಸಲಾದ ಪತ್ರಿಕಾಗೋಷ್ಠಿಯಲ್ಲಿ ನೀಡಲಾದ ಹೇಳಿಕೆ)

ಒಂದು ವರ್ಷದ ಹಿಂದೆ ಅಪಹರಣ, ಅತ್ಯಾಚಾರಕ್ಕೀಡಾಗಿ ಕೊಲೆಯಾದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ವಿದ್ಯಾರ್ಥಿನಿ ಸೌಜನ್ಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಪೊಲೀಸರು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ಮಧ್ಯಂತರ ತನಿಖಾ ವರದಿ ಸುಳ್ಳುಗಳ ಕಂತೆಯಾಗಿದ್ದು ಅದನ್ನು ಸಾರಾಸಗಟಾಗಿ ತಿರಸ್ಕರಿಸಿ, ಸಮಗ್ರ ತನಿಖೆಗಾಗಿ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕೆಂದು ಸಿಪಿಐ(ಎಂ) ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತದೆ. ಸೌಜನ್ಯ ಪ್ರಕರಣವನ್ನು ಮಾತ್ರವಲ್ಲ, 1979ರಲ್ಲಿ ಸಂಭವಿಸಿದ ಶಿಕ್ಷಕಿ ವೇದವಲ್ಲಿ ಅಸಹಜ ಸಾವು, 1987ರಲ್ಲಿ ಇದೇ ಕಾಲೇಜ್ ವಿದ್ಯಾರ್ಥಿನಿ ಪದ್ಮಲತಾ ಅತ್ಯಾಚಾರ ಮತ್ತು ಕೊಲೆಯ ಪ್ರಕರಣಗಳಿಂದ ಹಿಡಿದು ಇಲ್ಲಿಯವರೆಗೆ ಸಂಭವಿಸಿದ ಎಲ್ಲ ಅತ್ಯಾಚಾರ ಮತ್ತು ಅಸಹಜ ಸಾವುಗಳ ಪ್ರಕರಣಗಳನ್ನು ಮತ್ತು ಮುಚ್ಚಿಹಾಕಲ್ಪಟ್ಟ ಎಲ್ಲ ಭೂ ಕಬಳಿಕೆಯ ಅವ್ಯವಹಾರಗಳನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಹಿಂದಿನ ಬಿಜೆಪಿ ಸರ್ಕಾರ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಿ ಕೈತೊಳೆದುಕೊಂಡಿತ್ತು. ಹೊಸದಾಗಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ತನಿಖಾ ಅಧಿಕಾರಿಯನ್ನು ಬದಲಾಯಿಸಿ ಸುಮ್ಮನಾಗಿತ್ತು. ಆದರೆ, ಧರ್ಮಸ್ಥಳ ಪ್ರದೇಶದ ಯಾರೊಬ್ಬರಿಗೂ ಸಿಐಡಿ ತನಿಖೆಯಿಂದ ಸತ್ಯ ಹೊರಬರಬಹುದೆಂಬ ನಂಬಿಕೆ ಇರಲಿಲ್ಲ. ಹಿಂದಿನ ಎಲ್ಲಾ ಪ್ರಕರಣಗಳಲ್ಲಿ ಆಗಿರುವಂತೆ ಈ ಪ್ರಕರಣದಲ್ಲಯೂ ಪಟ್ಟಭದ್ರರ ಒತ್ತಡಕ್ಕೆ ಮಣಿದ ಪೊಲೀಸರು ಆರಂಭದಿಂದಲೇ ಅಪರಾಧಿಗಳ ರಕ್ಷಣೆಗೆ ಟೊಂಕಕಟ್ಟಿ ನಿಂತಿದ್ದರು. ಸಾಕ್ಷಾಧಾರಗಳನ್ನು ನಾಶಪಡಿಸಲು ನೆರವಾಗಿದ್ದರು. ಕ್ಷೇತ್ರದಲ್ಲೇ ಅಲೆದಾಡಿಕೊಂಡಿದ್ದ ಮನೋರೋಗಿ ಸಂತೋಷ್ ರಾವ್ ಎಂಬಾತನಿಂದ ತಪ್ಪೊಪ್ಪಿಗೆ ಪಡೆದು ಆತನನ್ನು ಜೈಲಿನಲ್ಲಿ ಇರಿಸಿದರು. ಈ ಎಲ್ಲ ಪೂರ್ವ ತಯಾರಿಗೆ ಅನುಗುಣವಾಗಿ ಸಿಐಡಿ ಮಧ್ಯಂತರ ವರದಿಯನ್ನು ಹೊರತರಲಾಗಿದೆ. ಈ ವರದಿಯಲ್ಲಿ ಸೌಜನ್ಯಳ ಮೇಲೆ ಅತ್ಯಾಚಾರವೇ ನಡೆದಿಲ್ಲವೆಂದೂ, ಪೊಲೀಸ್ ವಶದಲ್ಲಿರುವ ಆರೋಪಿ ಸಂತೋಷ್ ರಾವ್ ಸೌಜನ್ಯಳ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸಿ, ಅದು ಸಾಧ್ಯವಾಗದಿದ್ದಾಗ ಅಕೆಯನ್ನು ತಾನು ಕೊಲೆ ಮಾಡಿದ್ದೇನೆಂದು ಆತ ಒಪ್ಪಿಕೊಂಡಿದ್ದಾನೆಂದು ವರದಿಯಲ್ಲಿ ಹೇಳಲಾಗಿದೆ ಎನ್ನಲಾಗಿದೆ.

ಪ್ರಕರಣವನ್ನು ಮುಚ್ಚಿಹಾಕಲು ಸಿದ್ಧಪಡಿಸಲಾದ ಈ ವರದಿಯನ್ನು ಸೌಜನ್ಯಳ ಹೆತ್ತವರು ಮಾತ್ರವಲ್ಲ ಧರ್ಮಸ್ಥಳ-ಉಜಿರೆ ಪ್ರದೇಶದ ಯಾರೊಬ್ಬರು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಆದ್ದರಿಂದಲೇ ಸಿಬಿಐ ತನಿಖೆಗೆ ಆಗ್ರಹಿಸುತ್ತಿರುವವರ ಕೂಗು ರಾಜ್ಯವ್ಯಾಪಿ ಆಂದೋಲನದ ಸ್ವರೂಪ ಪಡೆಯುತ್ತಿದೆ. ಸೌಜನ್ಯ ಪ್ರಕರಣದೊಂದಿಗೆ ಈ ಹಿಂದೆ ಮುಚ್ಚಿಹಾಕಲ್ಪಟ್ಟ ಎಲ್ಲ ಅಸಹಜ ಸಾವುಗಳ, ಅತ್ಯಾಚಾರಗಳ ಮತ್ತು ಭೂ ಕಬಳಿಕೆ ಪ್ರಕರಣಗಳು ಸಮಗ್ರ ತನಿಖೆಗೆ ಒಳಪಡಬೇಕು ಎಂಬುದು ಜನರ ಆಗ್ರಹವಾಗಿದೆ. ಹೀಗಾಗಿ ಸಿಪಿಐ(ಎಂ) ಹಿಂದಿನ ಎಲ್ಲ ಪ್ರಕರಣಗಳ ಜೊತೆಯಲ್ಲಿ ಸೌಜನ್ಯ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಲು ಆಗ್ರಹಿಸಿ ಚಳುವಳಿಯನ್ನು ತೀವ್ರಗೊಳಿಸಲು ನಿರ್ಧರಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಕ್ಷವು ಬೆಳ್ತಂಗಡಿಯಿಂದ ಮಂಗಳೂರುವರೆಗೆ 2 ಕಾಲ್ನಡಿಗೆ ಜಾಥಾವನ್ನು ಹಮ್ಮಿಕೊಂಡಿದ್ದು ನವಂಬರ್ 26ರಂದು ಮಂಗಳೂರಿನಲ್ಲಿ ಇನ್ನೊಂದು ಬೃಹತ್ ರ್‍ಯಾಲಿಯನ್ನು ಎರ್ಪಡಿಸಿದೆ. ಎಲ್ಲ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸುವವರೆಗೂ ಹೋರಾಟವನ್ನು ಮುನ್ನಡೆಸಲಾಗುವುದು.

ಸೌಜನ್ಯ ಕೊಲೆ ಮತ್ತಷ್ಟು ಪ್ರತಿಭಟನೆಗಳು

ಸಿಪಿಐ(ಎಂ) ಪ್ರತಿಭಟನೆ :

ಸಿಪಿಐ(ಎಂ) ಪುತ್ತೂರು ತಾಲೂಕು ಸಮಿತಿ ನೇತೃತ್ವದಲ್ಲಿ ಅಕ್ಟೋಬರ್ 29 ರಂದು ಉಜಿರೆ ಕಾಲೇಜು ವಿದ್ಯಾರ್ಥಿನಿ ಸೌಜನ್ಯ ಕೊಲೆ ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು ಎಂದು ಆಗ್ರಹಿಸಿ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಪುತ್ತೂರಿನ ದರ್ಬೆ ವೃತ್ತದ ಬಳಿಯಿಂದ




ಪುತ್ತೂರು ವಿಭಾಗಾಧಿಕಾರಿಗಳ ಕಚೇರಿ ತನಕ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ಕಚೇರಿ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ಹಿರಿಯ ಮುಖಂಡರಾದ ಕೆ.ಆರ್.ಶ್ರೀಯಾನ್, ಅಖಿಲ ಭಾರತ ವಕೀಲರ ಸಂಘದ ದ.ಕ.ಜಿಲ್ಲಾಧ್ಯಕ್ಷ ಯಶವಂತ ಮರೋಳಿ, ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಸದಸ್ಯ ಸುನಿಲ್ ಕುಮಾರ್ ಬಜಾಲ್, ಬಿ.ಎಂ.ಭಟ್, ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ಸಿಪಿಐ(ಎಂ) ದಲಿತ ಹಕ್ಕುಗಳ ಸಮಿತಿ ಬೆಳ್ತಂಗಡಿ ಮುಖಂಡರಾದ ಶೇಖರ ಲಾಯಿಲ ಮಾತನಾಡಿದರು. ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಕಾರ್ಯದರ್ಶಿ ಎಸ್.ಎಂ.ಶಿವ ಕುಮಾರ್, ಬಂಟ್ವಾಳ ತಾಲೂಕು ಕಾರ್ಯದರ್ಶಿ ರಾಮಣ್ಣ ವಿಟ್ಲ, ಜನವಾದಿ ಮಹಿಳಾ ಸಂಘದ ಜಿಲ್ಲಾ ಉಪಾಧ್ಯಕ್ಷೆ ಸುಕನ್ಯಾ, ಎವೈಎಫ್ಐ ಪುತ್ತೂರು ತಾಲೂಕು ಅಧ್ಯಕ್ಷ ಕೃಷ್ಣಪ್ಪ ನಿಡ್ಪಳ್ಳಿ ಮತ್ತಿತರರು ಉಪಸ್ಥಿತರಿದ್ದರು. ಮುನ್ನೂರಕ್ಕೂ ಹೆಚ್ಚು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವಿಟ್ಲ : ಸಿಐಟಿಯು-ಎಸ್ಎಫ್ಐ-ದಲಿತ್ ಸಂಘಟನೆಗಳ ಪ್ರತಿಭಟನೆ:

ಫೆಡರೇಶನ್ ಆಫ್ ಕರ್ನಾಟಕ ಆಟೋ ರಿಕ್ಷಾ ಡ್ರೈವರ್ಸ್ ಯೂನಿಯನ್ (ಸಿಐಟಿಯು), ಎಸ್ಎಫ್ಐ, ದಲಿತ ಸೇವಾ ಸಮಿತಿ ನೇತೃತ್ವದಲ್ಲಿ ಸೌಜನ್ಯ ಕೊಲೆ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕೆಂದು ಆಗ್ರಹಿಸಿ ನವಂಬರ್ 5 ರಂದು ವಿಟ್ಲ ಪೇಟೆಯಲ್ಲಿ ಪ್ರತಿಭಟನೆ ನಡೆಯಿತು.



ಪ್ರತಿಭಟನಾಕಾರರು ವಿಟ್ಲ ಬಸದಿ ಬಳಿಯಿಂದ ಮೆರವಣಿಗೆ ಪ್ರವಾಸಿ ಮಂದಿರದ ವರೆಗೆ ನಡೆಸಿ ಅಲ್ಲಿಗೆ ಆಗಮಿಸಿದ್ದ ಪುತ್ತೂರು ಶಾಸಕಿಯವರಿಗೂ, ಉಪ ತಹಶೀಲ್ದಾರರಿಗೂ ಮನವಿ ಸಲ್ಲಿಸಿದರು. ಬಳಿಕ ವಿಟ್ಲ ಪೇ-ಟೆಗೆ ಮೆರವಣಿಗೆ ಬಂದು ಪ್ರತಿಭಟನಾ ಸಭೆ ನಡೆಸಿದರು. ದೊಡ್ಡ ಸಂಖ್ಯೆಯಲ್ಲಿ ಕಾಲೇಜು ವಿದ್ಯಾರ್ಥಿಗಳೂ ಭಾಗವಹಿಸಿದ್ದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಸಮಿತಿ ಮುಖಂಡರಾದ ಶೇಖರ ಲಾಯಿಲ, ಎಸ್ಎಫ್ಐ ರಾಜ್ಯ ಸಮಿತಿ ಸಹ ಕಾರ್ಯದರ್ಶಿ ಜೀವನ್ ರಾಜ್ ಕುತ್ತಾರ್, ಸಿಐಟಿಯು ಮುಖಂಡ ಹಾಗೂ ಸಿಪಿಐ(ಎಂ) ಬಂಟ್ವಾಳ ತಾಲೂಕು ಕಾರ್ಯದರ್ಶಿ ರಾಮಣ್ಣ ವಿಟ್ಲ ಮಾತನಾಡಿದರು. ವಿಟ್ಲ ವಲಯ ರಿಕ್ಷಾ ಯೂನಿಯನ್ನಿನ ಅಧ್ಯಕ್ಷ ಬಾಲಕೃಷ್ಣ, ಎಸ್ಎಫ್ಐ ಜಿಲ್ಲಾ ಉಪಾಧ್ಯಕ್ಷ ತುಲಸೀದಾಸ್ ಮತ್ತಿತರರು ಪ್ರತಿಭಟನೆಯನ್ನು ಸಂಘಟಿಸಿದ್ದರು.

ಕಟ್ಟಡ ನಿರ್ಮಾಣ ಕಾರ್ಮಿಕರ ಮಂಗಳೂರು ನಗರ ಸಮಾವೇಶ :

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತ-ರೆ ನಿರ್ಮಾಣ ಕಾರ್ಮಿಕರ ಮಂಗಳೂರು ನಗರ ಮಟ್ಟದ ಸಮಾವೇಶವು ಅಕ್ಟೋಬರ್ 27 ರಂದು ಮಂಗಳೂರಿನಲ್ಲಿ ನೆರವೇರಿತು.

ವಾ. ಉ.

ಸಿಐಟಿಯು ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ 2006ರ ನವಂಬರ್ ತಿಂಗಳಲ್ಲಿ ಕಟ್ಟಡ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ರಚನೆಯಾಗಿದೆ. ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಜಮಾಗೊಂಡಿರುವ ಹಣವನ್ನು ಸರಿಯಾದ ಉದ್ದೇಶಕ್ಕಾಗಿ ಬಳಸುವ ಬದಲು ಬೇರೆ ಉದ್ದೇಶಗಳಿಗೆ ಬಳಸಲು ರೂ.800 ಕೋಟಿಯ ಯೋಜನೆಯನ್ನು ರಾಜ್ಯ ಸರಕಾರ ಸಿದ್ಧ ಪಡಿಸಿದೆ ಎಂಬುದಾಗಿ ಸಮಾವೇಶದಲ್ಲಿ ಮಾತನಾಡಿದ ಕಟ್ಟಡ ಕಾರ್ಮಿಕರ ದ.ಕ. ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ದೂರಿದರು.

ದ.ಕ.ಕಟ್ಟಡ ಕಾರ್ಮಿಕರ ಜಿಲ್ಲಾ ಘಟಕ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ನಗರ ಸಂಘಟನೆಯ ಮುಖಂಡರಾ ಬಿ.ಕೆ.ಇಮ್ತಿಯಾಜ್, ಯೋಗೀ ಜಪ್ಪಿನಮೊಗರು ಮತ್ತಿತರರು ಸಮಾವೇಶದ ಭಾಗವಹಿಸಿದ್ದರು.



8 ವಿಧಾನ ಸಭಾ ಕ್ಷೇತ್ರಗಳಲ್ಲಿ ಪರ್ಯಾಯ ರಾಜಕಾರಣ ಸಮಾವೇಶಗಳು:

ಮಂಗಳೂರು ಲೋಕಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಪಕ್ಷವೂ ಬರಲಿರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎಂಬ ಹಿನ್ನೆಲೆಯಲ್ಲಿ ಪಕ್ಷದ ಪಾಲಿಟ್ ಬ್ಯೂ-ರೋ ಸದಸ್ಯ ಎಂ.ಎ.ಬೇಬಿ ಕೆಲವು ದಿನಗಳ ಹಿಂದೆ ಮಂಗಳೂರಿನಲ್ಲಿದ್ದು, 2 ದಿನಗಳ ಕಾಲ ಪಕ್ಷದ ಜಿಲ್ಲಾ ಸಮಿತಿ ಹಾಗೂ ಗಡಿ



ಸಮಿತಿ ಸದಸ್ಯರೊಂದಿಗೆ ಚರ್ಚೆ ನಡೆಸಿದ್ದರು. ಅದರಂತೆ ನವಂಬರ್ 4 ರಂದು ಲೋಕಸಭಾ ವ್ಯಾಪ್ತಿಯ 8 ವಿಧಾನಸಭಾ ಕ್ಷೇತ್ರಗಳಲ್ಲೂ ಪರ್ಯಾಯ ರಾಜಕಾರಣ ಸಮಾವೇಶಗಳನ್ನು ನಡೆಸುವುದೆಂದು ತೀರ್ಮಾನಿಸಲಾಗಿತ್ತು. ಅಂದಿನ ನಿರ್ಣಯದಂತೆ ಕಾಸರಗೋಡು ಜಿಲ್ಲೆಯ ಸಿಪಿಐ(ಎಂ) ಜಿಲ್ಲಾ ಸಮಿತಿ ಮುಖಂಡರು ನವಂಬರ್ 4 ರಂದು ನಡೆದ ಸಮಾವೇಶದಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡಿದರು.

ಉಳ್ಳಾಲ (ಮಂಗಳೂರು ಅಸೆಂಬ್ಲಿ ಕ್ಷೇತ್ರ), ಮಂಗಳೂರುಗಳಲ್ಲಿ ನಡೆದ ಸಮಾವೇಶಗಳಲ್ಲಿ ಹಿರಿಯ ಮುಂದಾಳು ಎ.ಕೆ.ನಾರಾಯಣ ಬಂಟ್ವಾಳ ಮತ್ತು ಸುಳ್ಯದಲ್ಲಿ ನಡೆದ ಸಭೆಯ ಮಾಜಿ ಶಾಸಕರಾದ ಸಿ.ಎಚ್.ಕುಂಞಂಬು ಗುರುಪುರದಲ್ಲಿ ಪಿ.ರಾಘವನ್, ಬೆಳ್ತಂಗ ಮತ್ತು ಪುತ್ತೂರಿನಲ್ಲಿ ಕೆ.ಪಿ.ಸತೀಶ್ಚಂದ್ರ ಮತ್ತು ಮೂಡಬಿದ್ರೆಯಲ್ಲಿ ಕೆ.ಆರ ಜಯಾನಂದ ಮಾರ್ಗದರ್ಶಕರಾ ಭಾಗವಹಿಸಿದರು. ಸಿಪಿಐ(ಎಂ) ದ. ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡ ಸದಸ್ಯರೂ ಇಬ್ಬಿಬ್ಬರು ಪ್ರತಿ ಸಮಾವೇಶಗಳ ಉಪಸ್ಥಿತರಿದ್ದು ಚರ್ಚೆಗೆ ಮಾರ್ಗದರ್ಶನದ ಸಹಕರಿಸಿದರು.

ಎಂಟೂ ಕಡೆಗಳಲ್ಲಿಯೂ ನಡೆ ಚರ್ಚೆಯಲ್ಲಿ ಚುನಾವಣಾ ಬೂತ್ ಮಟ್ಟದಲ್ಲಿ ಪಕ್ಷ ಹಿತೈಷಿಗಳ ಸಮಿತಿಗಳನ ರಚಿಸಬೇಕೆಂದು ತೀರ್ಮಾನಿಸಲಾಗಿದೆ. ಎಲ ಕಡೆಗಳಲ್ಲೂ ಪಕ್ಷದ ಕಾರ್ಯಕರ್ತರಲ್ಲಿ ವಿ ಉತ್ಸಾಹ ಉಂಟಾಗಿರುವುದು ಕಂ ಬಂತು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಚುನಾವಣಾ ಅಭಿಪ್ರಾಯ ಸಂಗ್ರಹಗಳು –ನಿಷೇಧ ಬೇಡ, ಸಮಯ ಮಿತಿ ಇರಲಿ

ಸೀತಾರಾಮ್ ಯೆಚೂರಿ

ಚುನಾವಣಾ ಅಭಿಪ್ರಾಯ ಸಂಗ್ರಹದ ಕುರಿತು ಈಗ ದೊಡ್ಡ ಕೂಗಾಟ ಕೇಳ ಬರುತ್ತಿದೆ. 'ಕಾಸಿಗಾಗಿ ಸುದ್ದಿ'ಯ ಪಿಡುಗಿನ ರಂಪಾಟ ನಡೆದಿರುವಾಗ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ವಸ್ತುನಿಷ್ಠ ಸುದ್ದಿಯನ್ನು ಪಸರಿಸುವ ಮಾಧ್ಯಮ ಸ್ವಾತಂತ್ರ್ಯ ಗಂಭೀರವಾಗಿ ವಿರೂಪಗೊಂಡಿದೆ. ಇಂತಹ ಪರಿಸ್ಥಿತಿಗಳಲ್ಲಿ ಅಭಿಪ್ರಾಯ ಸಂಗ್ರಹಗಳನ್ನು ತಮಗೆ ಬೇಕಾದಂತೆ ತಿರುಚಿಕೊಳ್ಳುವ, ಆಮೂಲಕ ಮತದಾರರ ಮೇಲೆ ಅನಗತ್ಯವಾದ, ತಪ್ಪಾದ ಪ್ರಭಾವ ಹೇರುವ ಅವಕಾಶಗಳು ಅಪಾರ. ಹೀಗಾಗಿ, ಭಾರತದ ಸಂದರ್ಭದಲ್ಲಿ ಒಂದು ನಿರ್ದಿಷ್ಟ ಹಕ್ಕಿನ ಮೇಲೆ "ತರ್ಕಬದ್ಧ ಮಿತಿ"ಗಳನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಹೀಗಿರುವಾಗ ಅಭಿಪ್ರಾಯ ಸಂಗ್ರಹಗಳ ಮೇಲೆ ಸಾರಾಸಗಟು ನಿಷೇಧ ಇರಬಾರದಾದರೂ, ಇವನ್ನು ಒಂದು ತರ್ಕಬದ್ಧ ಅವಧಿಯಲ್ಲಿ, ಪ್ರಕಟಿಸಬಾರದು ಎಂದು ಸೂಚಿಸುವುದು ನ್ಯಾಯಯುತವಾಗುತ್ತದೆ.

ಒಂದು ಚುನಾವಣೆಯ ಮೊದಲು ಚುನಾವಣಾ ಅಭಿಪ್ರಾಯ ಸಂಗ್ರಹವನ್ನು ನಿಷೇಧಿಸುವ ಕುರಿತು ಕೇಂದ್ರೀಯ ಚುನಾವಣಾ ಆಯೋಗ ರಾಜಕೀಯ ಪಕ್ಷಗಳ ಅಭಿಪ್ರಾಯವನ್ನು ಕೇಳಲು ಮುಂದಾಗಿರುವುದರ ಬಗ್ಗೆ ಈಗ ದೊಡ್ಡ ಕೂಗಾಟ ನಡೆಯುತ್ತಿದೆ. ಪ್ರಧಾನ ಪ್ರತಿಪಕ್ಷ ಬಿಜೆಪಿ ಮತ್ತು ಮಾಧ್ಯಮಗಳ ಕೆಲವಿಭಾಗಗಳು ಇದು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾಧ್ಯಮ ಸ್ವಾತಂತ್ರ್ಯದ ಮೇಲೊಂದು ಅತಿರೇಕದ ದಾಳಿ ಎಂದು ಹೇಳಿವೆ. ಈ ಸಂದರ್ಭದಲ್ಲಿ ಕೆಲವು ಅಂಶಗಳನ್ನು ಪರಿಶೀಲಿಸಬೇಕಾಗಿದೆ.

ಮೊದಲನೆಯದಾಗಿ, ಚುನಾವಣಾ ಆಯೋಗ ಇಂತಹ ಮುತುವರ್ಜಿ ವಹಿಸಿರುವುದು ಮೊದಲ ಸಲವೇನಲ್ಲ. ಒಂದು ದಶಕದ ಹಿಂದೆ ನಡೆದ ಇಂತಹ ಸಮಾಲೋಚನೆಗಳ ಫಲವಾಗಿಯೇ ಮತದಾನ ಪ್ರಕ್ರಿಯೆ ಆರಂಭವಾಗಿ ಅದು ಮುಗಿಯುವ ವರೆಗೆ ಮತಗಟ್ಟೆಯಲ್ಲಿ ಅಭಿಪ್ರಾಯ ಸಂಗ್ರಹ(ಎಕ್ಸಿಟ್ ಪೋಲ್)ದ ಫಲಿತಾಂಶವನ್ನು ಪ್ರಕಟಿಸುವುದನ್ನು ನಿಷೇಧಿಸಲಾಯಿತು. ಏಕೆಂದರೆ ಮತದಾನ ಅನೇಕ ಹಂತಗಳಲ್ಲಿ ನಡೆಯುತ್ತಿದ್ದು, ಒಂದು ಹಂತದಲ್ಲಿನ ಎಕ್ಸಿಟ್ ಪೋಲ್‌ನ ಫಲಿತಾಂಶದ ಪ್ರಕಟಣೆ, ಅದು ಸರಿಯಿರಲಿ, ತಪ್ಪಿರಲಿ, ಮುಂದಿನ ಹಂತಗಳ ಮತದಾನದಲ್ಲಿ ಮತದಾರರ ಮೇಲೆ ಪ್ರಭಾವ ಬೀರುತ್ತದೆ. ಆಗ ಅಭಿಪ್ರಾಯ ಸಂಗ್ರಹದ ಪ್ರಶ್ನೆಯೂ ಚರ್ಚಿಸಲ್ಪಟ್ಟಿತು. ಆದರೆ ಆ ಬಗ್ಗೆ ಯಾವುದೇ ನಿರ್ಣಯವನ್ನು ಕೈಗೊಂಡಿರಲಿಲ್ಲ.

ಬಿಜೆಪಿಯ ವಿಚಿತ್ರ ಬೊಬ್ಬೆ

ಎರಡನೆಯದಾಗಿ, ಬಿಜೆಪಿ ಈಗ ಇದು ಜನತೆಗೆ ಮಾಹಿತಿ ಪಡೆಯುವ ಮೂಲಭೂತ ಹಕ್ಕಿನ ನಿರಾಕರಣೆ ಎಂದು ಹೀಗಳೆಯುತ್ತಿರುವುದು ನಿಜಕ್ಕೂ ವಿಚಿತ್ರ. ಮೊದಲನೆಯದಾಗಿ, ಅಭಿಪ್ರಾಯ ಸಂಗ್ರಹ ಮಾಹಿತಿ ಅಲ್ಲ. ಅದು, ಹೆಸರೇ ಸೂಚಿಸುವಂತೆ ಅಭಿಪ್ರಾಯಗಳಷ್ಟೇ. ಅಭಿಪ್ರಾಯಗಳು ತಟಸ್ಥ ಮಾಹಿತಿಗಳಲ್ಲ, ಅಥವ ವಸ್ತುನಿಷ್ಠ ಸುದ್ದಿಯೇನಲ್ಲ. ಅಲ್ಲದೆ, 2004ರ ಸಾರ್ವತ್ರಿಕ ಚುನಾವಣೆಗಳ ನಂತರ ಚುನಾವಣಾ ಆಯೋಗ ನಡೆಸಿದ ಇಂತಹ ಒಂದು ಸಭೆಯಲ್ಲಿ ಬಿಜೆಪಿ ತದ್ವಿರುದ್ಧ ಅಭಿಪ್ರಾಯವನ್ನು ಹೊಂದಿತ್ತು. ಚುನಾವಣಾ ಅಧಿಸೂಚನೆ ಹೊರಡಿಸಿದ ನಂತರ ಅಭಿಪ್ರಾಯ ಸಂಗ್ರಹಗಳ ಪ್ರಕಟಣೆಯನ್ನು ನಿಷೇಧಿಸಬೇಕೆಂದು ಅದು ವಾದ ಹೂಡಿತ್ತು. ಚುನಾವಣಾ ಅಯೋಗ ಜುಲೈ 2004ರಲ್ಲಿ ಹೊರಡಿಸಿದ ದಸ್ತಾವೇಜು ("ಪ್ರಸ್ತಾವಿತ ಚುನಾವಣಾ ಸುಧಾರಣೆಗಳು: ಒಂದು ಚುನಾವಣಾ ಆಯೋಗದ ದಸ್ತಾವೇಜು) ಹೀಗೆ ಹೇಳಿತ್ತು: "ಭಾಗವಹಿಸಿದ್ದ ಎಲ್ಲ ಸದಸ್ಯರ ಒಮ್ಮತದ ಅಭಿಪ್ರಾಯವೆಂದರೆ ಚುನಾವಣೆ ನಡೆಸುವ ಶಾಸನಾತ್ಮಕ ಅಧಿಸೂಚನೆ ಹೊರಡಿಸಿದ ದಿನದಿಂದ ಮತದಾನ ಸಂಪೂರ್ಣಗೊಳ್ಳುವ ವರೆಗೆ ಅಭಿಪ್ರಾಯ ಸಂಗ್ರಹಗಳಿಗೆ ಮತ್ತು ಅವುಗಳ ಫಲಿತಾಂಶಗಳ ಪ್ರಕಟಣೆಗಳಿಗೆ ಅವಕಾಶ ನೀಡಬಾರದು."

ಆದ್ದರಿಂದ, ಬಿಜೆಪಿ ಸ್ಪಷ್ಟವಾಗಿಯೂ, ಚುನಾವಣೆಗಳ ಮೊದಲು ತರವಲ್ಲದ ರೀತಿಯಲ್ಲಿ, ತನಗೆ ಅನುಕೂಲವಾಗುವಂತೆ ನಡೆಸುವ ಅಭಿಪ್ರಾಯ ಸಂಗ್ರಹಗಳ ಮೂಲಕ ಮತದಾರರ ಮೇಲೆ ಪ್ರಭಾವ ಬೀರಲು ಯತ್ನಿಸುವ, 2004ರಲ್ಲಿ ಆದಂತೆ ಅದು ವಿಫಲವಾದರೆ ಇಂತಹ ಅಭಿಪ್ರಾಯ ಸಂಗ್ರಹಗಳನ್ನು ನಿಷೇಧಿಸಬೇಕೆಂದು ಕೇಳುವ ಪ್ರಯತ್ನದಲ್ಲಿದೆ. ಇದೆ ಸಾಕು, ವಾಸ್ತವತೆ ಏನು ಎಂದು ತೋರಿಸಲು– ಅಂದರೆ ಅಭಿಪ್ರಾಯ ಸಂಗ್ರಹಗಳನ್ನು ಚುನಾವಣಾ ಪ್ರಚಾರದ ಸಲಕರಣೆಯಾಗಿ ಬಳಸಲಾಗುತ್ತದೆಯೇ ಹೊರತು ಸರ್ವೆಯಲ್ಲಿ ಭಾಗವಹಿಸಿದವರ ವಸ್ತುನಿಷ್ಠ ಅಭಿಪ್ರಾಯಗಳನ್ನು ತಿಳಿಯಲು ಅಲ್ಲ.

ಪಾಶ್ಚಿಮಾತ್ಯ ದೇಶಗಳಲ್ಲಿ

ಮೂರನೆಯದಾಗಿ, ಮಾಧ್ಯಮಗಳ ಕೆಲವು ವಿಭಾಗಗಳು, ಹೆಚ್ಚಿನ ಪಾಶ್ಚಿಮಾತ್ಯ ಪ್ರಜಾಪ್ರಭುತ್ವಗಳು ಇಂತಹ ಅಭಿಪ್ರಾಯ ಸಂಗ್ರಹಗಳಿಗೆ ಅನುಮತಿ ನೀಡಿರುವಾಗ ಭಾರತೀಯ ಜನತೆಗೆ ಇಂತಹ ಜ್ಞಾನದ ಹಕ್ಕನ್ನು ಏಕೆ ನಿರಾಕರಿಸಬೇಕು ಎಂದು ವಾದ ಹೂಡುತ್ತಾರೆ. ಇದು ಸರಿಯಲ್ಲ. ಮತದಾನದ ದಿನದ ಮೊದಲು ಮೌನದ ಅಥವ ವಿವಿಧ ಅಭಿಪ್ರಾಯಗಳು ಮತ್ತು ದೃಷ್ಟಿಕೋನಗಳ ಬಗ್ಗೆ ತೂಗಿಸಿ ನೋಡುವ ಚಿಂತನೆಯ ಅವಧಿಯನ್ನು ಕೊಡುವುದು ಹಲವು ಪಾಶ್ಚಿಮಾತ್ಯ ಪ್ರಜಾಪ್ರಭುತ್ವಗಳಲ್ಲಿನ ಆಚರಣೆಯ ಕೇಂದ್ರ ವಿಚಾರ. ಸ್ಪೇನಿನಲ್ಲಿ ಇದನ್ನು 'ಚಿಂತನೆ"ಯ ಅವಧಿ ಎಂದೇ ಹೆಸರಿಸಲಾಗಿದೆ. ಇಟೆಲಿಯಲ್ಲಿ ಇಂತಹ ನಿಷೇಧ 15 ದಿನಗಳ ವರೆಗೆ ಇರುತ್ತದೆ. ನ್ಯೂಜಿಲೆಂಡ್‌ನಲ್ಲಂತೂ ಮತದಾನದ ದಿನದಂದು ಸಾಮಾಜಿಕ ಮಾಧ್ಯಮ ಕಾರ್ಯನಿರ್ವಹಿಸದಂತೆ ಮಾಡಲಾಗುತ್ತದೆ. ಪ್ರತಿಯೊಂದು ಪಾಶ್ಚಿಮಾತ್ಯ ಪ್ರಜಾಪ್ರಭುತ್ವದಲ್ಲಿ ಮತದಾನದ ದಿನದ ಮೊದಲು ಪ್ರಚಾರಕಾರ್ಯವನ್ನು ನಿಷೇಧಿಸಿರುವ ಒಂದು ಅವಧಿ ಇರುತ್ತದೆ.

ಭಾರತದಲ್ಲಿ ಈಗ ಸದ್ಯಕ್ಕೆ ಪ್ರಚಾರ ಕಾರ್ಯ ಮತದಾನದ 48 ಗಂಟೆಗಳ ಮೊದಲು ಕೊನೆಗೊಳ್ಳುತ್ತದೆ. ಮಾದರಿ ನೀತಿ ಸಂಹಿತೆ ಮತದಾನದ 40ದಿನಗಳ ಮೊದಲಿನಿಂದ ಅನ್ವಯವಾಗುತ್ತದೆ. ಈ ಅವಧಿಯಲ್ಲಿ ಸರಕಾರಗಳು ಮತದಾರರ ಮೇಲೆ ಅನಗತ್ಯವಾಗಿ ಪ್ರಭಾವ ಬೀರುವ ಯಾವುದೇ ಹೊಸ ಆಮಿಷಗಳನ್ನು ಪ್ರಕಟಿಸುವಂತಿಲ್ಲ. ಅಲ್ಲದೆ ಯಾವುದೇ ಪಕ್ಷ ಮತದಾರರ ಮೇಲೆ ಪ್ರಭಾವ ಬೀರುವ ಯಾವುದೇ ಉದ್ರೇಕಕಾರಿ ಪ್ರಚಾರದಲ್ಲಿ ತೊಡಗುವಂತಿಲ್ಲ. ಹೀಗೆ ಇಂತಹ ಕಟ್ಟುಪಾಡುಗಳು ಹೊಸದೇನಲ್ಲ. ಅವುಗಳ ಉದ್ದೇಶ ಮತದಾರರ ಮೇಲೆ ಪ್ರಚಾರವನ್ನು ಅನಗತ್ಯವಾಗಿ ತುರುಕದಂತೆ ಆಮೂಲಕ ತರ್ಕಬದ್ಧವಾಗಿ ಮತ ಹಾಕುವ ಕ್ರಿಯೆ ವಿರೂಪಗೊಳ್ಳದಂತೆ ಅವರನ್ನು ರಕ್ಷಿಸುವುದು.


ತರ್ಕಬದ್ಧ ಮಿತಿಗಳು

ನಾಲ್ಕನೆಯದಾಗಿ, ಯಾವುದೇ ಸ್ವಾತಂತ್ರ್ಯದ ಪರಿಕಲ್ಪನೆಯಲ್ಲಿ ಅಡಕವಾಗಿರುವ ಸಂಗತಿಯೆಂದರೆ ಸಂಬಂಧಪಟ್ಟ ಹಕ್ಕು ಮುಕ್ತವಾಗಿರಬೇಕು ಎಂಬುದು. ಸಂಬಂಧಪಟ್ಟ ಹಕ್ಕಿಗೆ ಏನಾದರೂ ಬೆಲೆ ತೆರಬೇಕಾಗಿದ್ದರೆ ಅಲ್ಲಿ ಸ್ವಾತಂತ್ರ್ಯ ಎಂಬುದು ಇರುವುದಿಲ್ಲ. ಇಂದಿನ ಭಾರತದಲ್ಲಿ 'ಕಾಸಿಗಾಗಿ ಸುದ್ದಿ'ಯ ಪಿಡುಗಿನ ರಂಪಾಟ ನಡೆದಿರುವಾಗ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ವಸ್ತುನಿಷ್ಠ ಸುದ್ದಿಯನ್ನು ಪಸರಿಸುವ ಮಾಧ್ಯಮ ಸ್ವಾತಂತ್ರ್ಯ ಗಂಭೀರವಾಗಿ ವಿರೂಪಗೊಂಡಿದೆ. ಎಷ್ಟರ ಮಟ್ಟಿಗೆ ಎಂದರೆ ಕೆಲವೊಮ್ಮೆ ನೀತಿಬಾಹಿರವಾಗಿ ಲಾಭ ಗಿಟ್ಟಿಸುವ ಬಲಿಪೀಠದ ಮೇಲೆ ಸುದ್ದಿಯ ಎಲ್ಲ ವಸ್ತುನಿಷ್ಠತೆಯನ್ನು ಬಲಿಗೊಡಲಾಗುತ್ತದೆ. ಇಂತಹ ಪರಿಸ್ಥಿತಿಗಳಲ್ಲಿ ಅಭಿಪ್ರಾಯ ಸಂಗ್ರಹಗಳನ್ನು ತಮಗೆ ಬೇಕಾದಂತೆ ತಿರುಚಿಕೊಳ್ಳುವ, ಆಮೂಲಕ ಮತದಾರರ ಮೇಲೆ ಅನಗತ್ಯವಾದ, ತಪ್ಪಾದ ಪ್ರಭಾವ


ಪುಟ 15 ಕ್ಕೆ

ಎಕ್ಸಿಟ್ ಪೋಲ್‌ಗಳು ಮತ್ತು ಜನತೆಯ ತೀರ್ಪುಗಳು

2004 ರ ಸಾರ್ವತ್ರಿಕ ಚುನಾವಣೆಗಳಲ್ಲಿ ಎಕ್ಸಿಟ್ ಪೋಲ್‌ಗಳು ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಕೂಟಕ್ಕೆ 245 ರಿಂದ 285 ಸೀಟುಗಳನ್ನು ಕೊಟ್ಟಿದ್ದರೆ ಕಾಂಗ್ರೆಸ್ ನೇತೃತ್ವದ ಕೂಟಕ್ಕೆ ನೀಡಿದ್ದು 175ರಿಂದ 205. ವಾಸ್ತವವಾಗಿ ಜನತೆಯ ತೀರ್ಪು ಸಂಪೂರ್ಣ ಭಿನ್ನ– ಬಿಜೆಪಿ ನೇತೃತ್ವದ ಎನ್‌ಡಿಎಗೆ 189 ಮತ್ತು ಕಾಂಗ್ರೆಸ್ ನೇತೃತ್ವದ ಯುಪಿಎ ಗೆ 219. ಯುಪಿಎ ಒಟ್ಟು 61 ಸ್ಥಾನಗಳನ್ನು ಪಡೆದಿದ್ದ ಎಡಪಕ್ಷಗಳ ಬೆಂಬಲದಿಂದ ಸರಕಾರ ರಚಿಸಿತು.



2009 ರ ಸಾರ್ವತ್ರಿಕ ಚುನಾವಣೆಗಳಲ್ಲಿ ಎಕ್ಸಿಟ್ ಪೋಲ್‌ಗಳು ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಕೂಟಕ್ಕೆ ನೀಡಿದ್ದು 185ರಿಂದ 205 ಕೊಟ್ಟಿದ್ದರೆ, ಬಿಜೆಪಿ ನೇತೃತ್ವದ ಕೂಟಕ್ಕೆ 165ರಿಂದ 198 ಸೀಟುಗಳನ್ನು ಕೊಟ್ಟಿದ್ದವು.ಇತರ ಪಕ್ಷಗಳಿಗೆ 96ರಿಂದ 172. ವಾಸ್ತವವಾಗಿ ಜನತೆಯ ತೀರ್ಪು– ಬಿಜೆಪಿ ನೇತೃತ್ವದ ಎನ್‌ಡಿಎಗೆ ಕೇವಲ 159 ಮತ್ತು ಕಾಂಗ್ರೆಸ್ ನೇತೃತ್ವದ ಯುಪಿಎ ಗೆ 262. ಉಳಿದ ಪಕ್ಷಗಳಿಗೆ 78.



ಗುಜರಾತ್ 'ಅಭಿವೃದ್ಧಿ' – ಒಂದು ಮಾದರಿಯೇ?

ದೇಶದಲ್ಲಿ 'ನಮೋ... ನಮೋ' ಎಂಬ ಹುಚ್ಚಿಲೆಬ್ಬಿಸಿ ಒಂದು ಬಗೆಯ ಸಮೂಹ ಸನ್ನಿಯನ್ನು ಸೃಷ್ಟಿಸುವ ಪ್ರಯತ್ನ ನಡೆಯುತ್ತಿದೆ. ಗುಜರಾತ್ ರಾಜ್ಯದಲ್ಲಿ ನರೇಂದ್ರ ಮೋದಿ ನಾಯಕತ್ವದಲ್ಲಿ ಭಾರಿ ಅಭಿವೃದ್ಧಿ ಸಾಧಿಸಿಬಿಡಲಾಗಿದೆ. ನರೇಂದ್ರ ಮೋದಿ ಸಾಮರ್ಥ್ಯ ಮತ್ತು ಸಾಧನೆಗೆ ದೇಶದಲ್ಲಿ ಹೋಲಿಕೆಯೇ ಇಲ್ಲ ಎಂದು ಬೊಬ್ಬಿಡಲಾಗುತ್ತಿದೆ. ಗುಜರಾತ್ ರಾಜ್ಯದಲ್ಲಿ ಮೋದಿ ಸರಕಾರದ ಸಹಕಾರ ಮತ್ತು ನೇರ ಕುಮ್ಮಕ್ಕಿನೊಂದಿಗೆ 2002ರಲ್ಲಿ ನಡೆದ ಸಾವಿರಾರು ಜನ ಮುಗ್ಧ ಮುಸ್ಲಿಂ ಅಲ್ಪಸಂಖ್ಯಾತರ ನೀಚ ನರಮೇಧ, ಅತ್ಯಾಚಾರಗಳನ್ನು ಮರೆಮಾಚಲು ಪ್ರಯತ್ನಿಸಲಾಗುತ್ತಿದೆ. ಅಲ್ಲಿ ಬಿಜೆಪಿಯ ನಿರಂತರ ಗೆಲುವಿನ ಹಿಂದೆ ಇಂತಹ ಭೀಕರ ಭಯೋತ್ಪಾದನೆ ಮತ್ತು ಕೋಮುಧ್ರುವೀಕರಣ ಇದೆ ಎಂಬುದನ್ನು ಗುರುತಿಸದಂತೆ ಮಾಡಲು ಇಂತಹ ಪ್ರಚಾರ ಅವರಿಗೆ ಅಗತ್ಯವಾಗಿದೆ. ಇದು ನರಮನುಷ್ಯರನ್ನು ಸುಟ್ಟ ಕಮಟು ವಾಸನೆಯನ್ನು ಮರೆಮಾಚಲು ಗಂಧ-ಧೂಪವನ್ನು ಪೂಸಿದಂತೆ ಕಾಣುತ್ತಿದೆ. ಮೋದಿಯ ರಾಜ್ಯದ ಜನರ ಬಡತನ, ತಾಯಂದಿರ ಅಪೌಷ್ಟಿಕತೆಗಳನ್ನು ನೋಡಿದ್ದಲ್ಲಿ ಸಿಗುವ ಚಿತ್ರಣ ಬೇರೆಯದೇ ಆಗಿದೆ. ದೈತ್ಯ ಕಾರ್ಪೋರೇಟ್ ಕಂಪನಿಗಳಿಗೆ ಆತ್ಮಸಾಕ್ಷಿಯನ್ನು ಮಾರಿಕೊಳ್ಳಲು ಸಿದ್ಧರಿಲ್ಲದ ಯಾರಾದರೂ ಈ ಅಭಿವೃದ್ಧಿ ಕತೆಯ ಪೊಳ್ಳುತನವನ್ನು ಗುರುತಿಸಲು ಸಾಧ್ಯ. ಓದಿ ನಿಮಗಾಗಿ ಒಂದು ಲೇಖನ.

ಕೆ.ಎಂ. ನಾಗರಾಜ್

ಮಹಾತ್ಮ ಗಾಂಧಿ, ಸರ್ದಾರ್ ಪಟೇಲ್ ಮುಂತಾದ ಅನೇಕ ಮುಂದಾಳುಗಳಿಂದ ಮತ್ತು ಸ್ವಾತಂತ್ರ್ಯ ಚಳುವಳಿಗೆ ಒಂದು ಮುಖ್ಯವಾದ ತಿರುವನ್ನು ಕೊಟ್ಟ ಉಪ್ಪಿನ ಸತ್ಯಾಗ್ರಹದಂತಹ ಚಾರಿತ್ರಿಕ ಘಟನೆಗಳಿಂದ ಗುಜರಾತ್ ಪ್ರಖ್ಯಾತಿ ಪಡೆದಿದೆ. ಅದು, ಒಂದು ಆಯಕಟ್ಟಿನ ಜಾಗದಲ್ಲಿದ್ದು ಉದ್ದದ ಸಮುದ್ರತೀರದಂತಹ ಅನೇಕ ಅನುಕೂಲಗಳಿಂದ ನೂರು ವರ್ಷಗಳಿಗೂ ಹೆಚ್ಚಿನ ಅವಧಿ ಹೊರದೇಶಗಳೊಂದಿಗಿನ ವ್ಯಾಪಾರೋದ್ಯಮದಿಂದಾಗಿ ಅಭಿವೃದ್ಧಿ ಹೊಂದುತ್ತಿದೆ. ಸ್ವಾಭಾವಿಕವಾಗಿ, ಅದು ಬೇರೆ ರಾಜ್ಯಗಳಿಗಿಂತ ಹೆಚ್ಚಿನ ಪ್ರಗತಿ ಸಾಧಿಸಬಹುದಾಗಿದೆ. ಕಳೆದ ಹನ್ನೆರಡು ವರ್ಷಗಳಲ್ಲಿ, ನರೇಂದ್ರ ಮೋದಿ ನಾಯಕತ್ವದಲ್ಲಿ, ಗುಜರಾತ್‌ನಲ್ಲಿ ಆಗಿರುವ ಅಭಿವೃದ್ಧಿ ಈಗ ಒಂದು ಚರ್ಚೆಗೆ ಗ್ರಾಸವಾಗಿದೆ.

ಮುಂಬರುವ 2014ರ ಲೋಕಸಭಾ ಚುನಾವಣೆಗಳಲ್ಲಿ ನರೇಂದ್ರ ಮೋದಿಯೇ ತನ್ನ ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಭಾಜಪವು ಘೋಷಿಸಿದೆ. ಮೋದಿ ನಾಯಕತ್ವದಲ್ಲಿ ಗುಜರಾತ್ ಕಂಡ ಅಭಿವೃದ್ಧಿಯನ್ನು ಹಿಂದೆ ಯಾರೂ ಸಾಧಿಸಿಲ್ಲ; ಮುಂದೆ ಯಾರೂ ಸಾಧಿಸಲಾಗದು ಎಂಬಂತೆ "ಗುಜರಾತ್ ಮಾದರಿ ಅಭಿವೃದ್ಧಿ"ಯ ಬಗ್ಗೆ ಅಬ್ಬರದ ಪ್ರಚಾರಕ್ಕೆ ನಡೆದಿದೆ. ಆತನೊಬ್ಬ "ವಿಕಾಸ ಪುರುಷ" ಎಂದು ಬಿಂಬಿಸಲು, ಅಮೇರಿಕದ ಲಾಬಿ (ನಿರ್ದಿಷ್ಟ ಗುಂಪುಗಳ ಮೇಲೆ ಪ್ರಭಾವ ಬೀರಲು ವ್ಯವಸ್ಥಿತ ಪ್ರಯತ್ನ ಮಾಡುವ ವಶೀಲಿಗಾರರ ತಂಡ) ಮಾಡುವ ಕಂಪೆನಿಯೊಂದು 2007 ರಿಂದ ತಿಂಗಳಿಗೆ 25,000 ಡಾಲರ್‌ಗಳ ಸಂಭಾವನೆಯ ಮೇಲೆ ದೇಶದ ಒಳಗೂ ಹೊರಗೂ ಮೋದಿ ವರ್ಚಸ್ಸನ್ನು ಹೆಚ್ಚಿಸಲು ಪ್ರಚಾರ ಕಾರ್ಯನಿರ್ವಹಿಸುತ್ತಿದೆ. ಐದಾರು ವರ್ಷಗಳಿಂದ ಈ "ಗುಜರಾತ್ ಮಾದರಿ ಅಭಿವೃದ್ಧಿ"ಯ ಪ್ರಚಾರವು ಅನೇಕರನ್ನು ಮರುಳು ಮಾಡಿರುವ ಅಂಶವನ್ನು 'ಫೇಸ್ ಬುಕ್' ಮತ್ತು 'ಟ್ವಿಟ್ಟರ್' ಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳಲ್ಲಿ ನೋಡಬಹುದು. ಅಂತರ್ಜಾಲದಲ್ಲಿ ವಿಕಾಸ ಪುರುಷನ ಸಾಧನೆಗಳನ್ನು ವ್ಯವಸ್ಥಿತವಾಗಿ ಪ್ರಸರಿಸಲು ಸುಮಾರು 6200 ಯುವಕರ ಒಂದು ಪಡೆ ಕಾರ್ಯ ನಿರ್ವಹಿಸುತ್ತಿದೆ. ತಮ್ಮ ಸ್ವಾರ್ಥ ಮತ್ತು ಲಾಭದ ದೃಷ್ಟಿಯಿಂದ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ಹಿಂಬಾಲಕರು ಹಾಗು ಕಾರ್ಪೋರೇಟ್ ಒಡೆತನದ ಮಾಧ್ಯಮಗಳು ಅದನ್ನು ಇಡೀ ದೇಶಕ್ಕೇ ಮಾದರಿಯೆಂಬಂತೆ ತುತ್ತೂರಿ ಊದುತ್ತಿದ್ದಾರೆ. ಇಂತಹ ಅಂತೆ-ಕಂತೆ ಪ್ರಚಾರಗಳಿಗೆ ಇತ್ತೀಚಿನ ಬೆಳವಣಿಗೆಯೊಂದು ಆಘಾತ ಉಂಟು ಮಾಡಿದಂತೆ ಕಾಣುತ್ತದೆ.

ಕೇಂದ್ರ ಸರ್ಕಾರವು ರಾಜ್ಯಗಳಿಗೆ ಒದಗಿಸಬಹುದಾದ ಹಣ ನಿಗದಿಮಾಡಲು ರಿಸರ್ವ್ ಬ್ಯಾಂಕಿನ ಗವರ್ನರ್ ರಘುರಾಮ್ ರಾಜನ್‌ರ ಅಧ್ಯಕ್ಷತೆಯಲ್ಲಿ ನೇಮಕ ಮಾಡಿದ್ದ ಸಮಿತಿಯ ವರದಿಯು ಇತ್ತೀಚೆಗೆ ಪ್ರಕಟವಾಗಿದೆ. ಅದು, ಜೀವನ ನಿರ್ವಹಣೆಯ ತಿಂಗಳ ತಲಾವಾರು ಖರ್ಚು, ಶಿಕ್ಷಣ, ಆರೋಗ್ಯ, ಗೃಹಸೌಕರ್ಯಗಳು, ಬಡತನದ ದರ, ಮಹಿಳಾ ಸಾಕ್ಷರತೆ, ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಗಳ ಪಾಲು, ನಗರೀಕರಣ ದರ, ಹಣಕಾಸು ಒಳಗೊಳ್ಳುವಿಕೆ ಮತ್ತು ಸಂಪರ್ಕಸಾಧನಗಳ ಲಭ್ಯತೆ, ಇಂತಹ ಹತ್ತು ಅಂಶಗಳನ್ನೊಳಗೊಂಡ ಒಂದು ಸೂಚ್ಯಂಕವೊಂದನ್ನು ತಯಾರಿಸಿ, ಅದರ ಆಧಾರದ ಮೇಲೆ ರಾಜ್ಯಗಳನ್ನು, ಅತ್ಯಲ್ಪ ಬೆಳವಣಿಗೆ ಸಾಧಿಸಿದ ರಾಜ್ಯಗಳು; ಅಲ್ಪ ಬೆಳವಣಿಗೆ ಸಾಧಿಸಿದ ರಾಜ್ಯಗಳು; ಮತ್ತು ಹೋಲಿಕೆಯ ದೃಷ್ಟಿಯಿಂದ ಬೆಳವಣಿಗೆ ಸಾಧಿಸಿದ ರಾಜ್ಯಗಳು ಎಂಬುದಾಗಿ ಮೂರು ಗುಂಪುಗಳಲ್ಲಿ ವಿಂಗಡಿಸಿದೆ.

ಅತ್ಯಲ್ಪ ಬೆಳವಣಿಗೆ	ಅಲ್ಪ ಬೆಳವಣಿಗೆ	ಹೋಲಿಕೆಯ ಬೆಳವಣಿಗೆ
ಒಡಿಸ್ಸಾ	ಮಣಿಪುರ	ಹರಿಯಾಣ
ಬಿಹಾರ	ಪಶ್ಚಿಮ ಬಂಗಾಳ	ಉತ್ತರಾಖಂಡ್
ಮಧ್ಯ ಪ್ರದೇಶ	ನಾಗಾಲ್ಯಾಂಡ್	ಮಹಾರಾಷ್ಟ್ರ
ಛತ್ತೀಸ್‌ಘಢ	ಆಂಧ್ರ ಪ್ರದೇಶ	ಪಂಜಾಬ್
ಝಾರ್ಖಂಡ್	ಜಮ್ಮು ಮತ್ತು ಕಾಶ್ಮೀರ	ತಮಿಳು ನಾಡು
ಅರುಣಾಚಲ ಪ್ರದೇಶ	ಮಿಝೋರಾಮ್	ಕೇರಳ
ಅಸ್ಸಾಮ್	ಗುಜರಾತ್	ಗೋವಾ
ಮೇಘಾಲಯ	ತ್ರಿಪುರಾ	
ಉತ್ತರ ಪ್ರದೇಶ	ಕರ್ನಾಟಕ	
ರಾಜಾಸ್ಥಾನ	ಸಿಕ್ಕಿಮ್	
	ಹಿಮಾಚಲ ಪ್ರದೇಶ	

ರಘುರಾಮ್ ರಾಜನ್ ಸಮಿತಿಯ ವರದಿಯ ಸಾರಾಂಶದಂತೆ ಇಪ್ಪತ್ತೆಂಟು ರಾಜ್ಯಗಳ ಸಾಧನೆಯ ರ್‍ಯಾಂಕಿಂಗ್ ಪಟ್ಟಿಯಲ್ಲಿ ಹೋಲಿಕೆಯ ದೃಷ್ಟಿಯಿಂದ ಬೆಳವಣಿಗೆ ಸಾಧಿಸಿದ ಏಳು ರಾಜ್ಯಗಳ ಪೈಕಿ ಗೋವಾ ಮೊದಲನೆಯ ಸ್ಥಾನದಲ್ಲಿದ್ದು ಕೇರಳ ಎರಡನೆಯ ಸ್ಥಾನದಲ್ಲಿದೆ. ಅಲ್ಪ ಬೆಳವಣಿಗೆಯ ಹನ್ನೊಂದು ರಾಜ್ಯಗಳ ಪೈಕಿ ಗುಜರಾತ್ ಐದನೆಯ ಸ್ಥಾನದಲ್ಲಿದೆ. ಅತ್ಯಲ್ಪ ಬೆಳವಣಿಗೆಯ ರಾಜ್ಯಗಳ ಪೈಕಿ ಒಡಿಸ್ಸಾ ಕೊನೆಯಲ್ಲಿದೆ. ಒಟ್ಟಾರೆ ರ್‍ಯಾಂಕಿಂಗ್‌ನಲ್ಲಿ ಗೋವಾ ಮೊದಲನೆಯ ಸ್ಥಾನದಲ್ಲೂ, ಕರ್ನಾಟಕ ಹತ್ತನೇ ಸ್ಥಾನದಲ್ಲೂ, ಗುಜರಾತ್ ಹನ್ನೆರಡನೆಯ ಸ್ಥಾನದಲ್ಲೂ ಮತ್ತು ಒಡಿಸ್ಸಾ ಇಪ್ಪತ್ತೆಂಟನೆಯ ಸ್ಥಾನದಲ್ಲಿವೆ. ಈ ವರದಿಯ ಪರಿಣಾಮವಾಗಿ "ಗುಜರಾತ್ ಮಾದರಿ ಅಭಿವೃದ್ಧಿ ಬಗ್ಗೆ ಐದಾರು ವರ್ಷಗಳ ಪೊಳ್ಳು ಪ್ರಚಾರ ಬಯಲಾಗಿದೆ.



ಬೃಹತ್ ಬಂಡವಾಳಿಗರ ಜೊತೆ ಕೈ ಜೋಡಿಸಿ ನಿಂತಿರುವ ನರೇಂದ್ರ ಮೋದಿ

ಗುಜರಾತ್ ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ವಾಸ್ತವಾಂಶಗಳು ಈಗ ಜನಸಾಮಾನ್ಯರ ವ್ಯಾಪ್ತಿಯಲ್ಲಿವೆ. ಮಹತ್ವದ ಸಂಗತಿ ಎಂದರೆ, ರಾಜ್ಯದ ಅಭಿವೃದ್ಧಿಯನ್ನು ಸಮಗ್ರವಾಗಿ ಪರಿಶೀಲಿಸಿದಾಗ, ಹೆಮ್ಮೆ ಪಡುವಂತದ್ದು ಏನೂ ಇಲ್ಲ. ಬದಲಿಗೆ, ಅನೇಕ ಅಂಶಗಳು ಆಶ್ಚರ್ಯ ಉಂಟುಮಾಡುತ್ತವೆ. 2011–12ರಲ್ಲಿ ಗುಜರಾತ್ ವಾರ್ಷಿಕ ತಲಾ ಆದಾಯ ರೂ. 52,708 ಇದ್ದು ರಾಜ್ಯ 9ನೇ ಸ್ಥಾನದಲ್ಲಿದ್ದರೆ, ರೂ 1,08,876 ತಲಾ ಆದಾಯ ಉಳ್ಳ ದೆಹಲಿಗೆ ಮೊದಲ ಸ್ಥಾನ. ಗುಜರಾತಿನಲ್ಲಿ. ಶೇ.31.8% ರಷ್ಟು ಜನ ಬಡವರು. (ಕೇರಳದಲ್ಲಿ 19.7% ಬಡವರು) ಮಹಾತ್ಮ ಗಾಂಧಿರಾಷ್ಟ್ರೀಯ ಉದ್ಯೋಗ ಖಾತ್ರಿ ಕಾಯ್ದೆಯಡಿ ಕೊಡುವ ಕೂಲಿಯು ತುಂಬಾ ಕಡಿಮೆ ಇದ್ದು ರಾಜ್ಯವು ಹದಿನಾಲ್ಕನೇ ಸ್ಥಾನದಲ್ಲಿದೆ. ಕೇರಳಕ್ಕೆ ಮೊದಲ ಸ್ಥಾನ. ರಾಜ್ಯದಲ್ಲಿ, 2011ರ ಸರಾಸರಿ ದಿನಗೂಲಿ ಪಟ್ಟಣಗಳಲ್ಲಿ ರೂ. 106; ಕೇರಳದಲ್ಲಿ ರೂ.218: ಗ್ರಾಮೀಣ ಪ್ರದೇಶಗಳಲ್ಲಿ ರೂ.83, ಪಂಜಾಬಿನಲ್ಲಿ ರೂ.152. ಹದಿನೈದು ವರ್ಷಗಳ ಹಿಂದೆ ಆರೋಗ್ಯದ ಮೇಲಿನ ಖರ್ಚು ಗುಜರಾತ್‌ನಲ್ಲಿ ರಾಜ್ಯದ ಆದಾಯದ ಶೇ.4.5 ಇತ್ತು. ಅದು ಈಗ ಶೇ 0.77 ಕ್ಕೆ ಇಳಿದಿದೆ. ಗುಜರಾತ್‌ನ 44.6% ರಷ್ಟು ಜನರು ಆಹಾರ ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. 55.5% ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. 50% ಮಕ್ಕಳ ತೂಕ ಇರಬೇಕಾದುದಕ್ಕಿಂತ ಕಡಿಮೆ ಇದೆ. ಜೀವಂತ ಹುಟ್ಟಿದ ಪ್ರತಿ ಸಾವಿರ ಮಕ್ಕಳಲ್ಲಿ 44 ಮಕ್ಕಳು ಸಾಯುತ್ತಿದ್ದು,

ಶಿಶು ಮರಣದಲ್ಲಿ ಗುಜರಾತ್ ರಾಜ್ಯವು ಹನ್ನೊಂದನೇ ಸ್ಥಾನದಲ್ಲಿದೆ.

ಗುಜರಾತ್ ಸರ್ಕಾರವು ಹೂಡಿಕೆದಾರರನ್ನು ಆಕರ್ಷಿಸಲು, 2003 ರಿಂದ ಆಗಾಗ್ಗೆ "ರೋಮಾಂಚಕ ಗುಜರಾತ್" ಹೆಸರಿನ ಮೇಳ ನಡೆಸಿ, ಹೂಡಿಕೆದಾರರು ಅಲ್ಲಿ ಮಾಡಿದ ಘೋಷಣೆಗಳನ್ನೇ ಸಾಧನೆಗಳು ಎಂಬಂತೆ ಪ್ರಚಾರ ನಡೆದಿದೆ. ಘೋಷಣೆ ಮತ್ತು ಸಾಧನೆಗಳ ನಡುವಿನ ಅಂತರವನ್ನು ಗಮನಿಸಿದರೆ ಯಾರಿಗಾದರೂ ಇರಿಸು ಮುರಿಸಾಗುತ್ತದೆ. ಉದಾಹರಣೆಗೆ, ಗುಜರಾತ್ ಸರ್ಕಾರದ ಆರ್ಥಿಕ-ಸಾಮಾಜಿಕ ಪರಿಶೀಲನಾ ವರದಿಯ ಪ್ರಕಾರ, 2011ರಲ್ಲಿ ಘೋಷಣೆಯಾದ ಮೊತ್ತ 20,83,047 ಕೋಟಿ (ಇಪ್ಪತ್ತು ಲಕ್ಷ ಎಂಭತ್ತಮೂರು ಸಾವಿರ ನಲವತ್ತೇಳು ಕೋಟಿ) ರೂಪಾಯಿಗಳು. ಅದರಲ್ಲಿ ಕಾರ್ಯಗತವಾದ ಮೊತ್ತ ಕೇವಲ 29,813 ಕೋಟಿ ರೂಪಾಯಿಗಳು ಮಾತ್ರ. ಅಂದರೆ, ಕೇವಲ 1.5%. ಹೇಗಿದೆ ಪ್ರಚಾರಗಳ ಸಾಧನೆ!

ಇತ್ತೀಚಿನವರೆಗೆ, ವಿದೇಶಿ ನೇರ ಬಂಡವಾಳ ಹೂಡಿಕೆಯಾದ ರಾಜ್ಯಗಳ ಪೈಕಿ, ಗುಜರಾತ್ ಮೊದಲ ಸ್ಥಾನದಲ್ಲಿದೆ ಎಂದು ಪ್ರಚಾರ ನಡೆದಿತ್ತು. ಆದರೆ, ವಾಸ್ತವವಾಗಿ, 2000-2012 ರ ನಡುವಿನ ಇಡೀ ಹನ್ನೆರಡು ವರ್ಷಗಳ ಅವಧಿಯಲ್ಲಿ, ವಿದೇಶಿ ನೇರ ಬಂಡವಾಳ ಹೂಡಿಕೆಯಾದ ರಾಜ್ಯಗಳ ಪೈಕಿ, ಗುಜರಾತ್ ಐದನೆಯ ಸ್ಥಾನದಲ್ಲಿದೆ. ಮಹಾರಾಷ್ಟ್ರ, ದೆಹಲಿ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳು ಅನುಕ್ರಮವಾಗಿ, 1, 2. 3 ಮತ್ತು 4ನೇ ಸ್ಥಾನದಲ್ಲಿವೆ.

"ಗುಜರಾತ್ ಮಾದರಿ" ಅಭಿವೃದ್ಧಿಗೆ ಇನ್ನೊಂದು ಮುಖವೂ ಇದೆ. ಚುಟುಕಾಗಿ ಹೇಳುವುದಾದರೆ, ಅದು ಹೂಡಿಕೆದಾರರು ಊಹೆಗೂ ಮೀರಿದ ಸೊಂಪಾದ ಅಭಿವೃದ್ಧಿ. ಇದು ಕಾರ್ಪೋರೇಟ್‌ಗಳಿಂದ; ಕಾರ್ಪೋರೇಟ್‌ಗಳಿಗಾಗಿ ಮತ್ತು ಕಾರ್ಪೋರೇಟ್‌ಗಳ ಅಭಿವೃದ್ಧಿ ಮಾದರಿ ಎಂದು ಕರೆಯಬಹುದು. ಏಕೆಂದರೆ, ಸರ್ಕಾರದ ಒಡೆತನದ ರೇವು, ರಸ್ತೆ, ಇಂಧನ



ಮೋದಿ ರಾಜ್ಯದಲ್ಲಿ ದುಡಿಯುವ ಜನರ ದುಃಸ್ಥಿತಿ

ಮುಂತಾದ ಸಾಧನ-ಸಂಪತ್ತುಗಳನ್ನು ಜೋಪಾನವಾಗಿಡುವ ಜವಾಬ್ದಾರಿ, ಪರಂಪರಾಗತವಾಗಿ, ಸರ್ಕಾರಗಳ ಬಳಿ ಇರುತ್ತದೆ. ಆದರೆ, ಅಭಿವೃದ್ಧಿಯ ಹೆಸರಿನಲ್ಲಿ, ಈ ಎಲ್ಲಾ ಸಾಧನ-ಸಂಪತ್ತುಗಳನ್ನು ಪಿಪಿಪಿ(ಸಾರ್ವಜನಿಕ; ಖಾಸಗಿ; ಪಾಲುದಾರಿಕೆ) ಮತ್ತು ಬೂಟ್-ಬಿಒಒಟಿ(ನಿರ್ಮಿಸು; ಒಡೆತನಹೊಂದು; ನಿರ್ವಹಿಸು ಮತ್ತುವರ್ಗಾಯಿಸು)ಹೆಸರಿನಲ್ಲಿ ಕಾರ್ಪೋರೇಟ್‌ಗಳಿಗೆ ವರ್ಗಾಯಿಸಲಾಗಿದೆ. ಇಂತಹ ಏರ್ಪಾಡುಗಳಿಂದ ಕಾರ್ಪೋರೇಟ್‌ಗಳು ಕಂಡ-ರಿಯದ ಪ್ರಮಾಣದಲ್ಲಿ ಹಣ ಗಳಿಸಿದ್ದಾರೆ. ಅಭಿವೃದ್ಧಿಯ ಹೆಸರಿನಲ್ಲಿ ಪ್ರಾಕೃತಿಕ ಸಂಪತ್ತಿನ ಲೂಟಿ ಹಾಗೂ ಶ್ರಮಶಕ್ತಿಯ ಶೋಷಣೆ ಎಡೆ-ತಡೆ ಇಲ್ಲದೆ ಮುಂದುವರಿಯುತ್ತಿದೆ.



ಗುಜರಾತ ರಾಜಧಾನಿ ಅಹಮದಾಬಾದ್‌ನ ಹೀನ ಅವಸ್ಥೆಯ ಸ್ಲಂ

ಗುಜರಾತ್ ಅಭಿವೃದ್ಧಿ ಮಾದರಿಯಲ್ಲಿ ಸ್ವಂತಿಕೆ ಅಥವಾ ಅಸಮಾನ್ಯವಾದುದು ಏನೂ ಇಲ್ಲ. ಕೆಲವು ಸಮಸ್ಯೆಗಳಿಂದ ನರಳುತ್ತಿರುವ ಅಭಿವೃದ್ಧಿಶೀಲ ದೇಶಗಳಿಗೆ ತಮ್ಮ ಎಲ್ಲಾ ಸಮಸ್ಯೆ/ಖಾಯಿಲೆಗಳಿಗೆ ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣಗಳೇ ದಿವ್ಯೌಷಧ ಮತ್ತು ನವ-ಉದಾರವಾದಿ ಆರ್ಥಿಕ ಧೋರಣೆಗಳೇ ಪರಿಹಾರ ಎಂದು ಅಂತರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವ ಬ್ಯಾಂಕ್‌ಗಳು ಈ ದೇಶಗಳನ್ನು ಪುಸಲಾಯಿಸಿ, ಅವುಗಳನ್ನು ಪೀಡಿಸಿ, ತಮ್ಮ ಗಿರಾಕಿಗಳನ್ನಾಗಿಸಿಕೊಳ್ಳುವ ತಂತ್ರಗಾರಿಕೆಯಲ್ಲದೆ ಬೇರೇನೂ ಅಲ್ಲ. ಈ ಅಭಿವೃದ್ಧಿ ಮಾದರಿಯನ್ನು ವೈಭವೀಕರಿಸಿ ಪ್ರಚಾರ ಮಾಡುತ್ತಿರುವ ಕಾರ್ಪೋರೇಟ್ ಒಡೆತನದ ಮಾಧ್ಯಮಗಳು ತಮ್ಮ ಸ್ವಹಿತಾಸಕ್ತಿಯ ಸಾಧನೆ ಮತ್ತು ಹೇರಳವಾದ ಲಾಭ ಸಂಪಾದನೆಯ ಜೊತೆಗೆ ತಮ್ಮ ಪೋಷಕರಾದ ಮೋದಿ ಮತ್ತು ಅವರ ಪಕ್ಷವು ಓಟು ಬಾಚಿಕೊಳ್ಳಲು ಅನುವು ಮಾಡಿಕೊಡುವ ಉದ್ದೇಶವೂ ಇರುವುದರಿಂದ ಅದನ್ನು ಇಡೀ ದೇಶಕ್ಕೇ ಮಾದರಿಯೆಂಬಂತೆ ಬಿಂಬಿಸುತ್ತಿರುವುದು ಆಶ್ಚರ್ಯವೇನಲ್ಲ. ನೇರವಾಗಿ ಹೇಳುವುದಾದರೆ, ಗುಜರಾತ್ ಮಾದರಿಯು, ಕಳೆದ ಇಪ್ಪತ್ತು ವರ್ಷಗಳಿಂದ ಕಾಂಗ್ರೆಸ್ ಮತ್ತು ಭಾಜಪ ಪಕ್ಷಗಳ ಉಸ್ತುವಾರಿಯ ಕೇಂದ್ರ ಸರ್ಕಾರ ಪರಿಪಾಲಿಸುತ್ತಿದ್ದ ನೀತಿಗಳ ಮುಂದುವರಿಕೆಯಾಗಿದೆ. ಈ ಮಾದರಿಯು ಜನತೆಯ ಆಶೋತ್ತರಗಳನ್ನು ಈಡೇರಿಸಲಾಗದೆ ಸೋತಿ-ದೆ. ನೈತಿಕ ದೃಷ್ಟಿಯಿಂದ ಅಂಗೀಕರಿಸಬಹುದಾದ ಮತ್ತು ಸಮರ್ಥನೀಯವಾದ ಸಹಭಾಗಿ ಬೆಳವಣಿಗೆ ತರುವಲ್ಲಿ ಅಗಾಧವಾಗಿ ವಿಫಲವಾಗಿದೆ. ನಿರುದ್ಯೋಗ, ಬಡತನ, ಬೆಲೆ ಏರಿಕೆ, ಕೃಷಿ ಬಿಕ್ಕಟ್ಟು ಮಂತಾದ ಜ್ವಲಂತ ಸಮಸ್ಯೆಗಳಿಗೆ ಪರಿಹಾರವೆಂದರೆ, ಈ ಧೋರಣೆಗಳ ಬದಲಾವಣೆ ಮಾತ್ರ.

ಉದಾಹರಣೆಗಾಗಿ ನರೇಂದ್ರ ಮೋದಿಯ ಬಗೆ 'ಔಟ್ಲುಕ್' ಪತ್ರಿಕೆಯಲ್ಲಿ ವ್ಯಕ್ತಪಡಿಸಿರುವ ಎರಡು ಅಭಿಪ್ರಾಯಗಳು ಹೀಗಿವೆ:

"ಮೋದಿಯ ಚಿಂತನೆ ಮುಸ್ಲಿಂ ವಿರೋಧಿ; ಕ್ರಿಶ್ಚಿಯನ್ ವಿರೋಧಿ.- ಗಾಂಧಿಜೀವನ ದರ್ಶನಕ್ಕೆ ವಿರುದ್ಧ"

- 96 ವರ್ಷದ ವೈದ್ಯ ಹಿರಿಯ ಗಾಂಧೀವಾದಿ ಚುನ್ನಿ ಭಾಯಿ.

"ಆರೆಸೆಸ್ ಹಿನ್ನೆಲೆಯ ನರೇಂದ್ರ ಮೋದಿಯ ಒಂದು ದೊಡ್ಡ ಉದ್ದೇಶವೆಂದರೆ, ಅದು, ಗಾಂಧಿ ಮತ್ತು ಅವರು ಅನುಸರಿಸಿದ ಜೀವನ ಕ್ರಮಕ್ಕೆ ಸಾಧ್ಯವಿರುವ ಎಲ್ಲಾ ರೀತಿಯಲ್ಲೂ ಕಳಂಕ ತಗಲಿಸುವುದು. ಮೋದಿಯ ಚಿಂತನೆ ಮುಸ್ಲಿಂ ವಿರೋಧಿ; ಕ್ರಿಶ್ಚಿಯನ್ ವಿರೋಧಿ. ಅದು ಗಾಂಧಿ ಮತ್ತು ಅವರ ಜೀವನ ದರ್ಶನಕ್ಕೆ ವಿರುದ್ಧವಾಗಿದೆ. ಗಾಂಧೀಜಿಯವರು, ಪಾಕಿಸ್ತಾನ ಮತ್ತು ಆರೆಸೆಸ್ ಎರಡನ್ನೂ ವಿರೋಧಿಸಿದರು. ಒಂದೂವರೆ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಹಾತ್ಮ ಮಂದಿರದ ನಿರ್ಮಾಣಕ್ಕೂ ಮುನ್ನ, ಆತನಿಗೆ ಗೋಡ್ಸೆ ಬಗ್ಗೆ ತನ್ನ ಅಭಿಪ್ರಾಯಗಳನ್ನು ಜನತೆಗೆ ತಿಳಿಸಬೇಕೆಂದು ಆಗ್ರಹ ಪಡಿಸಿದ್ದೆ. ಮೋದಿಯ ಕಾರ್ಯವೈಖರಿ, ದೃಷ್ಟಿಕೋನ ಮತ್ತು ನಂಬಿಕೆಗಳು, ಕೈಗಾರಿಕೆ ಪರ; ಕಾರ್ಪೋರೇಟ್‌ಗಳ ಪರ ಮತ್ತು ಬಹು ರಾಷ್ಟ್ರೀಯ ಕಂಪೆನಿಗಳ(ಎಮ್‌ಎನ್‌ಸಿ) ಪರ. ಇವರು, ಬಡವರ ಭೂಮಿ ಕಬಳಿಸಲು ಆತ ನೆರವಾಗಿದ್ದಾನೆ. ನಾನು ಇದನ್ನು ವಿರೋಧಿಸುತ್ತೇನೆ. 96ರ ಇಳಿ ವಯಸ್ಸಿನಲ್ಲಿ ಜನರ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ನಾನು ಹೋರಾಡುತ್ತಿದ್ದೇನೆ. ಅಭಿವೃದ್ಧಿಯ ಬಗ್ಗೆ ಆತನ ಮಾತುಗಳು ಬರೀ ಬೊಗಳೆ. ಆತನ ಶ್ರಮ ಕಾರ್ಪೋರೇಟ್‌ಗಳಿಗೆ ಮೀಸಲು.

ಪುಟ 15 ಕ್ಕೆ

ಆಯ್ದ ಕೆಲವು ಕಂಪೆನಿಗಳ ಮಾರುಕಟ್ಟೆ ಮೌಲ್ಯ ವೃದ್ಧಿ ಹೀಗಿದೆ:

ಗುಜರಾತಿನಲ್ಲಿರುವ ಆಯ್ದ ಕೆಲವು ಕಂಪೆನಿಗಳ ಈ ಬೃಹದಾಕಾರದ ಬೆಳವಣಿಗೆಯಿಂದ ಎದ್ದು ಕಾಣುವ ಅಂಶವೆಂದರೆ ಅದು ರಾಜ್ಯದ ಅಭಿವೃದ್ಧಿಯ ಪಥದಲ್ಲಿ ವ್ಯಾಪಾರೋದ್ಯಮ ಶಕ್ತಿಗಳು ಹೊಂದಿರುವ ಬಲವಾದ ಹಿಡಿತ. ಈ ಪ್ರಕ್ರಿಯೆಯಲ್ಲಿ ರಾಜ್ಯಸರ್ಕಾರಕ್ಕೆ ಯಾವುದೇ ಹಿಡಿತವಿಲ್ಲ. ಬದಲಿಗೆ, ಹೂಡಿಕೆದಾರರು, ಹಣಕಾಸು ಸಂಸ್ಥೆಗಳು ಹಾಗು ಬಲಾಢ್ಯ ಕಂಪೆನಿಗಳು, ಬೆಳವಣಿಗೆಯ ಆದ್ಯತೆಗಳನ್ನು ತಾವೇ ತೀರ್ಮಾನಿಸುತ್ತವೆ. ಇಂತಹ ಬೆಳವಣಿಗೆಯು ಊರ್ಜಿತವಾಗುವುದಿಲ್ಲ. ಅಲ್ಲದೆ, ಅದು ಸಾಮಾಜಿಕ ನ್ಯಾಯಕ್ಕೂ ವಿರುದ್ಧವಾಗಿದೆ.

ಕಂಪೆನಿ	2012ರ ಮಾರುಕಟ್ಟೆ ಮೌಲ್ಯ	% ವೃದ್ಧಿ 2002 ರಿಂದ
ಅದಾನಿ	31059 ಕೋಟಿ	8615%
ಅರವಿಂದ್	.2485 ಕೋಟಿ	1254%
ಎಲೆಕಾನ್ ಇಂಜಿನೀರಿಂಗ್	449 ಕೋಟಿ	7138%
ಗುಜರಾತ್ ಆಲ್ಕಲೀಸ್	1109 ಕೋಟಿ	2000%
ಅರ್ವೀ ಡೆನಿಮ್ಸ್	152 ಕೋಟಿ	2533%
ಗುಜರಾತ್ ಎನ್.ಆರ್.ಇ. ಕೋಕ್	1200 ಕೋಟಿ	8766%
ಜಿ.ಎಸ್.ಎಫ್.ಸಿ	2698 ಕೋಟಿ	1284%
ಸನ್ ಫಾರ್ಮ	76250 ಕೋಟಿ	2334%
ಯುನೈಟೆಡ್ ಫಾಸ್ಫರಸ್	5497 ಕೋಟಿ	87995%
...ಯನ್ಸ್	461624 ಕೋಟಿ	1357%
ಎಸ್ಸಾರ್ ಆಯಿಲ್	9812 ಕೋಟಿ	4507%

ಕೆ.ಆರ್ ಚೋಕ್ಸಿ ಸೆಕ್ಯೂರಿಟೀಸ್ -ಔಟ್ಲುಕ್ ವಾರ ಪತ್ರಿಕೆ-31-12-2012

ಹೊಸ ಕೃಷಿ ಮಾರುಕಟ್ಟೆ ನೀತಿ ಯಾರಿಗಾಗಿ? ಭಾಗ - 4

ಸಲ್ಲದ ನೆಪ ಹೇಳಿ ಒಪ್ಪಂದವನ್ನು ಮುರಿಯುವ ಕಂಪನಿಗಳಿಂದ ರೈತರಿಗೆ ಸಂರಕ್ಷಣೆ ನೀಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಧ್ಯ ಪ್ರವೇಶ ಮಾಡಲು ಮುಂದಾಗುತ್ತವೆಯೇ? ಹೊಣೆಗಾರಿಕೆ ಹೊರುತ್ತವೆಯೇ? ಎಂದರೇ ಹೊರುವುದಿಲ್ಲವಂತೆ. ರೈತರು ಬೇಕಾದಲ್ಲಿ ಕೋರ್ಟ್‌ಗೆ ಹೋಗಬಹುದಂತೆ.


ಯು. ಬಸವರಾಜು

ಈಗಾಗಲೇ ಮಾನ್ಸಂಟೋ ಮುಂತಾದ ಬಹುರಾಷ್ಟ್ರೀಯ ಸಂಸ್ಥೆಗಳು ಜಗತ್ತಿನ ಕೃಷಿ ಉತ್ಪಾದನೆ ಮತ್ತು ವಿತರಣೆಯ ಮೇಲೆ ದೊಡ್ಡ ಪ್ರಮಾಣದ ನಿಯಂತ್ರಣ ಹೊಂದಿರುವಾಗ ಮತ್ತು ಅದರಲ್ಲಿ ಜಗತ್ತಿನ ಕೆಲವೇ ಮಾನ್ಸಂಟೋ ಅಂತಹ ಕೃಷಿ ಕಂಪನಿಗಳ ಕೂಟ ಶೇ. 80ರಷ್ಟು ಗುತ್ತಿಗೆ ಹೊಂದಿರುವಾಗ ಮತ್ತು ಇಂತಹ ದೈತ್ಯ ಕಂಪನಿಗಳ ಆದಾಯವು (45,000 ಕೋಟಿ) ಹಲವು ದೇಶಗಳ ಬಜೆಟ್ ಗಿಂತಲೂ ಹಲವು ಪಟ್ಟು ಹೆಚ್ಚಾಗಿರುವುವಾಗ ಇಂತಹ ಕಂಪನಿಗಳನ್ನು ಸಾಮಾನ್ಯ ರೈತನೊಬ್ಬ ಎದುರಿಸಲು ಸಾಧ್ಯವೇ? ಹಾಗೊಂದು ವೇಳೆ ಎದುರಿಸಲು ಮುಂದಾಗುವ ರೈತರ ಮೇಲೆ ತನ್ನ ಏಜೆಂಟರು/ ಗೂಂಡಾಪಡೆ ಮೂಲಕ ದಾಳಿ ನಡೆಸುವುದಿಲ್ಲವೇ? ಆದಾಗ್ಯೂ ಎದುರಿಸಿ ಕೋರ್ಟಿಗೆ ಸ್ಥಳೀಯವಾಗಿ ಹೋದರೂ, ಸುಪ್ರಿಂ ಕೋರ್ಟಿನವರೆಗೆ ಮುಂದುವರೆಯುವುದಿಲ್ಲವೇ? ಕಂಪನಿಯ ಜೊತೆ ಅಲ್ಲಿಯವರೆಗೆ ರೈತರಿಗೆ ಹೋಗಲು ಸಾಧ್ಯವೇ? ಪ್ರಧಾನ ಮಂತ್ರಿಗಳು, ಮುಖ್ಯ ಮಂತ್ರಿಗಳು, ಸಚಿವರುಗಳು ಕಂಪನಿಗಳ ದಾಸಾನುದಾಸರಾಗಿರುವಾಗ ಅಧಿಕಾರಿಗಳು ಸ್ವತಂತ್ರವಾಗಿ ಯೋಚಿಸಿ ರೈತರಿಗೆ ನೆರವು ನೀಡಬಲ್ಲರೇ? ಅಂತಹ ಸಾಧ್ಯತೆ, ಇಲ್ಲವೆಂದೇ ಹೇಳುವಷ್ಟು ವಿರಳವಾಗಿರುತ್ತದೆ.

ಜಾಗತಿಕ ಮಾರುಕಟ್ಟೆಯ ಏರಿಳಿತದ ಹೆಸರಿನಲ್ಲಿಯೇ, ದೂರದಿಂದಲೇ, ನಮ್ಮ ರೈತರನ್ನ ಆತ್ಮಹತ್ಯೆ ಎಂಬ ಹೆಸರಿನ ಕೊಲೆಗಳಿಗೆ ಮುಂದೂಡಿದ ಈ ಕಂಪನಿಗಳು ಕೆಲವೇ ವರ್ಷಗಳಲ್ಲಿ ರೈತರ ಜಮೀನುಗಳನ್ನ ಸ್ವಾಧೀನ ಮಾಡಿಕೊಂಡು ಅವರನ್ನ ಹೊರದಬ್ಬಿ ಸಾಮೂಹಿಕವಾಗಿ ಹಸಿವಿನ ಸಾವುಗಳ ದವಡೆಗೆ ದಬ್ಬಲಾರವೇ? ರೈತರ ಆತ್ಮಹತ್ಯೆ ತಪ್ಪಿಸಲಾಗದ ಮತ್ತು ರೈತರಿಗೆ ನೆರವಾಗದ ಈ ಹೇಡಿ ಸರ್ಕಾರಗಳು ರೈತರಿಗೆ ಯಾವ ರೀತಿಯಲ್ಲಿ ರಕ್ಷಿಸಿಯಾವು?!.

ಗುತ್ತಿಗೆ ಕೃಷಿಯ ಇನ್ನೊಂದು ರೂಪವೆಂದರೆ ರೈತರ ಜಮೀನುಗಳನ್ನೂ ನೇರವಾಗಿ ಕಂಪನಿಗಳೇ ವ್ಯವಸಾಯದಲ್ಲಿ ತೊಡಗಲು ಗುತ್ತಿಗೆಗೆ ಪಡೆಯುವುದು. ವರ್ಷಕ್ಕೆ-ಇಂತಿಷ್ಟೆಂದು ರೈತರಿಗೆ ಹಣ ನೀಡುವುದು. ಹೀಗೆ ಸಾವಿರಾರು ಎಕರೆ (ಮಿತಿಯೇ ಇಲ್ಲ) ಜಮೀನನ್ನೂ ಇಡೀ ತಾಲೂಕಾ - ತಾಲೂಕಿನ ಜಮೀನನ್ನೂ ಅವರು ಪಡೆಯಲು ಅವಕಾಶವನ್ನು ಹಿಂದಿನ ಬಿಜೆಪಿ ಸರ್ಕಾರ ಭೂಸುಧಾರಣಾ ಕಾಯ್ದೆಗೆ 2012 ರಲ್ಲಿ ಅಂಗೀಕರಿಸಿದ್ದ ತಿದ್ದುಪಡಿ ಕಾಯ್ದೆ ನೀಡಿತ್ತು.

ಹೀಗೆ ಆದರೂ ಒಟ್ಟಾರೆ ರೈತರು - ಕೂಲಿಕಾರರು - ಗ್ರಾಮೀಣ ಕಸುಬುದಾರರು ವ್ಯವಸಾಯದಾಚೆ ಎಸೆಯಲ್ಪಡುತ್ತಾರೆ. ಮತ್ತು ಇವರನ್ನೇ ಆಧರಿಸಿದ ಗೊಬ್ಬರ, ಕ್ರಿಮಿನಾಶಕ - ಬೀಜ ವ್ಯಾಪಾರಿಗಳು, ಕಮಿಷನ್ ಏಜೆಂಟರು, ಮಾರುಕಟ್ಟೆ ವ್ಯಾಪಾರಿಗಳು ಬೀದಿಪಾಲಾಗಲಿದ್ದಾರೆ. ಯಾಕೆಂದರೆ, ಇವರ ಜೊತೆ ವ್ಯವಹರಿಸುವ ರೈತರು, ವ್ಯವಸಾಯ ಮಾಡದೇ ಜಮೀನನ್ನೂ ಗುತ್ತಿಗೆ ನೀಡಿದರೆ ಇವರ ವ್ಯವಹಾರ ನಡೆಯುವುದು ಹೇಗೆ? ಭೂಮಿ ಗುತ್ತಿಗೆ ಪಡೆದ ಕಂಪೆನಿ ಹೇಳಿದ ಹಾಗೆ ಕೇಳುವ ಮತ್ತು ಅದು ಕೊಡುವ ಗುತ್ತಿಗೆ ಹಣ ಪಡೆದು ತೃಪ್ತನಾಗಬೇಕಾಗುತ್ತದೆ. ಒಂದು ವೇಳೆ ಅದನ್ನೂ ನಿರಾಕರಿಸಿ ವ್ಯವಸಾಯದಲ್ಲಿ ತೊಡಗುವನೆಂದರೆ ವ್ಯವಸಾಯಕ್ಕೆ ಬೇಕಾದ ಬೀಜ, ಗೊಬ್ಬರ, ಕ್ರಿಮಿನಾಶಕ, ಸಾಲ ಕೊಡುವವರ್‍ಯಾರು ಇರುವುದಿಲ್ಲ. ಎಲ್ಲವೂ ಕಂಪನಿಕೈಲಿ ಕೇಂದ್ರೀಕರಿಸಿಸಲ್ಪಟ್ಟಿರುತ್ತದೆ. ಹೀಗಾಗಿ ಮಾಲೀಕ ಕಂಪನಿಯ ಗುಲಾಮನಾಗಬೇಕಾಗುತ್ತದೆ. ಹೀಗಾಗಿ ಗುತ್ತಿಗೆ ಕೃಷಿ-ಮುಂಗಡ ವ್ಯಾಪಾರ ಯಾವ ರೀತಿ ಬಂದರೂ ರೈತರು- ಕೂಲಿಕಾರರು- ಕಸುಬುದಾರರು ಮತ್ತು ಇವರನ್ನವಲಂಬಿಸಿದ ವ್ಯಾಪಾರಿಗರಿಗೆ, ಇತರರಿಗೆ ಮಾರಣಾಂತಿಕವೇ ಆಗಲಿವೆ.



ಕಂಪನಿ ಕೃಷಿ

ಕಂಪನಿ ಕೃಷಿ ಅಥವಾ ಕೃಷಿಯ ಕಂಪನೀಕರಣಕ್ಕೆ ಬಿಜೆಪಿ ಹಾಗೂ ಕಾಂಗ್ರೆಸ್ ನೇತೃತ್ವದ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಮುಂದಾಗುತ್ತಿವೆ. ಇದರಂತೆ ಪ್ರತಿ ಕಂಪನಿ ಹತ್ತಾರು ಸಾವಿರ ಎಕರೆ ಜಮೀನನ್ನ ಹೊಂದಲಿದೆ. ಈಗಾಗಲೇ ಭೂಬ್ಯಾಂಕ್ ಮತ್ತಿತರೆ ಹೆಸರಿನಲ್ಲಿ ಭೂ ಸ್ವಾಧೀನಕ್ಕೆ ಸರ್ಕಾರಗಳು ಮುಂದಾಗಿವೆ. ಇದಕ್ಕಾಗಿ ಹಲವಾರು ವರ್ಷಗಳಿಂದ ಸರ್ಕಾರದ ಯಾವುದೇ ನೆರವು ಪಡೆಯದೇ ಸ್ವಂತ ಕುಟುಂಬದ ಶ್ರಮದಿಂದ ಭೂಮಿ ಅಭಿವೃದ್ಧಿ ಪಡಿಸಿದ ಬಡವರನ್ನ-ದಲಿತರನ್ನ ಒಕ್ಕಲೆಬ್ಬಿಸುವ ಪ್ರಕ್ರಿಯೆ ಆರಂಭವಾಗಿದೆ.

ತಮಗೊದಗಿಸಲಾದ ಹತ್ತಾರು ಸಾವಿರ ಎಕರೆ ಪ್ರದೇಶದಲ್ಲಿ ಭಾರಿ ಕೃಷಿ ಉದ್ದಿಮೆಗಳು ಕೃಷಿಯಲ್ಲಿ ತೊಡಗಲಿವೆ. ಪ್ರತಿ ಎಕರೆಗೆ ಕೋಟಿ ಕೋಟಿ ರೂಪಾಯಿಗಳ ಬಂಡವಾಳವನ್ನ ತೊಡಗಿಸಲಿವೆ. ಅತ್ಯಂತ ಆಧುನಿಕ ಹಾಗೂ ಭಾರಿ ಕೃಷಿ ಯಂತ್ರಗಳನ್ನು ಬಳಸಲಿವೆ. ತಾಂತ್ರಿಕ ಸಿಬ್ಬಂದಿ ಹಾಗೂ ಕೃಷಿ ತಂತ್ರಜ್ಞರೆ ಇಲ್ಲಿಯ ವ್ಯವಸಾಯದ ಕೂಲಿಗಳಾಗಲಿದ್ದಾರೆ. ಅತ್ಯಾಧುನಿಕ ಬೀಜ-ಗೊಬ್ಬರ ಕ್ರಿಮಿನಾಶಕಗಳನ್ನು ಬಳಸಿ, ಅಪಾರ ಇಳುವರಿಯ ಆಧುನಿಕ ಬೇಸಾಯ ಕೈಗೊಳ್ಳಲಿದ್ದಾರೆ ಮತ್ತು ಇಲ್ಲಿಯ ಕಡಿಮೆ ಕೂಲಿಯ ಶ್ರಮವನ್ನ ಮತ್ತು ಫಲವತ್ತಾದ ಜಮೀನಿನ ಮೂಲಕ ಕಡಿಮೆ ಬೆಲೆಯ ಹೇರಳ ಉತ್ಪಾದನೆಯನ್ನ ಮಾಡಲಿದ್ದಾರೆ ಎಂದು ಹೇಳಲಾಗುತ್ತಿದೆ.

ಇದೀಗ ದೇಶಿಯ ರೈತರು ಇನ್ನು ಮುಂದೆ ಇಂತಹ ದೈತ್ಯ ಕಂಪನಿ ಕೃಷಿಯಿಂದ ಬರುವ ಕಡಿಮೆ ಬೆಲೆಯ ಕೃಷಿ ಉತ್ಪನ್ನಗಳ ಜೊತೆ ಸ್ಪರ್ಧಿಸಿ ಹಣುಗಾಯಿ-ನೀರುಗಾಯಿಯಾಗಬೇಕಾಗಿದೆ. ಅದೇ ರೀತಿ ಗುತ್ತಿಗೆ ಕೃಷಿಯಲ್ಲಿ ಪಾಲ್ಗೊಂಡ ಉದ್ದಿಮೆಗಳ, ಮುಂಗಡ ವ್ಯಾಪಾರಿಗಳು, ಈ ದೈತ್ಯ ಕೃಷಿ ಉತ್ಪನ್ನಗಳ ಜೊತೆ ಸ್ಪರ್ಧಿಸಬೇಕಾಗುತ್ತದೆ. ಇವರೆಲ್ಲರ ನಡುವೆ ಗುತ್ತಿಗೆ ಕೃಷಿಯಲ್ಲಿ ಹಾಗೂ ಮುಂಗಡ ವ್ಯಾಪಾರಿಗೆ ಬೆಳೆದುಕೊಡುವ ರೈತರೂ ಮಾತ್ರವೇ ಮೆತ್ತಗಾಗಲಿದ್ದಾರೆ ಅಥವಾ ಕಂಪನಿ ಕೃಷಿಗೆ ತೊಡಗುವ ಉದ್ದಿಮೆಯು ಹಾಗೂ ಗುತ್ತಿಗೆ ಕೃಷಿಯಲ್ಲಿ ತೊಡಗುವ ಕಂಪನಿಯು ಮತ್ತು ಮುಂಗಡ ವ್ಯಾಪಾರದಲ್ಲಿ ತೊಡಗುವ ಕಂಪನಿಯು ಎಲ್ಲವೂ ಒಂದೆ ಆಗಿದ್ದಲ್ಲಿ, ಕಂಪನಿ ಕೃಷಿ ವಿಸ್ತರಣೆಯ ಸಂಚಿಗೆ ಇಲ್ಲಿನ ರೈತಾಪಿ ಜನತೆ ಮತ್ತು ಕೃಷಿ ಅವಲಂಬಿತರು ಈಡಾಗುವ ಅಪಾಯಗಳು ಇದ್ದೆ ಇವೆ. ಅದೇ ರೀತಿ ಇಲ್ಲಿ ಹೇಗೆ ಗೇಣಿದಾರನಿಗೆ ಮತ್ತು ಸಣ್ಣ ಅತಿ ಸಣ್ಣ ರೈತನಿಗೆ ಉದ್ಯೋಗಗಳ ಅವಕಾಶ ಇಲ್ಲವೋ ಹಾಗೇ ಕೃಷಿ ಕೂಲಿಕಾರರಿಗೂ ಕೃಷಿ ಉದ್ಯೋಗವಿಲ್ಲದಂತೆ ಕಂಪನಿ ಕೃಷಿ ಮಾಡುವುದು ಹಾಗು ಇವುಗಳು ಭೂಮಿಯ ಫಲವತ್ತತೆಯನ್ನ ಹಾಳು ಮಾಡುವ ಸಂಭವವಿದೆ.

ಮುಂಗಡ ವ್ಯಾಪಾರ

ಬೃಹತ್ ಕಂಪನಿಗಳು ತಮ್ಮ ಮುಂದಿನ ವರ್ಷದ ವ್ಯಾಪಾರಕ್ಕಾಗಿ ಈ ವರ್ಷದ ಆರಂಭದಲ್ಲಿಯೇ, ಬೆಳೆ ಬಿತ್ತುವ ಮುಂಚೆಯೇ, ಬೆಳೆಯನ್ನ ಖರೀದಿಸಲು ಮುಂದಾಗುವ ರೈತರ ಜೊತೆಗಿನ ವ್ಯವಹಾರವೇ ಮುಂಗಡ ವ್ಯಾಪಾರವಾಗಿದೆ. ರೈತರು ಮು
ವ್ಯಾಪಾರದಲ್ಲಿ ತೊಡಗಿದ ಕಂಪ
ಜೊತೆ ಒಪ್ಪಂದವನ್ನ ಮಾಡಿಕೊ
ತಾನು ಬೆಳೆಯುವ ಬೆಳೆಗೆ, ಬ
ಪೂರ್ವದಲ್ಲಿಯೇ ಬೆಲೆ ನಿಗದಿಸಿಕೊ
ಬೆಳೆದುಕೊಡುವನು ಎಂದು ಹೇಳಲ
ಇಲ್ಲಿಯ ವ್ಯವಹಾರವು ಹೆಚ್ಚುಕಡಿಮೆ
ಕೃಷಿಯಂತೆ ಇರಲಿದೆ.

ಒಟ್ಟಾರೆ ಈ ಎಲ್ಲಾ ವ್ಯವಹಾ
ಕೇವಲ ರೈತರು ಮತ್ತು ಕೂಲಿಕಾ
ಮಾತ್ರವೇ ಸಂಕಷ್ಟಕ್ಕೆ ಈಡುಮಾಡು
ಬದಲಿಗೆ, ಆಹಾರ ಧಾನ್ಯಗಳನ್ನ ಖರೀದ
ಎಲ್ಲಾ ರೀತಿಯ ಗ್ರಾಹಕರನ್ನ
ಮತ್ತು ಮೇಲೆ ಏರಿದ ಬೆಲೆಗಳ ಮ
ಕೊಳ್ಳೆಹೊಡೆಯುತ್ತವೆ. ಇಂತಹ ಸ
ಆತಂಕಗಳು ಮತ್ತು ಸಾವಿರ, ಸ
ಪ್ರಶ್ನೆಗಳು ಇದರಲ್ಲಿ ಅಡಗಿವೆ.

ಕೇಂದ್ರ ರಾಜ್ಯ ಸರ್ಕಾರಗಳ ಬ
ರೆ ಉದ್ದೇಶ, ಬಹುರಾಷ್ಟ್ರೀಯ ಸಂ
ಹಿತಾಸಕ್ತಿಗಳಿಗೆ ದೊಡ್ಡ ಪ್ರಮಾಣದ
ಹಿಡುವಳಿಗಳನ್ನ, ಕಂಪನಿ ಕೃಷಿ
ಕೃಷಿ ಮತ್ತು ಮು
ವ್ಯಾಪಾರದ ಹೆಸರಿನಲ್ಲಿ
ಮತ್ತು ಹಿಂಬದಿ
ಒದಗಿಸುವುದಾಗಿರು
ಸ್ಪಷ್ಟವಾಗಿದೆ. ಅದೇ
ಕಂಪನಿಗಳು
ಬೇಕಾದ ಬೆಳೆ
ಬೆಳೆಯಿಸಿಕೊಂ
ದೇಶದ ಆಹ
ಸ್ವಾವಲಂಬನೆಯ
ಹೀನಾಯ
ಕೊಂಡೊಯ್ದು ಪ
ಪರಾವಲಂಬಿತನಕ್ಕೆ
ಮಾಡಲಿವೆ.

ಆ ಮೂಲಕ ದ
ಸರ್ವಾಂಗೀಣ ಬದುಕಿನಲ್ಲಿ ನ
ಗುಲಾಮಿ ರಾಷ್ಟ್ರ ಮಾಡಿಕೊಳ್ಳು
ಸಾಮ್ರಾಜ್ಯ ಶಾಹಿಗಳ ಕುತಂತ್ರವಾಗಿದ್ದು
ಎಲ್ಲವು ಅದರ ಭಾಗವಾಗಿವೆ.

ಮಾದರಿ ಮಾರುಕಟ್ಟೆ ಕಾಯಿದೆ -2003

ಕಂಪನಿ ಕೃಷಿ, ಗುತ್ತಿಗೆ ಕೃಷಿ, ಮು
ವ್ಯಾಪಾರ ಮತ್ತು ದೇಶದ ಚಿಲ್ಲರೆ ವ್ಯಾಪಾ
ಬಹುರಾಷ್ಟ್ರೀಯ ಸಂಸ್ಥೆಗಳ ಪ್ರ
ಭೂಮಿಕೆಯನ್ನ ಮಾದರಿ ಮಾ
ಕಾಯಿದೆ- 2003 ರ ಮೂಲಕ ಈಗಾ
ಸಿದ್ದ ಪಡಿಸಲಾಗಿದೆ. ಇಂತಹ
ಕಾಯಿದೆಯನ್ನ ಸಿದ್ದಪಡಿಸಿದ ಕೀರ್ತಿ
ಮತ್ತು ಅವರ ಎನ್‌ಡಿಎ ಮಿತ್ರರಿಗೆ ಸಲ
ಅದನ್ನು ಜಾರಿಗೆ ತರಲು ರಾಜ್ಯ
ಬೆದರಿಸಿದ ಕೀರ್ತಿ ಕಾಂಗ್ರೆಸ್‌ಗೆ ಸಲ್ಲುತ್ತ

ಕೃಷಿಯ ವಿಷಯ ರಾಜ್ಯಕ್ಕೆ ಸಂಬಂಧ
ಎಂದು ರಾಜ್ಯಾಂಗ ಹೇಳಿದ್ದರೂ,
ಸರ್ಕಾರ ಈ ಕಾಯಿದೆಯನ್ನ ಅಂಗಿ
ತನ್ನ ಬಳಿ ಇರುವ ಅನುದಾನ
ಅಸ್ತ್ರವಾಗಿ ಬಳಸಿ, ಕಾಯಿದೆ ಜಾರಿ
ಹೋದಲ್ಲಿ ಅನುದಾನ ನೀಡಲಾಗ
ರಾಜ್ಯ ಸರ್ಕಾರಗಳನ್ನು ಬೆದರಿಸಿ

ಪುಟ 22

ಸ್ವಯಂಘೋಷಿತ 'ದೇವಮಾನವ' ಅಸಾರಾಮ್‌ನ ಘೋರ ಪಾತಕಕೃತ್ಯಗಳು ಮತ್ತು ಹಿಂದುತ್ವದ ಪಡೆಗಳ ನಿರ್ಲಜ್ಜ ಬೆಂಬಲ

ನಿಲೋತ್ಪಲ್ ಬಸು – ಸಂಗ್ರಹಾನುವಾದ ಸಿಮ್ಮಿಸಿ

ಈಗ ಜೈಲು ಕಂಬಿ ಎಣಿಸುತ್ತಿರುವ ಸ್ವಘೋಷಿತ 'ದೇವಮಾನವ' ಅಸರಾಮ್ ಮೇಲೆ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಸಂಬಂಧ ಮಾತ್ರ ಮೊಕದ್ದಮೆ ಇದೆ ಎಂದು ಭಾವಿಸಬಾರದು. ಇಬ್ಬರು ಮಕ್ಕಳನ್ನು ಆಶ್ರಮಕ್ಕಾಗಿ ನರಬಲಿ ನೀಡಿರುವುದು ಸೇರಿದಂತೆ ಈತನ ಮೇಲೆ ಹಲವಾರು ಗಂಭೀರ ಪ್ರಕರಣಗಳಿವೆ. ಗುಜರಾತ್ ರಾಜ್ಯದ ರಾಜ ಧಾನಿ ಅಹಮದಾಬಾದ್‌ವೊಂದರಲ್ಲೇ ಅಸಾರಾಮ್ ತನ್ನ ಆಶ್ರಮಕ್ಕಾಗಿ 67,099 ಎಕರೆ ಸರ್ಕಾರಿ ಭೂಮಿ ನುಂಗಿದ್ದಾನೆ ಎಂಬುದನ್ನು ಈಗ ಸ್ವತಃ ಗುಜರಾತ್ ಸರ್ಕಾರವೇ ಸದನದಲ್ಲಿ ಒಪ್ಪಿಕೊಂಡಿದೆ. ಅಸರಾಮ್ ಸಂಘಪರಿವಾರಕ್ಕೆ ಒಬ್ಬ 'ಆಪ್ತಮಿತ್ರ'. ನರೇಂದ್ರ ಮೋದಿಗೂ ಕೂಡ. ಈತನ ಬೆಳವಣಿಗೆ ಹಿಂದೆ ಸಂಘಪರಿವಾರವೇ ಬೆನ್ನಿಗೆ ನಿಂತು ಬೆಂಬಲಿಸಿದ ಚರಿತ್ರೆ ಇದೆ. ಅದು ಯಾಕೆ ? ಓದಿ.

...ಶಕ್ಕೆ ದೇಶವೇ ಬೆಲೆ ಏರಿಕೆ, ಬ್ರಹ್ಮಾಂಡ ...ಷ್ಟಾಚಾರ ಹಾಗೂ ಹಗರಣಗಳಿಂದ ...ತ್ತರಿಸುತ್ತಿರುವ ಸಂದರ್ಭದಲ್ಲಿ ನರೇಂದ್ರ ...ಮೋದಿಯ ಪರ ಡೋಲು ಬಾರಿಸುತ್ತಿರುವ ...ಮಾಧ್ಯಮಗಳ ವೈಭವದ ನಡುವೆ ಅಸಾರಾಮ್ ...ಬಾಪು ಎಂಬ ಅಘೋಷಿತ ದೇವಮಾನವ ...ತ್ತೆಂದು ಸುದ್ದಿಗೆ ಬಂದಿದ್ದಾನೆ. ಆದರೆ, ಈ ...ಬಾರಿ ಆತ ಮಾಧ್ಯಮದ ಮುಂದೆ ನಗ್ನವಾಗಿದ್ದು ...ನ್ನ ಪಾಪಕೃತ್ಯಗಳಿಗೆ. ಹಿಂದಿನಂತೆ ಆತನಿಗೆ ...ಯಾವುದೇ 'ಸೆಲೆಬ್ರಿಟಿ' ಸ್ಥಾನಮಾನ ...ೀಡದಿರುವುದಕ್ಕೆ ಕಾರಣ ಆತನ ಮೇಲಿರುವ ...ಗಂಭೀರ ಆರೋಪಗಳು. ಅಸಾರಾಮ ಬಾಪು ...ಮಾಡಿದ ಘೋರ ಅಪರಾಧಗಳು ಆತನ ...ವೈಯಕ್ತಿಕ ವಿಶ್ವಾಸದ್ರೋಹ ಮತ್ತು ಮಾನಸಿಕ ...ಮಣೆಯಿಂದ ಸಂಭವಿಸಿದೆ ಎಂಬುದಾಗಿ ...ತ್ರಿಸಲಾಗಿದೆ. ಆದರೆ, ಆತ ನಡೆದುಬಂದ ...ದಾರಿಯನ್ನು ಗಮನಿಸಿದರೆ ಈ ಪಾಪಕೃತ್ಯಗಳ ...ನ್ನೆಲೆ ಅನಾವರಣಗೊಳ್ಳುತ್ತದೆ.

...ಜೋಧ್‌ಪುರ ಪೊಲೀಸ್ ಠಾಣೆಯಲ್ಲಿ ...ಸಾರಾಮ್‌ನನ್ನು ...ಧಿಸಿದಾಗ ... ಮಾಡಿದ ...ಮಹಾಪಾತಕ ...ತ್ಯಗಳು ಸುದ್ದಿಗೆ ...ಗ್ರಾಸವಾದವು. 16 ...ರ್ಷದ ಬಾಲಕಿಯ ...ಮೇಲೆ ಆತ ಲೈಂಗಿಕ ...ೀಡನೆ ಮಾಡಿದ್ದ ...ರೋಪದಲ್ಲಿ ...ಬಂಧಿಯಾಗಿದ್ದ. ...ಮಕ್ಕಳ ಮೇಲಿನ ...ಲೈಂಗಿಕ ಅಪರಾಧ ...ಡೆ ಕಾಯ್ದೆಯಡಿ ...ಸಾರಾಮ್‌ನ ...ಮೇಲೆ ಕೇಸು ...ದಾಖಲಿಸಲಾಗಿತ್ತು. ... ಬಾಲಕಿಯನ್ನು ...ದುಷ್ಟಶಕ್ತಿಗಳನ್ನು ...ಕ್ಕಿಸುವ ...ನೆಪ ಒಡ್ಡಿ 72ರ ...ಯಸ್ಸಿನ ಈ ದೇವಮಾನವ ನಾಗರಿಕ ...ಸಮಾಜ ತಲೆತಗ್ಗಿಸುವ ಕೆಲಸ ಮಾಡಿದ್ದ. ...ಮಧ್ಯಪ್ರದೇಶದ ಅಸಾರಾಮ್ ಫೌಂಡೇಷನ್ ...ನಡೆಸುವ ಶಾಲೆಯೊಂದರಲ್ಲಿ ಈ ಬಾಲಕಿ ...ಕ್ಷಣ ಪಡೆಯುತ್ತಿದ್ದಳು. ಅಸಾರಾಮನ ...ಕರಾಗಿರುವ ಆಕೆಯ ಪೋಷಕರು ...ಆಕೆಯನ್ನು ಅಲ್ಲಿ ಕರೆದೊಯ್ದಿದ್ದರು.

ಆದರೆ, ಆತನ ಇನ್ನಷ್ಟು ಹೀನ ಕೃತ್ಯಗಳು ...ಜೋಧ್‌ಪುರದ ಘಟನೆ ಮತ್ತು ಆ ಬಳಿಕ ಆತನ ...ಬಂಧನವಾದ ಬಳಿಕ ಬಹಿರಂಗಗೊಳ್ಳುತ್ತಿವೆ. ...ಅಸಾರಾಮ್ ಈ ಮಟ್ಟಕ್ಕೆ ಹೇಗೆ ಬೆಳೆದ... ...ನೆಲದ ಕಾನೂನನ್ನೂ ಉಲ್ಲಂಘಿಸುವ ಮಟ್ಟಕ್ಕೆ, ...ಕಾನೂನನ್ನು ಕೈಗೆತ್ತಿಕೊಳ್ಳುವ ಹಂತಕ್ಕೆ ಹೇಗೆ ...ಬೆಳೆದ ಎಂಬುದನ್ನು ಗಮನಿಸೋಣ....

...ಅಸಾರಾಮ್' ಬೆಳೆದುಬಂದ ಬಗೆ....

...ಅಸಾರಾಮ ನಡೆದು ಬಂದ ದಾರಿ ...ನೋಡಿದರೆ ಎಂಥವರೂ ಬೆಚ್ಚಿ ಬೀಳಬಹುದು. ...ಅತಿ ಶ್ರೀಮಂತರೂ, ಉದ್ಯಮಿಗಳು ಈ ...ದೇವಮಾನವನ ಕಾಲಿಗೆ ಬಿದ್ದು ಧನ್ಯತೆ ಅನುಭವಿಸುತ್ತಿದ್ದವರೂ ಈ ಮಟ್ಟಕ್ಕೆ ಕ್ಷಿಪ್ರಗತಿಯ ಶ್ರೀಮಂತಿಕೆ ಅನುಭವಿಸಿಲ್ಲ.



ಅಸುಮಲ್ ಹರ್ಪಾನಿ ಆಲಿಯಾಸ್ ಅಸರಾಮ್‌ನ ಆರಂಭ ದೈನ್ಯತೆಯಿಂದ ಕೂಡಿತ್ತು. ಆತನ ತಂದೆ ಸಣ್ಣ ಪ್ರಮಾಣದ ಕಲ್ಲಿದ್ದಲು ಮತ್ತು ಮರದ ವ್ಯಾಪಾರ ನಡೆಸುತ್ತಿದ್ದರು. ಓದು ತಲೆಗೆ ಹತ್ತದೆ ಪ್ರಾಥಮಿಕ ಶಾಲೆಯಿಂದ ಹೊರಬಿದ್ದ ಅಸಾರಾಮ ಟೀ ಅಂಗಡಿಯನ್ನು ನಡೆಸುತ್ತಿದ್ದ. ಬಳಿಕ ಕೆಲ ಕಾಲ ಸೈಕಲ್ ಮೆಕ್ಯಾನಿಕ್ ವೃತ್ತಿಯನ್ನು ನಡೆಸಿದ. ಇದಕ್ಕೆಲ್ಲ ತಿಲಾಂಜಲಿ ನೀಡಿ 1970ರಲ್ಲಿ ಗುಜರಾತ್ ರಾಜ್ಯದ ಅಹಮದಾಬಾದ್‌ನ ಸಬರಮತಿಯಲ್ಲಿ ಪುಟ್ಟ ಆಶ್ರಮವೊಂದನ್ನು ಆರಂಭಿಸಿದ. ಕೆಲ ಸಮಯದಲ್ಲಿ 10 ಎಕರೆ ಜಮೀನು ವಿಶಾಲವಾದ ಆಶ್ರಮವೊಂದನ್ನು ರೂಪಿಸಲು ದಾನವಾಗಿ ಸಿಕ್ಕಿತು. ಆದರೆ, ಈತನ ಕ್ಷಿಪ್ರಗತಿಯ ಏಳಿಗೆ ಶುರುವಾದದ್ದು 1980ರ ದಶಕದಲ್ಲಿ.

ಬುಡಕಟ್ಟು ಜನರನ್ನು ಹಿಂದುತ್ವದತ್ತ ಸೆಳೆಯುವ ಜಾಲ

ಬುಡಕಟ್ಟು ಜನರನ್ನು .'ಹಿಂದುತ್ವ'ದತ್ತ ಸೆಳೆಯುವ ಸಂಘಪರಿವಾರದ ಕಾರ್ಯತಂತ್ರ-ಕ್ಕೆ ಪೂರಕವಾಗಿ ಕಂಡ ಮೇಲೆ ಅಸಾರಾಮ್ ಈ ಪರಿ ಪ್ರವರ್ಧಮಾನಕ್ಕೆ ಬಂದದ್ದು ಸ್ಪಷ್ಟವಾಗಿ ಎದ್ದು ಕಾಣುತ್ತದೆ.

80ರ ದಶಕದಲ್ಲಿ ಅಸಾರಾಮ ಮಧ್ಯಪ್ರದೇಶ ಮತ್ತು ರಾಜಸ್ತಾನದಲ್ಲಿ ಆಶ್ರಮವನ್ನು ಆರಂಭಿಸುತ್ತಾನೆ. ರಾಜಸ್ತಾನ, ಮಧ್ಯಪ್ರದೇಶ ಮತ್ತು ಚತ್ತೀಸ್‌ಗಢದಲ್ಲಿ ಗುಡ್ಡಗಾಡುಗಳಲ್ಲಿ 'ಸತ್ಸಂಗ'ಗಳನ್ನು ನಡೆಸುತ್ತಾನೆ. ಆತನ 'ಸತ್ಸಂಗ'ಗಳಿಗೆ ಸಾಗರೋಪಾದಿಯಾಗಿ ಜನರನ್ನು ಅದರಲ್ಲೂ ಬುಡಕಟ್ಟು ಜನರನ್ನು ಸೆಳೆಯಲಾಗುತ್ತದೆ. ಆತನ ಪ್ರಮುಖ ಕೇಂದ್ರಗಳೂ ಬುಡಕಟ್ಟು ಸಮುದಾಯ ಬಾಹುಳ್ಯವಿರುವ ಪ್ರದೇಶಗಳೇ ಆಗಿವೆ. ಈಗ ಅಸಾರಾಮ 5000 ಕೋಟಿ ರೂಪಾಯಿ ಬೆಲೆಬಾಳುವ ಆಸ್ತಿಯ ಸಾಮ್ರಾಜ್ಯದ ಚಕ್ರವರ್ತಿ. ದೇಶ-ವಿದೇಶದಲ್ಲಿ ಎರಡು ಕೋಟಿಗೂ ಮಿಕ್ಕ ಭಕ್ತ ವೃಂದವನ್ನು ಹೊಂದಿದ 'ದೇವಮಾನವ'ನಾಗಿ ಬೆಳೆಯುತ್ತಾನೆ.



ಈ ಎಲ್ಲ ಬೆಳವಣಿಗೆಗಳ ಹಿಂದೆಯೂ ಆತನ ರಾಜಕೀಯ ಸಂಬಂಧಗಳು ಮತ್ತು ರಾಜ-ಕಾರಣ ಮುಖ್ಯಕಾರಣ. ಆತ ಸ್ಥಾಪಿಸಿರುವ ಎಲ್ಲ ಆಶ್ರಮಗಳೂ ಇರುವುದು ಬಿಜೆಪಿ ಮತ್ತು ಹಿಂದುತ್ವ ಶಕ್ತಿಗಳ ಪ್ರಾಬಲ್ಯ ಇರುವ ಕಡೆಗಳಲ್ಲಿ ಎಂಬುದು ಗಮನಾರ್ಹ. ಇದು ಆಕಸ್ಮಿಕವಲ್ಲ. ಅಸಾರಾಮನ ಸತ್ಸಂಗಗಳು, ಹೇಳಿಕೆಗಳು ಮತ್ತು ಚಟುವಟಿಕೆಗಳು ಕೇವಲ ಸಂಪ್ರದಾಯವಾದಿಗಳನ್ನು ಮತ್ತು ಸುಧಾರಣಾವಾದಿಗಳನ್ನು ಕೇಂದ್ರೀಕರಿಸಿಲ್ಲ. ಬದಲಾಗಿ 'ಹಿಂದೂ ಧರ್ಮದ ಹಕ್ಕು'ಗಳನ್ನು 'ಬಲವಾಗಿ' ಪ್ರತಿಪಾದಿಸುವತ್ತ ಅಸಾರಾಮ ತನ್ನ ಚಳವಳಿ ರೂಪಿಸಿದ್ದ.

ಫೆಬ್ರವರಿ 14ರಂದು ಆಚರಿಸುವ ಪ್ರೇಮಿಗಳ ದಿನದ ವಿರುದ್ಧ ಆತ ಸಮರವನ್ನೇ ಸಾರಿದ್ದ. ಸಾರ್ವಜನಿಕವಾಗಿ ಗಂಡು-ಹೆಣ್ಣುಗಳ ಪ್ರೀತಿಯ ಅಭಿವ್ಯಕ್ತಿಯನ್ನು, ಪ್ರೇಮ ನಿವೇದನೆಯನ್ನು ಆತ ಖಂಡಿಸಿದ್ದ. ಅಲ್ಲಿಗೆ ನಿಲ್ಲಿಸದೆ, ಈ ದಿನವನ್ನು 'ತಂದೆ ತಾಯಿಯರನ್ನು ಪೂಜಿಸುವ ದಿನ'ವಾಗಿ ಆಚರಿಸುವಂತೆ ಕರೆ ನೀಡಿದ್ದ. ಈತನ ಈ ಉದ್ಧಟತನದ ಸಂವಿಧಾನವಿರೋಧಿ ಹೇಳಿಕೆಗೆ ಕೆಲ ರಾಜ್ಯ ಸರ್ಕಾರಗಳೂ ಬೆಂಬಲ ನೀಡಿದ್ದವು. ಚತ್ತೀಸಗಢದ ರಮಣ್‌ಸಿಂಗ್ ಸರ್ಕಾರವಂತೂ ಎಲ್ಲ ಶಾಲೆಗಳಿಗೂ ಸುತ್ತೋಲೆಗಳನ್ನು ಕಳುಹಿಸಿ ಅಸಾರಾಮ್ ಬಯಸಿದಂತೆ ಈ ದಿನವನ್ನು 'ಮಾತಾ-ಪಿತ ಪೂಜನಾ ದಿನ'ವಾಗಿ ಆಚರಿಸುವಂತೆ ಆದೇಶ ನೀಡಿತ್ತು.

ದೆಹಲಿ ರೇಪ್.ಪ್ರಕರಣದ ಸಂದರ್ಭದಲ್ಲೂ ಅಸಾರಾಮ್ ಉದ್ಧಟತನದ ಹೇಳಿಕೆಯನ್ನು ನೀಡಿದ್ದ. ಇಂತಹ ಕೃತ್ಯಗಳು ದೇಶಾದ್ಯಂತ ನಡೆಯುತ್ತಿವೆ, ಇದಕ್ಕೆ ಮಹಿಳೆಯರೇ ಕಾರಣ ಎಂದೂ ಹೇಳಿದ್ದ. ಅತ್ಯಾಚಾರ ನಡೆಯುವಂತೆ ಆಗಲು ಅವಕಾಶ ನೀಡಿದ್ದೇ ಆಕೆಯ ತಪ್ಪು ಎಂದು ಹೇಳಿದ್ದ. ಅತ್ಯಾಚಾರ-ಕ್ಕೆ ಒಳಗಾದ ಪ್ಯಾರಾಮೆಡಿಕಲ್ ವಿದ್ಯಾರ್ಥಿನಿ ಆ ಸಂದರ್ಭದಲ್ಲಿ ಅತ್ಯಾಚಾರಿಗಳನ್ನು 'ಅಣ್ಣ....ಸಹೋದರ' ಎಂದೇ ಸಂಬೋಧಿಸಬೇಕಿತ್ತು, 'ತನ್ನನ್ನು ಬಿಟ್ಟುಬಿಡಿ ಅತ್ಯಾಚಾರ ಮಾಡಬೇಡಿ' ಎಂದು ಬೇಡಿಕೊಳ್ಳಬೇಕಿತ್ತು ಎಂದು ಪುಕ್ಕಟೆ ಸಲಹೆ ನೀಡಿದ್ದ ಅಸಾರಾಮ್. ಆದರೆ, ಅಸಾರಾಮನ ಈ ಮತಿಗೆಟ್ಟ ಹೇಳಿಕೆಯನ್ನು ಖಂಡಿಸಿ ಹಿಂದೂ ಬ್ರಿಗೇಡ್‌ನಿಂದ ಯಾವುದೇ ಮಾತೂ ಹೊರಡಲಿಲ್ಲ.

ಬಲಪಂಥೀಯ ಪೋಷಕನಾಗಿ

ಆದರೆ ಈಗ ನೆಲದ ಕಾನೂನು ತನ್ನ ಅಸ್ತಿತ್ವ ತೋರಿಸಿದೆ. ಲೆಕ್ಕವಿಲ್ಲದಷ್ಟು ಪ್ರಮಾಣದಲ್ಲಿ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿರುವುದು, ನಕಲಿ ಔಷಧಿಯನ್ನು ತಯಾರಿಸಿ ಮಾರಾಟ ಮಾಡುತ್ತಿರುವುದು ಮತ್ತು ಮಹಿಳಾ ಭಕ್ತರನ್ನು ಶೋಷಣೆ ಮಾಡಿರುವ ಹಲವು ಪ್ರಕರಣಗಳು ಬಯಲಿಗೆ ಬಂದಿವೆ. ಗುಜರಾತ್, ಮಧ್ಯಪ್ರದೇಶ, ರಾಜಸ್ತಾನ ಮತ್ತು ದೇಶದ ಇತರ ಭಾಗಗಳಲ್ಲಿ ಭೂಮಿಯನ್ನು ನುಂಗಿರುವ ಮಾಹಿತಿಗಳು

ಪುಟ 15 ಕ್ಕೆ

ಆಶ್ರಮದಲ್ಲಿ ಮುಗ್ಧ ಮಕ್ಕಳ ನರಬಲಿ



ಅಸಾರಾಮ್ ಆಶ್ರಮದಲ್ಲಿ ನರಬಲಿ ನೀಡಲಾದ ಮುಗ್ಧ ಮಕ್ಕಳು ದೀಪೇಶ್ ಮತ್ತು ಅಭಿಷೇಕ ವಘೇಲ



ಸಹಯಾನದಲ್ಲಿ ಮಕ್ಕಳಿಗೆ ಸಿಕ್ಕಿತು 'ಬಣ್ಣ ಬಣ್ಣದ ರಜಾ'

ಯಮುನಾ ಗಾಂವ್ಕರ

ಏಳು ದಿನಗಳ ಕಾಲ ಕೆರೆಕೋಣದ 'ಸಹಯಾನ'ದ ತುಂಬಾ ಮಕ್ಕಳ ಓಡಾಟ; ಗೌಜು, ಗಲಾಟೆ, ಕುಣಿತ, ನಗೆತ; ಜಾತಿ, ಧರ್ಮ, ಲಿಂಗ ಅಸಮಾನತೆಗಳ ಸೋಂಕು ಇಲ್ಲದ ಬಾಲ್ಯದ ಕನಸುಗಳಿಗೆ ಇನ್ನೊಂದಿಷ್ಟು ರಂಗು ತುಂಬಿಕೊಳ್ಳುವ, ಹೊಳಪು ಮೆತ್ತಿಕೊಳ್ಳುವ ಉತ್ಸಾಹ ಮಕ್ಕಳದ್ದು. 'ಎಲೆಗಳು ನೂರಾರು, ಭಾವದ ಎಲೆಗಳು ನೂರಾರು. ಎಲೆಗಳ ಬಣ್ಣ ಒಂದೇ..' ಎನ್ನುವ ಕವಿತೆಯ ಸಾಲುಗಳಿಗೆ ಹೊಸ ಅರ್ಥ ಕೊಡುವಂತೆ ಮಕ್ಕಳ ಭಾವಗಳ ಅಭಿವ್ಯಕ್ತಿಗೆ 'ಸಹಯಾನ' ಸಾಕ್ಷಿಯಾಗಿತ್ತು.

ಟಿವಿ ಇಲ್ಲವೇ ಕ್ರಿಕೆಟ್ ನಲ್ಲಿ ತಲ್ಲೀನರಾಗಿ ಪಾಲಕರಿಂದ ಬೈಸಿಕೊಳ್ಳಬೇಕಾದ ಮಕ್ಕಳು 'ಚಿಂತನ ರಂಗ ಅಧ್ಯಯನ ಕೇಂದ್ರ' ಮತ್ತು ಸಹಯಾನ (ಡಾ. ಆರ್.ವಿ. ಭಂಡಾರಿ ನೆನಪಿನ ಸಂಸ್ಕೃತಿ ಅಧ್ಯಯನ ಕೇಂದ್ರ)ವು ಸುಬ್ಬಿ ಭಂಡಾರಿ ನೆನಪಿನಲ್ಲಿ ಕೆರೆಕೋಣದಲ್ಲಿ ಅಕ್ಟೋಬರ್ 21 ರಿಂದ 27 ರವರೆಗೆ ನಡೆಸಿದ 'ಬಣ್ಣ ಬಣ್ಣದ ರಜಾ' ಮಕ್ಕಳ ರಂಗ ತರಬೇತಿ ಶಿಬಿರದಲ್ಲಿ ಒಂದು ವಾರಗಳ ಕಾಲ ತಮ್ಮನ್ನೇ ತಾವು ಮರೆತು ರಜಾಕ್ಕೆ ಬಣ್ಣ ತುಂಬಿದ್ದು ಹೀಗೆ. ಗ್ರಾಮೀಣ ಪ್ರದೇಶದ ಸುಮಾರು 45 ಮಕ್ಕಳು ಭಾಗವಹಿಸಿದ ಈ ಶಿಬಿರದಲ್ಲಿ ಎಲ್ಲರನ್ನೂ ಒಳಗೊಳ್ಳುವ, ಎಲ್ಲರನ್ನೂ 'ನಮ್ಮವರು' ಎಂಬ ಸಮಷ್ಠಿ ಪ್ರಜ್ಞೆಯೊಂದಿಗೆ ನೋಡುವ ಕಿರುನೋಟವನ್ನು, ದೇಹ ಮನಸ್ಸುಗಳೆರಡನ್ನೂ ಒಟ್ಟಿಗೇ ಬೆಸೆಯುವ, ಅವುಗಳ ಸಾಧ್ಯತೆಗಳನ್ನು ಅನ್ವೇಶಿಸುವ ರಂಗ ತರಬೇತಿಯ ಮೂಲಕ ಸಾಧಿಸುವ ಕೆಲಸ ನಡೆಯಿತು. ಶಿಬಿರವು ಅಭಿನಯ, ಬಣ್ಣ, ಚಿತ್ರ ಶಿಲ್ಪ, ನೃತ್ಯ, ಸಂಗೀತ, ಸಾಹಿತ್ಯ, ಜನಪದ ಕಲೆಗಳ ಸಾಹಚರ್ಯಗಳಿಂದ ಕೂಡಿತ್ತು. ಮಕ್ಕಳ ಸರ್ವತೋಮುಖ ವಿಕಾಸಕ್ಕೆ ಇರುವ ಪಠ್ಯೇತರ ಸಾಧ್ಯತೆಗಳನ್ನು ಪ್ರಯೋಗದ ಮೂಲಕ ಕಂಡು ಕೊಳ್ಳುವ ಪ್ರಯತ್ನದ ಭಾಗವೇ ಆದ ಈ ಶಿಬಿರ ಮಕ್ಕಳ ಕಲಾ ಪ್ರದರ್ಶದ ಮೂಲಕ ಸಂಪನ್ನಗೊಂಡಿತು.

ಏಳು ದಿನಗಳ ಕಾಲ ರಂಗಗಳಲ್ಲಿ ಮಹತ್ವದ ಸಾಧನೆ ಮಾಡಿದ ಸಂಪನ್ಮೂಲ ವ್ಯಕ್ತಿಗಳು ಮಕ್ಕಳೊಂದಿಗೆ ಕಳೆದರು. ಸಾಂಪ್ರದಾಯಿಕವಲ್ಲದ ರೀತಿಯಲ್ಲಿ– ಸಂಪನ್ಮೂಲ ವ್ಯಕ್ತಿಗಳೂ ಸಂಘಟಕರೂ ಆ ಕ್ಷಣ ಮಕ್ಕಳಾಗಿ ಶಿಬಿರದ ಮಕ್ಕಳೊಂದಿಗೆ ಪುಗ್ಗೆ ಹಿಡಿದು (ಬಲೂನ್) ಕೇಕೆ ಹಾಕಿ ಕುಣಿಯುವುದರೊಂದಿಗೆ– ಪ್ರಾರಂಭವಾದ ಈ ಶಿಬಿರ ಕೊನೆಗೊಂಡಿದ್ದೂ ಇಂಥ ಕುಣಿತದ ಮೂಲಕವೇ.

ಶಿಬಿರದುದ್ದಕ್ಕೂ ಇದ್ದು ವಿವಿಧ ರೀತಿಯ ರಂಗ ವ್ಯಾಯಾಮ, ಆಟ, ಅಭಿನಯಗಳನ್ನು ಹೇಳಿಕೊಡುತ್ತಲೇ ಕಾಡಿನ ಜನರ ಮುಗ್ಧತೆ ಮತ್ತು ಪರಿಸರ ಪ್ರೀತಿ, ನಾಡಿನವರ ಕೊಳ್ಳುಬಾಕತನದ ಅಪಾಯದ ಬಗ್ಗೆ ಹೇಳುವ 'ಜಗತ್ತಿನ ಕೊನೆಯ ಮನುಷ್ಯ' ನಾಟಕ ಮಾಡಿಸಿದ ಮಂಗಳೂರಿನ ರಂಗ ನಿರ್ದೇಶಕ ವಿದ್ದು ಉಚ್ಚಿಲ್, ಸುಮಾರು ಮೂವತ್ತು ಮಕ್ಕಳನ್ನು ರಂಗದ ಮೇಲೆ ಬಳಸಿಕೊಂಡಿದ್ದು ಆಕರ್ಷಕವಾಗಿತ್ತು. ಖ್ಯಾತ ನೃತ್ಯ ಕಲಾವಿದೆ ಮಂಜುಳಾ ಸುಬ್ರಹ್ಮಣ್ಯ ಅವರು ಮಕ್ಕಳಿಂದ ಹಲವು ರೂಪಕ ಮತ್ತು ನೃತ್ಯಗಳನ್ನು ಮಾಡಿಸಿದರು. ಮಾಧವಿ ಭಂಡಾರಿ ಕೆರೆಕೋಣ ಮಕ್ಕಳಿಗೆ ಕವಿತೆ ಬರೆಯುವುದನ್ನು ಹೇಳಿಕೊಟ್ಟರು. ಖ್ಯಾತ ಚಿತ್ರಕಲಾವಿದ ಸತೀಶ ಯಲ್ಲಾಪುರ ಮತ್ತು ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕ ತಮ್ಮಣ್ಣ ಬೀಗಾರ ಮಕ್ಕಳಿಗೆ ಸುಲಭದಲ್ಲಿ ಗ್ರೀಟಿಂಗ್ ತಯಾರಿಸುವ ಮತ್ತು ಚಿತ್ರ ಬಿಡಿಸುವ ಕಲೆಯನ್ನು ಕಲಿಸಿದರು. ಹಿರಿಯ ಕಲಾವಿದ ಬಿ.ವಿ.ಭಂಡಾರಿ, ಹರೀಶ ಭಂಡಾರಿ, ಮಂಜುನಾಥ ಕರ್ಕಿ ಮಣ್ಣಿನ ಕಲಾಕೃತಿ ಮಾಡುವುದನ್ನು ಹೇಳಿಕೊಟ್ಟರು. ಮಕ್ಕಳಂತೂ ಅರ್ಧದಿನಗಳ ಕಾಲ ಜೇಡಿಮಣ್ಣಿನೊಂದಿಗೆ ಬೆರೆತು ತಮ್ಮ ಕಲ್ಪನೆಯ ಹಲವು ಮಣ್ಣಿನ ಕಲಾಕೃತಿಗಳನ್ನು ಮಾಡಿಟ್ಟರು.

ಮುಂಡಗೋಡಿನ ವಿದ್ವಾನ್ ವಿಶ್ವನಾಥ ಹಿರೇಮಠ ಕಲಿಸಿದ ಸುಂದರವಾದ ಮಕ್ಕಳ ಹಾಡುಗಳು ಶಿಬಿರ ಮುಗಿದ ಮೇಲೂ ಗುನುಗುನಿಸುತ್ತಿದ್ದವು. ಗಣೇಶ ಭಂಡಾರಿ ಯಕ್ಷಗಾನದ ಹೆಜ್ಜೆ ಹೇಳಿಕೊಟ್ಟರು. ದಾಮೋದರ ನಾಯ್ಕ ಮತ್ತು ಶ್ರೀನಿವಾಸ ನಾಯ್ಕ ಅವರು ನಿರ್ದೇಶಕರಾಗಿ ನಡೆಸಿಕೊಟ್ಟ ಈ ಶಿಬಿರದಲ್ಲಿ ಯಮುನಾ ಗಾಂವ್ಕರ್, ಶ್ರೀಪಾದ ಭಟ್, ಪ್ರಮೋದ ನಾಯ್ಕ, ಅನಂತ ನಾಯ್ಕ, ವಿದ್ಯಾಧರ ಕಡತೋಕ, ಮಾಸ್ತಿ ಗೌಡ, ರಾಘವೇಂದ್ರ, ನೇತ್ರಾವತಿ ಮೊದಲಾದವರು ಮಕ್ಕಳಿಗೆ ವಿವಿಧ ಚಟುವಟಿಕೆಗಳನ್ನು ಮಾಡಿಸುವ ಮೂಲಕ ಶಿಬಿರದ ಯಶಸ್ಸಿಗೆ ಕಾರಣರಾದರು.

ಸಹಯಾನದ ಕಾರ್ಯದರ್ಶಿ ಡಾ. ವಿಠ್ಠಲ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭದಲ್ಲಿ, ಮಕ್ಕಳು ಬರೆದ ಕವಿತೆಗಳನ್ನು, ಬಿಡಿಸಿದ ಚಿತ್ರಗಳನ್ನು, ರೂಪಿಸಿದ ಮಣ್ಣಿನ ಕಲಾಕೃತಿಗಳನ್ನು ಉದ್ಘಾಟಿಸಿ ಮಕ್ಕಳ ಪಾಲ್ಗೊಳ್ಳುವಿಕೆಯನ್ನು ಮೆಚ್ಚಿ ಮಾತನಾಡಿದ ಮಕ್ಕಳ ಲೇಖಕ ಸುಮುಖಾನಂದ ಜಲವಳ್ಳಿ, ಡಾ. ಇಸ್ಮಾಯಿಲ್ ತಲಖಣಿ ಸೊರಗುತ್ತಿರುವ ಸಾಂಪ್ರದಾಯಿಕ ಶಿಕ್ಷಣ ಕ್ರಮದಲ್ಲಿ ಆಗಬೇಕಾದ ಹೊಸ ಬದಲಾವಣೆಗಳು ಮತ್ತು ಇಂಥ ಶಿಬಿರದ ಅಗತ್ಯತೆಯನ್ನು ಒತ್ತಿ ಹೇಳಿದರು.

'ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರವಾರ' ಇವರ ನೆರವಿನೊಂದಿಗೆ ನಡೆದ ಕೊನೆ ದಿನದ ಕಲಾಪ್ರದರ್ಶನ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿ[...] ತಮ್ಮ ಮಕ್ಕಳು ಇಷ್ಟೊಂದು ಕ್ರಿಯಾಶೀ[...] ಎಂದು ಪಾಲಕರು ಹುಬ್ಬೇರಿಸುವಂತೆ [...] ಪೂರ್ಣವಾಗಿ ಉಚಿತವಾಗಿಯೇ ನ[...] ಈ ಶಿಬಿರ ಮಕ್ಕಳ ನಡುವಿನ ಸಂಕೋ[...] ಹೊರ ಹಾಕಿ ಅವರೊಳಗಿನ ಪ್ರತಿಭೆಯ[...] ಪ್ರಕಟಿಸುವಲ್ಲಿ ಯಶಸ್ವಿಯಾಯಿತು.

ಬಾಲ್ಯದ ಬಣ್ಣಗಳ ಮೇಳ. ನಾಗರಿಕ[...] ಯ ಹೊಡೆತಕ್ಕೆ ಸಿಕ್ಕು ಬಣ್ಣಗೆಡುತ್ತಿ[...] ಸಂದರ್ಭದಲ್ಲಿ ಬಾಲ್ಯಕ್ಕಿಷ್ಟು [...] ತುಂಬಬೇಕೆಂಬುದೇ ಶಿಬಿರದ ಸಂಘಟ[...] ಹಂಬಲವಾಗಿತ್ತು. ಮಾಹಿತಿಗಳನ್ನು ಮೆ[...] ಮೊಗೆದು ತುಂಬುವದೇ ಶಿಕ್ಷಣ ಎಂಬ[...] ಮಟ್ಟಿಗೆ ಇಂದಿನ ಶಿಕ್ಷಣ ಹದಗೆ[...] ಮೆದುಳಿನ ಕೆಲಭಾಗಗಳನ್ನಷ್ಟೇ ಬೆಳೆ[...] ಮಕ್ಕಳನ್ನು ಅಂಗವಿಕಲರನ್ನಾಗಿಸು[...] ಜೀವನಕ್ಕೆ ಸೌಂದರ್ಯ ತಂದುಕೊಡ[...] ಎಲ್ಲ ಸಂಗತಿಗಳೂ ಕಾಲಹರಣ ಎಂ[...] ಬಿಂಬಿಸಲಾಗುತ್ತದೆ. ಹಣಗಳಿಸ[...] ಯಂತ್ರಗಳನ್ನಾಗಿ ಅವರ[...] ಸಿದ್ಧಪಡಿಸಲಾಗುತ್ತಿದೆ. ಹೊರ[...] ಲೋಕವನ್ನು ಕಣ್ತೆರೆದು ನೋ[...] ಅದರೊಂದಿಗೆ ಸಂಬಂಧ ಬೆಳೆಸಿಕೊ[...] ಸಾಧ್ಯತೆಗಳನ್ನು ಕಳೆದುಕೊಂಡು ರೊಬೊ[...] ಸಂತಾನಗಳಾಗುತ್ತಿದ್ದಾರೆ. ಇಂತಹ ಸಂದ[...] ಈ ಶಿಬಿರ ಮಕ್ಕಳಿಗೆ ಬದುಕಿನ ಅರ್ಥಪೂರ್ಣ[...] ಮತ್ತು ಸೌಂದರ್ಯವನ್ನು ಮನಗಾಣಿಸ[...] ಒಂದು ಭಿನ್ನ ಅನುಭವವಾಗಿತ್ತು.

ಹೊಸ ಕೃಷಿ.......

ಪುಟ 10 ರಿಂದ

ತರಲಾಗುತ್ತಿದೆ.

ಈಗಾಗಲೇ ಅಸ್ತಿತ್ವದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನ, ಕಾಯಿದೆ ಅಂಗೀಕರಿಸುವ ಮೂಲಕ ರಾಜ್ಯ ಸರ್ಕಾರಗಳೇ ನಿರ್ಮಿಸಿವೆ. ಇರುವವುಗಳನ್ನು ಸಮರ್ಥವಾಗಿ ಬಳಸಲು ಸಾಧ್ಯವಾದರೆ ಅವುಗಳಿಗೆ, ರೈತರಿಗೆ, ಸ್ಪರ್ಧಾತ್ಮಕ ಬೆಲೆ ಒದಗಿಸುವ ಮತ್ತು ಮಧ್ಯವರ್ತಿಗಳ ಹಾಗೂ ವ್ಯಾಪಾರಿಗಳ ಶೋಷಣೆ ತಪ್ಪಿಸುವ ಉದ್ದೇಶವಿದೆ. ಇಂತಹ ಮಾರುಕಟ್ಟೆಗಳು, ಸೀಮಿತ ಅಧಿಕಾರ ಹಾಗೂ ಸಂಪನ್ಮೂಲ ಹೊಂದಿದ್ದರೂ, ಜನತೆಗೆ ಉತ್ತರದಾಯಿತ್ವ ಹೊಂದಿದ, ಚುನಾಯಿತಗೊಂಡ ಆಡಳಿತ ಸಮಿತಿಯ ಮೂಲಕ ನಿರ್ವಹಣೆಗೊಳ್ಳುತ್ತಿವೆ.

ಮಾದರಿ ಎಂದು ಕರೆಸಿಕೊಳ್ಳುವ, ಈ 'ಮಾರುಕಟ್ಟೆ ಕಾಯಿದೆ–2003' ಖಾಸಗಿ ಹಾಗು ವಿಶೇಷ ಮಾರುಕಟ್ಟೆಗಳಿಗೆ ಅನುಮತಿ ನೀಡುತ್ತದೆ. ಈ ಮೂಲಕ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶಕ್ಕೆ ಮಾರ್ಗಸೂಚಿಸುತ್ತದೆ. ಮಾತ್ರವಲ್ಲ, ಜನತೆಗೆ ಉತ್ತರ ದಾಯಿತ್ವ ಹೊಂದಿದ ಚುನಾಯಿತ ಆಡಳಿತ ಮಂಡಳಿ ನಿರ್ವಹಣೆಯಿಂದಲೂ ವಿನಾಯಿತಿ ನೀಡುತ್ತದೆ. ಗುತ್ತಿಗೆ ಕೃಷಿಯನ್ನ ಮತ್ತು ಮುಂಗಡ ವ್ಯಾಪಾರವನ್ನು ಪ್ರೋತ್ಸಾಹಿಸುತ್ತದೆ. ಇದರ ನಿರ್ವಹಣೆಯನ್ನ ಸರ್ಕಾರದಿಂದ ನೇಮಿಸಲ್ಪಟ್ಟ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಒಳಗೊಂಡ ಸದಸ್ಯರ ಸಮಿತಿ ಮಾಡುತ್ತದೆ ಎನ್ನಲಾಗಿದೆ. ಈಗ ಹಾಲಿ ಮಾರುಕಟ್ಟೆಯಲ್ಲಿ ನಡೆಯುವ ಕಮಿಷನ್ ಏಜೆಂಟ್ ಹಾಗೂ ಮಧ್ಯವರ್ತಿಗಳಿಂದ ನಡೆಯುವ ತೂಕ ಮತ್ತು ಕಮಿಷನ್ ಹಾಗು ಹಣ ನೀಡುವ ವಿಷಯದಲ್ಲಿ ಕಂಡುಬರುವ ವಂಚನೆಗಳು ಇನ್ನು ಮುಂದೆ ನಡೆಯಲಾರದೆಂದು ಬೊಬ್ಬಿಡಲಾಗುತ್ತಿದೆ.

ವಾಸ್ತವದಲ್ಲಿ ಈ ಬೃಹತ್ ಕಂಪನಿ[...] ನಿಧಾನವಾಗಿ ತಾಲೂಕ ತಾಲೂಕವ[...] ಹಾಗೂ ಜಿಲ್ಲೆ ಜಿಲ್ಲೆಗಳನ್ನೇ ಆಕ್ರ[...] ಮಾರುಕಟ್ಟೆಯ ಗುತ್ತಿಗೆ ಹಿಡಿಯಲಿ[...] ಅವುಗಳ ಉದ್ದೇಶ ಸ್ಪಷ್ಟವಾ[...] ಮಧ್ಯವರ್ತಿಗಳ ಹಾಗೂ ವ್ಯಾಪಾ[...] ಬೆಲೆ ಏರಿಳಿತ ಅಸ್ಥಿರದಿಂದ ಮತ್ತು ವ್ಯಾ[...] ಗುತ್ತಿಗೆಯಿಂದ ರೈತರನ್ನ ಸಂರಕ್ಷ[...] ನೆರವಾಗಿದ್ದ ಹಾಲಿ ಎಪಿಎಂಸಿಗ[...] ನಿಸ್ಕ್ರಿಯಗೊಳಿಸಿ ನಾಶಗೊಳಿಸಲಿವೆ. ಮೂಲಕ ಹಾಲಿ ಇರುವ ಲಕ್ಷಾಂತರ [...] ವ್ಯಾಪಾರಿ ಹಾಗೂ ಹಮಾಲಿ ಮು[...] ಕಾರ್ಮಿಕ ಕುಟುಂಬಗಳನ್ನ ಬೀದಿಗೆ ತಳ್ಳ[...] ಮತ್ತು ಯಾವುದೇ ನಿಯಂತ್ರಣವಿಲ್ಲದ [...] ಹೊಸ ಮಾರುಕಟ್ಟೆಗಳು, ರೈತರ [...] ಶೋಷಣೆಗೆ ಮತ್ತು ಕೃಷಿ ಉತ್ಪನ್ನಗಳ ವ[...] ದರ ಕುಸಿತಕ್ಕೆ ಕಾರಣವಾಗಲಿವೆ.

ಇಂತಹ ಆತಂಕದ ವಿರುದ್ಧ ಮುಖ್ಯ[...] ಕರ್ನಾಟಕದಲ್ಲಿ ಎಪಿಎಂಸಿ ವರ್ತ[...] ಅಲ್ಲಿ ಕಾರ್ಯನಿರ್ವಹಿಸುವ ಕೆಲಸಗಾ[...] ಹಮಾಲರು ಮತ್ತು ರೈತರು ರಾಜ್ಯದಾದ[...] 144 ಮಾರುಕಟ್ಟೆಗಳನ್ನ 2 ಬಾರಿ ಬ[...] ಮಾಡುವ ಮೂಲಕ ಭಾರಿ ಪ್ರತಿ[...] ಧ ನಡೆಸಿದ್ದರೂ, ಸೂಪರ್ ಮಾರು[...] ಹೆಸರಿನಲ್ಲಿ ಮತ್ತು ವಿಶೇಷ ಮಾರು[...] ಹೆಸರಿನಲ್ಲಿ ಬಿಜೆಪಿ ಕರ್ನಾಟಕದ [...] ಸರ್ಕಾರ ಪುನಃ ಅದರ ಜಾರಿಗೆ ಯತ್ನಿ[...] ಇದರ ಭಾಗವಾಗಿ ಉತ್ತರ ಕರ್ನಾ[...] ಭತ್ತ ಬೆಳೆಗಾರರನ್ನ ಕೊಳ್ಳೆ ಹೊಡೆಯ[...] ಗಂಗಾವತಿಯನ್ನ ಕೇಂದ್ರವನ್ನಾಗಿಸಿ [...] ಪಾರ್ಕ್ ರಚಿಸುವ ಇಂಗಿತವನ್ನು ರಾ[...] ಮುಂದೆ ಇಟ್ಟಿತು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಹಣದುಬ್ಬರ: ಮತ್ತದೇ ಚೌಚೌ ಕ್ರಮಗಳ ಖಯಾಲಿ

ಎನ್.ಕೆ. ವೇದರಾಜ


ಹಣದುಬ್ಬರದ ಸಮಸ್ಯೆ ಇನ್ನೂ ಶವನ್ನು ಕಾಡುತ್ತಿದೆ ಎಂದು ರಿಝರ್ವ್ ರ್ಕ್‌ನ ಹೊಸ ಗವರ್ನರ್ ಕೂಡ ಈಗ ಕೊಂಡಿದ್ದಾರೆ. ಸಗಟು ಬೆಲೆ ಸೂಚ್ಯಂಕ ಧಾರಿತ ಹಣದುಬ್ಬರ ತೀವ್ರವಾಗಿ ಏರುತ್ತಿದೆ. ೇ 2013 ರಲ್ಲಿ 4.58 ಶೇ. ಇದ್ದದ್ದು ಟಂಬರ್ 2013 ರಲ್ಲಿ 6.46ಶೇ.ಕ್ಕೇರಿದೆ. ಕೆದಾರ ಬೆಲೆ ಸೂಚ್ಯಂಕದ ಆಧಾರದಲ್ಲಿ ದು ಎರಡಂಕಿಯನ್ನು ಸಮೀಪಿಸುತ್ತಿದೆ. ೇ ಅವಧಿಯಲ್ಲಿ ಅದು 9.31 ಶೇ.ದಿಂದ 84 ಶೇ.ಕ್ಕೆ ಏರಿದೆ. ಅಲ್ಲದೆ ದೇಶದ ಡಿಪಿ ಬೆಳವಣಿಗೆ ಈ ವರ್ಷ 5ಶೇ. ದರೂ ಇರಬಹುದು ಎಂಬ ರೀಕ್ಷೆಯೂ ಈಡೇರಲಿಕ್ಕಿಲ್ಲ ಎಂದೂ ಅವರು ಕೊಂಡಿದ್ದಾರಂತೆ.

ಇಂತಹ ಹಿನ್ನೆಲೆಯಲ್ಲಿ ಪ್ರಮುಖ ಡ್ಡಿದರವನ್ನು 7.5ಶೇ.ದಿಂದ 7.75ಶೇ. ರಿಸಲಾಗಿದೆ. ಇದು ದೊಡ್ಡ ಉದ್ಯಮಿಗಳಿಗೆ ಷ್ಟವಾಗದ ಸಂಗತಿ. ಈ ಕಾರಣಕ್ಕಾಗಿಯೇ ರು, ಮತ್ತು ಅವರ ಪರವಾಗಿ ಯುಪಿಎ-2 ಸರ್ಕಾರದ ಹಣಕಾಸು ಮಂತ್ರಿಗಳೂ, ಯೋಜನಾ ಆಯೋಗದ ಉಪಾಧ್ಯಕ್ಷರೂ ೂಡ ಹಿಂದಿನ ರಿಝರ್ವ್ ಬ್ಯಾಂಕ್ ವರ್ನರ್ ಬಗ್ಗೆ ನೇರವಾಗಿ, ಪರೋಕ್ಷವಾಗಿ ಅಸಮಾಧಾನ ಸೂಚಿಸುತ್ತಲೇ ಇದ್ದುದನ್ನು ನಾವು ಗಮನಿಸಿದ್ದೇವೆ. ಅವರು ಹಣದುಬ್ಬರದ ಮೇಲೆ ಹತೋಟಿ ಹೊಂದುವುದು ತಮ್ಮ ಆದ್ಯ ಕರ್ತವ್ಯ ಎನ್ನುತ್ತ 'ಬೆಳವಣಿಗೆ'ಗೆ ಪ್ರೋತ್ಸಾಹ ನೀಡುವ ನೀತಿ ಅನುಸರಿಸುತ್ತಿರಲಿಲ್ಲ ಎಂಬುದು ಈ ಅಸಮಾಧಾನಕ್ಕೆ ಕಾರಣ. ಆದ್ದರಿಂದಲೇ ಅವರು ನಿವೃತ್ತರಾಗಿ ಅಧಿಕಾರ ವಹಿಸಿಕೊಂಡ ಹೊಸ ಗವರ್ನರ್ ಚಮತ್ಕಾರ ಮಾಡಲಿದ್ದಾರೆ ಎಂದೆಲ್ಲ ಮಾಧ್ಯಮಗಳಲ್ಲಿ ಪ್ರಚಾರ ನಡೆದಿತ್ತು.

ಆದರೆ ಈಗ ಹೊಸ ಗವರ್ನರ್ ಕೂಡ ಹಣದುಬ್ಬರದ ಸಮಸ್ಯೆಯನ್ನು ಹಿನ್ನೆಲೆಗೆ ತಳ್ಳಿ ಉದ್ಯಮಿಗಳಿಗೆ 'ಬೆಳವಣಿಗೆ'ಯ ಹೆಸರಲ್ಲಿ ಅಗ್ಗದ ಸಾಲಮೂಲಗಳನ್ನು ಒದಗಿಸುತ್ತಾರೆ ಎಂಬ ನಿರೀಕ್ಷೆ ಈಡೇರಿಲ್ಲ. ಅವರೂ ಹಿಂದಿನ ಗವರ್ನರ್ ರಂತೆ ಹಣದುಬ್ಬರದ ಮೇಲೆ ಹತೋಟಿ ಹೊಂದುವ ಕ್ರಮಗಳಿಗೆ ಆದ್ಯತೆ ನೀಡಬೇಕಾಗಿ ಬಂದಿದೆ. ಆದರೆ ಅದೇ ವೇಳೆಗೆ ಉದ್ಯಮಿಗಳನ್ನು ಸಂಪೂರ್ಣ ನಿರಾಶೆಗೊಳಿಸುವಂತಿಲ್ಲ. ಆದ್ದರಿಂದಲೇ ಅವರು ಎರಡನೇ ಕಾಲುವಾರ್ಷಿಕ ಪರಾಮರ್ಶೆಯ ನಂತರ ಒಂದೆಡೆ ಬಡ್ಡಿದರಗಳನ್ನು ಹೆಚ್ಚಿಸಿದರೂ, ಇನ್ನೊಂದೆಡೆಯಲ್ಲಿ ಆರ್ಥಿಕದೊಳಗೆ ಹರಿದು ಬರುವ ಹಣದ ಪ್ರಮಾಣವನ್ನು ಹೆಚ್ಚಿಸುವ ಕ್ರಮಗಳನ್ನೂ ಕೈಗೊಂಡಿದ್ದಾರೆ. ಇದೂ ಹೊಸತೇನಲ್ಲ.

ಅಂದರೆ ಒಂದೆಡೆ ಹಣದುಬ್ಬರವನ್ನು ತಡೆಯುವ ಕ್ರಮಗಳೊಂದಿಗೇ, ಉದ್ಯಮಿಗಳಿಗೆ ಸುಲಭವಾಗಿ ಹಣ ಲಭ್ಯವಾಗುವಂತೆ ಮಾಡುವ, ಒಟ್ಟಾರೆಯಾಗಿ ಕಲಸು ಮೇಲೋಗರದ (ಚೌಚೌ) ಧೋರಣೆಯ ಖಯಾಲಿ ಮುಂದುವರೆದಿದೆ ಎಂದು ಪ್ರಖ್ಯಾತ ಅರ್ಥಶಾಸ್ತ್ರಜ್ಞ ಡಾ. ಸಿ.ಪಿ.ಚಂದ್ರಶೇಖರ್ ಅಭಿಪ್ರಾಯ ಪಟ್ಟಿದ್ದಾರೆ.

ಬಡ್ಡಿದರಗಳನ್ನು ಹೆಚ್ಚಿಸಿ ಹಣದುಬ್ಬರದ ಮೇಲೆ ಹತೋಟಿ ಪಡೆಯಬಹುದು, ಹಾಗೆಯೇ ಕಾರುಗಳು, ಸ್ಕೂಟರುಗಳು, ಇತರ ಬೆಲೆಬಾಳುವ ಸರಕುಗಳನ್ನು ಕೊಳ್ಳಲು ಹೆಚ್ಚಿನ ಬಡ್ಡಿಯಲ್ಲಾದರೂ ಹೆಚ್ಚಿನ ಹಣಕಾಸು ಒದಗುವಂತೆ ಮಾಡುವ ಮೂಲಕ 'ಬೆಳವಣಿಗೆ'ಗೆ ಉತ್ತೇಜನೆ ಒದಗಬಹುದೆಂಬುದು ರಿಝರ್ವ್ ಬ್ಯಾಂಕಿನ ಮತ್ತು ಯುಪಿಎ-2 ಸರಕಾರದ ಆಡಳಿತಗಾರರ ನಿರೀಕ್ಷೆ.



ನಿಜ, ಇದು ಸಾಲ-ಪ್ರೇರಿತ 'ಬೆಳವಣಿಗೆ'ಗೆ ಉತ್ತೇಜನೆ ನೀಡಬಹುದು, ಆದರೆ ಬಡ್ಡಿದರ ಏರಿಸಿದೆ ಎಂದ ಮಾತ್ರಕ್ಕೆ ಇಂತಹ 'ಬೆಳವಣಿಗೆ' ಹಣದುಬ್ಬರಕ್ಕೆ ಅವಕಾಶ ನೀಡಲಾರದು ಎಂದು ಹೇಗೆ ತಾನೇ ಭಾವಿಸಬಹುದು, ಇದು ಈಗಲೂ ಅಸ್ಪಷ್ಟವಾಗಿದೆ ಎನ್ನುತ್ತಾರೆ ಡಾ. ಚಂದ್ರಶೇಖರ್. ಈಗಿನ ದಾರಿಯಲ್ಲೇ ಸಾಗಿದರೆ ಹಣದುಬ್ಬರದ ಮೇಲೆ ಹತೋಟಿ ಮತ್ತು ಜಿಡಿಪಿ ಬೆಳವಣಿಗೆಗೆ ಉತ್ತೇಜನೆ ಇವರೆಡನ್ನೂ ಒಟ್ಟಿಗೇ ಸಾಧಿಸುವುದು ರಿಝರ್ವ್ ಬ್ಯಾಂಕಿಗೆ ಒಂದು ಎದೆಗುಂದಿಸುವ ಕೆಲಸವೇ ಎನ್ನುತ್ತಾರೆ ಅವರು.

ಕಲ್ಲಿದ್ದಲು ಹಗರಣ: ಹಿಂದಾಲ್ಕೊ ಎಂದಾಗಷ್ಟೇ ರಾಜ್ಯದ ಅಭಿಪ್ರಾಯದ ನೆನಪು!

ಬಿರ್ಲಾ ಒಡೆತನದ ಹಿಂದಾಲ್ಕೊ ಕಂಪನಿಗೆ ತಲಬಿಲ-2 ಕಲ್ಲಿದ್ದಲು ಗಣಿಯನ್ನು ಕೊಡುವ ವಿಷಯದಲ್ಲಿ ಪಿತೂರಿ ನಡೆದಿದೆ ಎಂದು ಹಿಂದಾಲ್ಕೊ ಮಾಲಕ ಮತ್ತು ಆಗಿನ ಕಲ್ಲಿದ್ದಲು ಇಲಾಖೆ ಕಾರ್ಯದರ್ಶಿಯ ಮೇಲೆ ಸಿಬಿಐ ಆರೋಪದ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿಗಳ ಕಚೇರಿ ಸ್ಪಷ್ಟೀಕರಣ ನೀಡುತ್ತ ಆ ನೀಡಿಕೆ ಕ್ರಮ ಬದ್ಧವಾಗಿದ್ದು, ಇದರಲ್ಲಿ ಒಡಿಶಾ ಸರಕಾರದ ಅಭಿಪ್ರಾಯವನ್ನು ಪರಿಗಣಿಸಲಾಗಿತ್ತು ಎಂದು ಹೇಳಿಕೆ ನೀಡಿತ್ತು.

ಇದಕ್ಕೆ ಹಾಗೂ ಇಂತಹ ನೀಡಿಕೆಗಳಿಗೆ ಸಂಬಂಧಪಟ್ಟಂತೆ ಸರ್ವೋಚ್ಚ ನ್ಯಾಯಾಲಯ ಒಡಿಶಾ ಮತ್ತು ಇತರ ಆರು ರಾಜ್ಯಗಳಿಗೆ ನೋಟೀಸು ನೀಡಿತ್ತು. ಒಡಿಶಾ ಸರಕಾರ ಈ ನೋಟೀಸಿಗೆ ಸಲ್ಲಿಸಿರುವ ಉತ್ತರ ಯುಪಿಎ-2 ಸರಕಾರವನ್ನು ಇನ್ನಷ್ಟು ಪೇಚಿಗೆ ಸಿಕ್ಕಿಸಿದೆ.

ಕೇಂದ್ರ ಸರಕಾರ ರಾಜ್ಯಗಳ ಅಭಿಪ್ರಾಯಗಳನ್ನು ಬದಿಗೊತ್ತಿ ಏಕಪಕ್ಷೀಯವಾಗಿ ಕಲ್ಲಿದ್ದಲು ಬ್ಲಾಕುಗಳನ್ನು ನೀಡಿ ನಗ್ನವಾಗಿ ಮತ್ತು ಸತತವಾಗಿ ಈಗಿರುವ ಕಾನೂನು ಚೌಕಟ್ಟನ್ನು ಉಲ್ಲಂಘಿಸುತ್ತಾ ಬಂದಿದೆ ಎಂದು ಅದು ತನ್ನ ಉತ್ತರದಲ್ಲಿ ಹೇಳಿದೆ.

ಒಡಿಶಾ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಇಂತಹ ಹಲವು ಪತ್ರಗಳನ್ನು ಬರೆದಿದ್ದು ಕಲಿದ್ದಲು ಬ್ಲಾಕುಗಳನ್ನು ಸರ್ಕಾರೀ ಸ್ವಾಮ್ಯದ ಒಡಿಶಾ ಮೈನಿಂಗ್ ಕಾರ್ಪೊರೇಶನ್‌ಗೆ ನೀಡುವಂತೆ ಕೇಳಿದ್ದರು. ಆದರೆ ಅವನ್ನೆಲ್ಲ ಖಾಸಗಿಯವರಿಗೆ ಕೊಡಲಾಯಿತು. ಪತ್ರಾಪಾರಾ ಗಣಿಯನ್ನು ರಾಜ್ಯ ಸರಕಾರದ ಶಿಫಾರಸನ್ನೂ ಕೇಳದೆ ಖಾಸಗಿಯವರಿಗೆ ಕೊಡಲಾಗಿತ್ತು. ಆಗೆಲ್ಲ ಪ್ರಧಾನ ಮಂತ್ರಿಗಳೇ ಕಲ್ಲಿದ್ದಲು ಇಲಾಖೆಯನ್ನು ನೋಡಿಕೊಳ್ಳುತ್ತಿದ್ದರು.

ಅಲ್ಲದೆ ಕಲ್ಲಿದ್ದಲು ಬ್ಲಾಕುಗಳನ್ನು ಯಾವುದೇ ಯೋಜನೆಯಿಲ್ಲದೆ, ಬೇಕಾಬಿಟ್ಟಿಯಾಗಿ ನೀಡುತ್ತಿರುವುದು ಸಾಮಾಜಿಕ ಮತ್ತು ಪರಿಸರ ಸಮಸ್ಯೆಗಳನ್ನು ಉಂಟು ಮಾಡುತ್ತಿದ್ದು ಅವನ್ನು ರಾಜ್ಯ ಸರಕಾರವೇ ನಿಭಾಯಿಸಬೇಕಾಗಿದೆ

ಪುಟ 14 ಕ್ಕೆ

ಮಹಿಳೆಯರಿಗೆ ಅವಮಾನ: ಮತ್ತೊಬ್ಬ ಯುಪಿಎ-2 ಸಂಸದ ಈಗ ಸುದ್ದಿಯಲ್ಲಿ

ಯುಪಿಎ-2 ಸರಕಾರಕ್ಕೆ ಈ ಹಿಂದೆ ರಳದ ಒಬ್ಬ ಸಂಸದನ ಹೆಸರು ಮಹಿಳೆಯ ಲಿನ ಅತ್ಯಾಚಾರದ ಕೇಸಿನಲ್ಲಿ ಕೇಳಬಂದದ್ದು ಕಳ ಮುಜುಗರ ತಂದಿತ್ತು. ಅದನ್ನು ಗೋ ಕೊಡವಿಕೊಂಡ ಮೇಲೆ ಈಗ ಅದೇ ದ, ಅದೇ ರಾಜ್ಯದಿಂದ ಚುನಾಯಿತನಾದ ತ್ತೊಬ್ಬ ಸಂಸದನ ಅಸಭ್ಯ ವರ್ತನೆಯಿಂದ ಣಚಿಕೊಳ್ಳುವ ಪ್ರಯತ್ನ ಮಾಡಬೇಕಾಗಿ ಂದಿದೆ. ಆದರೆ ಈ ಬಾರಿ ನುಣುಚಿಕೊಳ್ಳುವ ಯತ್ನ ಇನ್ನಷ್ಟು ತ್ರಾಸದಾಯಕವಾಗಿದೆ. ಏಕೆ- ದು ಹಾಡುಹಗಲೇ ಸಾರ್ವಜನಿಕವಾಗಿ ರ್ಶನಗೊಂಡ ಹೀನ ವರ್ತನೆ.

ಕೊಲ್ಲಂನಲ್ಲಿ ಪ್ರತಿವರ್ಷ ನಡೆಯುವ ಷ್ಟ್ರಪತಿ ದೋಣಿ ಸ್ಪರ್ಧೆಯ ಉದ್ಘಾಟನೆಗೆ ಜ್ಯದ ಪ್ರಖ್ಯಾತ ಚಲಚ್ಚಿತ್ರ ಕಲಾವಿದೆ ತಾ ಮೆನನ್ ಅವರನ್ನು ಕರೆಯಲಾಗಿತ್ತು. ವರ್ಷದ ಈ ಯುಪಿಎ ಸಂಸದ ಆ ಮಾರಂಭದ ಪ್ರಮುಖ ಸಂಘಟಕನಾಗಿ ದೆದಿದ್ದ ಅವಕಾಶವನ್ನು ದುರುಪಯೋಗ ಡಿಸಿಕೊಂಡು ಆಕೆಯೊಡನೆ ಅಸಭ್ಯವಾಗಿ ರ್ತಿಸಿದ್ದನ್ನು ಇಡೀ ದೇಶವೇ ಕಂಡಿದೆ. ಆಕೆ ಕ್ಕಿಂತ ಬೇಸರಗೊಂಡು ಸಮಾರಂಭವನ್ನು ರ್ಣವಾಗಿ ವೀಕ್ಷಿಸದೇ ಎದ್ದು ಹೋಗಬೇಕಾಗಿ ಂದದ್ದು ರಾಜ್ಯಾದ್ಯಂತ ಸುದ್ದಿಯಾದಾಗ ಲೀಸರು ಆಕೆಯ ಹೇಳಿಕೆಯನ್ನು ಖಲಿಸಿಕೊಳ್ಳಬೇಕಾಗಿ ಬಂತು.

ಇದು ಇಲ್ಲಿಗೇ ನಿಲ್ಲಲಿಲ್ಲ. ಆ ಪಕ್ಷದ ರ್ಯಕರ್ತರು ತಮ್ಮ ಮುಖಂಡರ ಅಸಭ್ಯ ರ್ತನೆಯನ್ನು ಖಂಡಿಸುವ ಬದಲು, ಕನಿಷ್ಠ ಸದವಾದರೂ ಪ್ರಕಪಡಿಸುವ ಬದಲು ಎರಡು ಬಾರಿ ಪ್ರಶಸ್ತಿ ಗಳಿಸಿದ ಈ ಕಲಾವಿದೆಯ ಪ್ರತಿಕೃತಿ ದಹನಕ್ಕೆ ಮುಂದಾದರು. ಆ ಪಕ್ಷದ ಕೆಲವು ಮುಖಂಡರು ಕೂಡ ಆಕೆಯ ಚಾರಿತ್ರ್ಯವಧೆಗೂ ಹೇಸಲಿಲ್ಲ. ಈ ನಡುವೆ ಆ ಸಂಸದ 'ಕ್ಷಮೆ' ಕೇಳಿದರು, ತಮ್ಮ ಅಸಭ್ಯ ವರ್ತನೆಗೆ ಅಲ್ಲ, ಸಮಾರಂಭದ ವೇಳೆ ಆ ಕಲಾವಿದೆಗೆ "ಏನಾದರೂ ಬೇಸರವಾಗಿದ್ದರೆ, ಅದಕ್ಕೆ ಆ ಸಮಾರಂಭದ ಸಂಘಟಕನಾಗಿ" ಕೇಳಿದ 'ಕ್ಷಮೆ'!


ಈ 'ಸಾರ್ವಜನಿಕ ಕ್ಷಮೆ'ಯ ನಂತರ ಆಕೆ ತಾನು ಕಾನೂನು ಕ್ರಮಕ್ಕೆ ಮುಂದಾಗುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಇದು ಕೇರಳದ ಆಳುವ ಪಕ್ಷದ ತಂದ ಒತ್ತಡದಿಂದಲೇ ಎಂಬುದು ಸ್ಪಷ್ಟ. ಇದು ಅನೈತಿಕ ಎಂದು ಖಂಡಿಸಿರುವ ಡಿವೈಎಫ್‌ಐ ಕೇಂದ್ರೀಯ ಕಾರ್ಯಕಾರಿ ಸಮಿತಿ, ತನಿಖೆಯ ಮೇಲೆ ಪ್ರಭಾವ ಬೀರುವ ತಂತ್ರ ಎಂದು ಟೀಕಿಸಿದೆ. ಏಕೆಂದರೆ ಈ ಸಂಸದನ ಅಸಭ್ಯ ವರ್ತನೆಯನ್ನು ಸಮರ್ಥಿಸಿಕೊಳ್ಳಲು ಬೇರೆ ಯಾವ ರೀತಿಯಲ್ಲೂ ಸಾಧ್ಯವಾಗದಂತಹ ಇಕ್ಕಟ್ಟಿನಲ್ಲಿ ಯುಪಿಎ ಸಿಲುಕಿದೆ.

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವರೆಗೆ ಯುಪಿಎ ಅಥವ ಕಾಂಗ್ರೆಸ್‌ನ ಕೇಂದ್ರ ಮುಖಂಡರು, ಕೇರಳ ಸರ್ಕಾರ ಕೂಡ ಈ ಬಗ್ಗೆ ತುಟಿಪಿಟಕ್ಕೆಂದಿಲ್ಲ. ಕಾಂಗ್ರೆಸ್ ವಕ್ತಾರರು ಆಕೆಯೇ 'ಕ್ಷಮೆ'ಯ ಹಿನ್ನೆಲೆಯಲ್ಲಿ ಕಾನೂನು ಕ್ರಮ ಕೈಗೊಳ್ಳುವುದಿಲ್ಲ ಎಂದ ಮೇಲೆ ಇನ್ನೇನಿದೆ ಎಂದು ಹೇಳಿದ್ದಾರೆ. ಆದರೆ ಇದಕ್ಕೆ ಅವರು ದೇಶಾದ್ಯಂತ ತೀವ್ರ ಆಕ್ರೋಶವನ್ನೂ ಎದುರಿಸಬೇಕಾಗಿ ಬಂದಿದೆ.

ಸ್ವತಃ ಒಬ್ಬ ಮಹಿಳೆಯನ್ನೇ ಅಧ್ಯಕ್ಷರಾಗಿ ಹೊಂದಿರುವ ಆ ಪಕ್ಷ ಮತ್ತು ಅದರ ನೇತೃತ್ವದಲ್ಲಿರುವ ಯುಪಿಎ-2 ಸರಕಾರ ಲೈಂಗಿಕ ಕಿರುಕುಳದ ಬಗ್ಗೆ ಎಂತಹ ನಿಲುವು ಹೊಂದಿದೆ ಎಂಬುದು ನಿರ್ಭಯ ಕಾನೂನು ತರುವ ಸಂದರ್ಭದಲ್ಲಿಯೇ ಸಾಕಷ್ಟು ಸ್ಪಷ್ಟಗೊಂಡಿತ್ತು. ಆಗ ನ್ಯಾಯಮೂರ್ತಿ ವರ್ಮಾ ಸಮಿತಿಯ ಈ ಕುರಿತ ಬಲವಾದ ಶಿಫಾರಸುಗಳನ್ನು ದುರ್ಬಲಗೊಳಿಸಲಾಯಿತು, ಅಥವ ಸಂಪೂರ್ಣವಾಗಿ ಕೈಬಿಡಲಾಯಿತು. ಮಹಿಳಾ ಸಂಘಟನೆಗಳು ಆಗ್ರಹಿಸಿದರೂ ಅವನ್ನು ಕಾನೂನಿನಲ್ಲಿ ಸೇರಿಸಲೇ ಇಲ್ಲ.

ಅದೀಗ ತನ್ನ ನಿಲುವನ್ನು ಪ್ರಕಟಿಸಬೇಕಾಗಿದೆ, ಮತ್ತು ಕಳಂಕಿತ ಶಾಸಕರನ್ನು ಕುರಿತ ಸುಗ್ರೀವಾಜ್ಞೆಯ ಮೇಲೆ ಒಳ್ಳೆಯ ನಾಟಕ ವಾಡಿದ ಆ ಪಕ್ಷದ ಉಪಾಧ್ಯಕ್ಷರೂ ತಮ್ಮ ನಿಲುವನ್ನು ಪ್ರಕಟಿಸಬೇಕಾಗಿದೆ ಎಂದು ಡಿವೈಎಫ್‌ಐ ಕೇಂದ್ರೀಯ ಕಾರ್ಯಕಾರಿ ಸಮಿತಿ ಹೇಳಿದೆ.

ಲೈಂಗಿಕ ಕಿರುಕುಳ ಎಸಗಿದವರು ಕ್ಷಮೆ ಕೇಳಿದ್ದಾರೆ, ಮತ್ತು ಕಿರುಕುಳಕ್ಕೆ ಒಳಗಾದವರು ಕಾನೂನು ಕ್ರಮಕ್ಕೆ ಮುಂದಾಗುವುದಿಲ್ಲ ಎಂದ ಮಾತ್ರಕ್ಕೆ ಈ ಘಟನೆ ನಡೆದೇ ಇಲ್ಲ ಎಂದಾಗುವುದಿಲ್ಲ ಕೇರಳ ಸರಕಾರ ಆ ಕಲಾವಿದೆಯ ಚಾರಿತ್ರ್ಯ ವಧೆಗೆ ಪ್ರಯತ್ನಿಸಿದ ಕಾಂಗ್ರೆಸ್ ಮುಖಂಡರೆಲ್ಲರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಡಿವೈಎಫ್‌ಐ ಆಗ್ರಹಿಸಿದೆ. ಇದು ಮಹಿಳಾ ಸಮಾನತೆಯಲ್ಲಿ ನಂಬಿಕೆ ಇರುವ ದೇಶದ ಎಲ್ಲ ಪ್ರಜಾಪ್ರಭುತ್ವವಾದಿಗಳ ಆಗ್ರಹ ಕೂಡ.



'ರಾಕೆಟ್ ದೈವ' ತಿರುಪತಿ ತಿಮ್ಮಪ್ಪ ಮತ್ತು ರಾಕೆಟ್ ಉಡಾವಣೆ

ಜಯ

ರಾಕೆಟ್ ಅನ್ನು ಹೋಲುವಂತಹ ಕಿರೀಟ ತೊಡುವ ತಿರುಪತಿ ತಿಮ್ಮಪ್ಪ ನಮ್ಮ ದೇಶದ 'ರಾಕೆಟ್ ದೈವ' ಎಂದೇ ಹಲವರು ನಂಬುತ್ತಾರೆ! ಅವರಲ್ಲಿ ನಮ್ಮ ದೇಶದ ಬಾಹ್ಯಾಕಾಶ ಸಂಸ್ಥೆ (ಇಸ್ರೋ)ಯ ಮುಖ್ಯಸ್ಥ ಡಾ: ರಾಧಾಕೃಷ್ಣನ್ ಕೂಡ ಒಬ್ಬರು.

ಇಸ್ರೋ ಸಂಸ್ಥೆಯು ಅಂತರಿಕ್ಷಕ್ಕೆ ರಾಕೆಟನ್ನು ಹಾರಿಬಿಡುವ ಮುನ್ನ ಸಂಸ್ಥೆಯ ಮುಖ್ಯಸ್ಥರು ಮತ್ತು ಕೆಲ ವಿಜ್ಞಾನಿಗಳು ಸಾಮಾನ್ಯವಾಗಿ ಪೂಜೆ ಮಾಡುತ್ತಾರೆ ಎಂದು ಹೇಳಲಾಗುತ್ತದೆ. ಆದರೆ ಹೀಗೆ ಪೂಜೆ ಮಾಡಿದ ನಂತರವೂ ವೈಫಲ್ಯಗೊಂಡು ಆಗಸದಿಂದ ನೆಗೆದು ಬಿದ್ದು ಬೂದಿಯಾದ ಉಪಗ್ರಹಗಳ ಪಟ್ಟಿಯನ್ನು ಯಾರೂ ಲೆಕ್ಕ ಇಡುವುದಿಲ್ಲ. ಇದುವರೆಗೂ ಭಾರತವು ಒಟ್ಟು 39 ಉಪಗ್ರಹಗಳನ್ನು ಹಾರಿಬಿಟ್ಟಿದ್ದು, ಇವುಗಳಲ್ಲಿ ಉದ್ದೇಶಿತ ಕಕ್ಷೆ ತಲುಪಿರುವುದು 27 ಮಾತ್ರ.

ವಿಜ್ಞಾನಿಗಳು ಮತ್ತು ನಂಬಿಕೆ

ಪ್ರಕೃತಿಯನ್ನು ಅರ್ಥಮಾಡಿಕೊಳ್ಳುವ ವೈಜ್ಞಾನಿಕವಾದ ಭೌತವಾದಿ ಸಮಗ್ರ ದೃಷ್ಟಿಕೋನವು ವಿಜ್ಞಾನಿಗಳಿಗೆ ಇರಬೇಕು ಎಂದು ಯಾರಾದರೂ ನಿರೀಕ್ಷಿಸುವುದು ಸರಿಯಾಗಿಯೇ ಇದೆ. ಅದರೆ ಎಷ್ಟೋ ಸಾರಿ ವಾಸ್ತವ ಹಾಗಿರುವುದಿಲ್ಲ. ವಿಜ್ಞಾನಿಗಳಲ್ಲಿ ವಿಜ್ಞಾನದ ಕೆಲವೊಂದು ಶಾಖೆಗಳಲ್ಲಿ ಮಾತ್ರ ಸ್ವಲ್ಪ ಆಳವಾದ ಅಧ್ಯಯನ ನಡೆಸಿದವರು, 'ಸಂಶೋಧನೆ' ನಡೆಸಿದವರು ಕೂಡ ಇರುತ್ತಾರೆ. ಪ್ರಕೃತಿಯ ಭೌತಿಕ ಪ್ರಯೋಗಗಳು ಮತ್ತು ಧಾರ್ಮಿಕ ಆಚರಣೆಗಳ ನಡುವೆ ಸದಾ ಗೆರೆ ಹಾಕಿಕೊಂಡೇ ಇರುತ್ತಾರೆ. ಇದಕ್ಕೆ ನಮ್ಮ ಶಿಕ್ಷಣ ಪದ್ಧತಿ ಪುಷ್ಟಿ ನೀಡುತ್ತಿದೆ.

ಅಂಶಿಕವಾಗಿ ಮಾತ್ರ ವಿಜ್ಞಾನದ ತಿಳುವಳಿಕೆ ಪಡೆದ ಇಂಥವರು ಖಾಸಗಿಯಾಗಿ ಪೂಜೆ ಹವನ ಇತ್ಯಾದಿ ಮಾಡಿಕೊಂಡರೆ ಅದನ್ನು ಯಾರೂ ಗಂಭೀರವಾಗಿ ಪರಿಗಣಿಸಲಾರರು. ಆದರೆ ತಮ್ಮ ನಂಬಿಕೆ, ಆಚರಣೆಗಳನ್ನು ಸಾರ್ವಜನಿಕ ವಲಯಕ್ಕೆ ತರುವ ಧಾರ್ಮಿಕ ನಡವಳಿಕೆಯಿಂದ 'ಬಾಹ್ಯಾಕಾಶ ವಿಜ್ಞಾನಿಗಳೇ ತಿರುಪತಿ ತಿಮ್ಮಪ್ಪನಿಗೆ ಶರಣಾದ ಮೇಲೆ ಇನ್ನು ಸಾಮಾನ್ಯರಾದ ನಮ್ಮದೇನು ಮಹಾ' ಎಂಬ ಅಭಿಪ್ರಾಯ ಜನರಲ್ಲಿ ಮೂಡಿ ಅವರು ಇನ್ನಷ್ಟು ಮೂಢನಂಬಿಕೆಗಳ ದಾಸರಾಗುವಂತೆ ಮಾಡುವ ಅಪಾಯ ಇದ್ದದ್ದೇ.

ಮಂತ್ರಕ್ಕೆ ಮಾವಿನಕಾಯಿ..

ಪೂಜೆ, ಪ್ರಾರ್ಥನೆ, ಹೋಮ, ಹವನ, ಯಜ್ಞಗಳನ್ನು ನೆರವೇರಿಸುವುದು ಫಲ ನೀಡುವಂತಿದ್ದರೆ, ಯಾವ ಉಪಗ್ರಹಗಳೂ ವೈಫಲ್ಯ ಕಾಣುತ್ತಿರಲಿಲ್ಲ. ಉಪಗ್ರಹಗಳನ್ನು ಹೊತ್ತೊಯ್ಯುವ ರಾಕೆಟ್‌ಗಳನ್ನು ಹಾರಿಸುವ ಮುನ್ನ ಈ ರಾಕೆಟ್ ಮತ್ತು ಉಪಗ್ರಹಗಳು ವೈಜ್ಞಾನಿಕ ಮಾನದಂಡಗಳಿಗೆ ಪೂರಕವಾಗಿವೆಯೇ ಎಂಬುದು ಖಾತರಿಯಾಗಬೇಕು. ಅಲ್ಲದೆ, ಹಾರಿಬಿಡುವ ಮುನ್ನ ಯಾವುದೇ ಬಿರುಗಾಳಿ, ಚಂಡಮಾರುತ, ಇತ್ಯಾದಿ ಹವಾಮಾನ ವೈಪರೀತ್ಯಗಳು ಇರಬಾರದು ಎಂಬ ಅಂಶಗಳು ಮುಖ್ಯ. ಅಲ್ಲದೆ, ಭೂಮಿಯ ಗುರುತ್ವಶಕ್ತಿ ಯನ್ನು ಮೀರಿ ಹೋಗುವ ವೇಗದ ವಸ್ತು ಮಾತ್ರವೇ ಕೆಳಗೆ ಬೀಳದೆ ಮೇಲೇರುವ ಶಕ್ತಿ ಹೊಂದಿರುತ್ತದೆ. ಹಾಗಾಗಿ ರಾಕೆಟ್‌ನ ವೇಗ ಸೆಕೆಂಡಿಗೆ 11.2 ಕಿ.ಮೀ ಇದ್ದರೆ ಮಾತ್ರ ಭೂಮಿ ಬಿಟ್ಟು ಅಂತರಿಕ್ಷ ಸೇರಲು ಸಾ ಧ್ಯ. ಇಲ್ಲದಿದ್ದಲ್ಲಿ ಯಾವ ದೇವರೂ ಯಾವ ಪ್ರಾರ್ಥನೆ, ಹೋಮಗಳೂ ಕೂಡ ಅದನ್ನು ಮೇಲೆ ಹೊತ್ತೊಯ್ಯಲಾರವು.

ಪೂಜೆ ನಂತರವೂ ವಿಘ್ನಗಳು!

ತೀರಾ ಇತ್ತೀಚೆಗೆ, ಅಂದರೆ, ಆಗಸ್ಟ್ 19 ರಂದು ಜಿಎಸ್‌ಎಲ್‌ವಿ-ಡಿ5 ಎಂಬ ಹೆಸರಿನ ರಾಕೆಟ್‌ನ್ನು ಶ್ರೀ ಹರಿಕೋಟಾ ಉಡಾವಣಾ ಕೇಂದ್ರದಿಂದ ಅಂತರಿಕ್ಷಕ್ಕೆ ಹಾರಿಬಿಡಲು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಹಿಂದಿನ ದಿನ ಇಸ್ರೋ ಮುಖ್ಯಸ್ಥರು ತಿರುಪತಿ ತಿಮ್ಮಪ್ಪನ ದರ್ಶನವನ್ನೂ ಕೂಡ ಮಾಡಿ, ರಾಕೆಟ್ ಮಾದರಿಯೊಂದನ್ನು ಅರ್ಪಿಸಿ ಬಂದಿದ್ದು ಎಲ್ಲೆಡೆ ಚಿತ್ರ ಸಮೇತ ವರದಿಯಾಯಿತು. ಈ ರಾಕೆಟ್, ಜಿಸ್ಯಾಟ್-14 ಎಂಬ ಉಪಗ್ರಹವನ್ನು ಹೊತ್ತೊಯ್ಯಬೇಕಿತ್ತು. ಈ ಉಪಗ್ರಹದ ಮುಖ್ಯ ಕಾರ್ಯಭಾರ ಏನೆಂದರೆ ದೂರದರ್ಶನಕ್ಕೆ ಸಿಗ್ನಲ್ ಬಿತ್ತರಿಸಲು ಮತ್ತು ದೂರಸಂಪರ್ಕ ಸಂವಹನಕ್ಕೆ ಸಹಕಾರಿಯಾಗುವುದು. ರಾಕೆಟ್ ತೂಕ 414 ಟನ್, ಎತ್ತರ 49 ಮೀಟರ್ ಇದ್ದರೆ, ಉಪಗ್ರಹದ ತೂಕ ಸುಮಾರು 2 ಟನ್ ಇತ್ತು. ಜಿಎಸ್‌ಎಲ್‌ವಿ ರಾಕೆಟ್ 3 ಹಂತದ ಇಂಜಿನ್ ಹೊಂದಿದೆ. ಮೊದಲ ಹಂತದಲ್ಲಿ ಅದು ಘನ ಇಂಧನವನ್ನು ಬಳಸಿದರೆ, ಎರಡನೇ ಹಂತದಲ್ಲಿ ದ್ರವ ಇಂಧನ ಮತ್ತು ಕೊನೆಯ ಹಂತದಲ್ಲಿ ಕ್ರಯೋಜನಿಕ್ ಇಂಧನ ಬಳಸುತ್ತದೆ. ಇನ್ನೇನು ರಾಕೆಟ್ ಮೇಲೆ ಉಪಗ್ರಹವನ್ನು ಕೂರಿಸಿ ಹಾರಿಸಿಬಿಡುವ ಎನ್ನುವ ಒಂದೂಕಾಲು ಘಂಟೆ ಮುನ್ನವಷ್ಟೆ ದೊಡ್ಡ ದೋಷವೊಂದು ಕಣ್ಣಿಗೆ ಬಿತ್ತು. ರಾಕೆಟ್‌ನ ಎರಡನೇ ಹಂತದ ದ್ರವ ಇಂಧನ ಟ್ಯಾಂಕ್‌ನಿಂದ ಸೋರಿಕೆಯಾಗುತ್ತಿತ್ತು. ಇದನ್ನು ಕಡೆಗಣಿಸಿ 'ರಾಕೆಟ್ ದೈವ'ವಾದ ತಿಮ್ಮಪ್ಪನ ಮೇಲೆ ಭಾರ ಹಾಕಿ ಉಡಾಯಿಸಿದಲ್ಲಿ ಇದೂ ಕೂಡ ನೆಗೆದು ಬೂದಿಯಾಗುವುದರಲ್ಲಿ ವಿಜ್ಞಾನಿಗಳಿಗೆ ಸಂದೇಹವೇ ಇರಲಿಲ್ಲ. ಉಡಾವಣೆಯನ್ನು ಕೈಬಿಟ್ಟು ಅದರ ಸೋರಿಕೆ ನಿಲ್ಲಿಸಲು ರಿಪೇರಿ ಆರಂಭಿಸಿದರು. ಇದೀಗ ಉಡಾವಣೆ ದಿನಾಂಕವನ್ನು ಡಿಸೆಂಬರ್ ತಿಂಗಳಿಗೆ ಮುಂದೂಡಿದ್ದಾರೆ.

ಪೂಜೆಯ ನಂತರವೂ ಉಡಾವಣೆ ಮುಂದೂಡಲ್ಪಟ್ಟ ಮಂಗಳಯಾನ್:

ಅಕ್ಟೋಬರ್ 28 ರಂದು ಮಂಗಳ ಗ್ರಹಕ್ಕೆ ಹಾರಿಬಿಡಬೇಕಾಗಿದ್ದ 'ಮಂಗಳಯಾನ್' ಎಂಬ ಹೆಸರಿನ ಉಪಗ್ರಹದ ಉಡಾವಣಾ ದಿನಾಂಕವನ್ನು ಕೆಟ್ಟ ಹವಾಮಾನ ಪರಿಸ್ಥಿತಿಯಿಂದಾಗಿ ನವೆಂಬರ್ 5ಕ್ಕೆ ಮುಂದೂಡಬೇಕಾಯಿತು. ಮಂಗಳ ಗ್ರಹಕ್ಕೆ ತೆರಳುವ ಉಪಗ್ರಹವನ್ನು ಹೊತ್ತೊಯ್ಯುವ ರಾಕೆಟ್ ಭೂಮಿಯನ್ನು ಸುತ್ತು ಹಾಕಿ ಪೆಸಿಫಿಕ್ ಸಾಗರದಾಚೆ ಸಾಗಿ ಹೋಗುತ್ತದೆ. ಈ ಪ್ರದೇಶದಲ್ಲಿ ರಾಕೆಟ್ ಸಾಗುವಾಗ 20 ನಿಮಿಷಗಳ ಕಾಲ ಅದು 'ಗ್ರೌಂಡ್ ಸ್ಟೇಷನ್'ನ ಸಂಪರ್ಕಕ್ಕೆ ಸಿಗುವುದಿಲ್ಲ. ಉಪಗ್ರಹ ಸರಿಯಾಗಿ ಹೋಗುತ್ತಿದೆಯೆಂದು ಖಾತರಿ ಪಡಿಸಿಕೊಳ್ಳಲು ಪೆಸಿಫಿಕ್ ಸಾಗರದ ಬಳಿಯ ಫಿಜಿ ಎಂಬ ದೇಶದ ಹತ್ತಿರಕ್ಕೆ ನಳಂದ ಮತ್ತು ಯಮುನ ಎಂಬ ... ಹಡಗುಗಳನ್ನು ಇಸ್ರೋ ಕಳುಹಿಸಬೇಕಾ... ಸಾಗರದೊಳಗಿನ ಅತೀವ ಹವಾ... ಏರುಪೇರು, ಅತಿವೇಗದ ಮಾರುತ... ಇತ್ಯಾದಿಯಿಂದಾಗಿ ಹಡಗುಗ... ನಿಗದಿತ ಸ್ಥಳಕ್ಕೆ ಕಳುಹಿಸಲು ಸಾಧ್ಯವ... ಕಾರಣ ಉಡಾವಣೆಯ ದಿನಾಂಕ... ಮುಂದೂಡಲಾಯಿತು. ಇಷ್ಟೆಲ್ಲ ವೈಜ... ಸಿದ್ಧತೆ ಕೈಬಿಟ್ಟು ತಿರುಪತಿ ತಿಮ... ಮೇಲೆ ಭಾರ ಹಾಕಿ ಉಡಾವಣೆ ಮಾ... ಸಾಧ್ಯವೇ?

ನಾಸಾ ವಿಜ್ಞಾನಿಗಳಲ್ಲೂ...

ಅಮೇರಿಕಾದ ಬಾಹ್ಯಾಕಾಶ ಸಂ... ಕೆಲ ವಿಜ್ಞಾನಿಗಳು ಕೂಡ ಇಂತಹ ... ಮೂಢನಂಬಿಕೆ ಇಟ್ಟುಕೊಂಡಿದ್ದಾರೆ. ... ನಮ್ಮ ವಿಜ್ಞಾನಿಗಳು ಮಂಗಳ ಗ್ರಹಕ್ಕೆ ಉಪ... ಕಳುಹಿಸುವಾಗ ಅಮೇರಿಕಾದ ... ವಿಜ್ಞಾನಿಗಳು ಶುಭ ಹಾರೈಸಿ ಕಡ್ಲೆಕ... ಕಳುಹಿಸಿಕೊಟ್ಟಿದ್ದರು! ಇದೇನಪ್ಪ ... ಹಾರೈಸಿ ತಾಯತ ಅಥವಾ ನಿಂಬೆಕ... ಕಳುಹಿಸಿಕೊಡುವ ಬದಲು ಕಡ್ಲೆಕ... ಕಳುಹಿಸಿಕೊಟ್ಟಿದ್ದಾರೆ, ಅಂತೀರಾ? 196... ಆ ವಿಜ್ಞಾನಿಗಳು ಉಪಗ್ರಹ ಹಾರಿಬಿ... ತುಂಬಾ ಟೆನ್ಷನ್ ಇತ್ತಂತೆ. ಅಷ್ಟರಲ್ಲಾ... 6 ಉಪಗ್ರಹಗಳು ಉಡಾವಣೆಗೊ... ಹಾರಿ ಸೋತಿದ್ದವಂತೆ. ಏಳನೆಯ... ಹಾರಿಸುವಾಗ ಯಾರೋ ಒಬ್ಬ ವಿ... ಕಡ್ಲೆಕಾಯಿ ತಿನ್ನುತ್ತಾ ಕುಳಿತಿದ್ದನಂತೆ. ಏಳ... ಉಪಗ್ರಹ ಯಶಸ್ವಿಯಾಗಿ ಅಂತರಿ... ಕಕ್ಷೆಯನ್ನು ಸೇರಿತಂತೆ. ಅಂದಿನಿಂದ ... ಮುಂದೆ ಯಾವುದೇ ಉಪಗ್ರಹ ಉಡಾ... ಸಮಯದಲ್ಲಿ ಎಲ್ಲರಿಗೂ ಕಡ್ಲೆಕ... ವಿತರಿಸುವುದು ಸಂಪ್ರದಾಯ... ಬೆಳೆದುಬಂದಿದೆ!

ಯುಪಿಎ ದರ್ಬಾರ್......

ಪುಟ 13 ರಿಂದ

ಎಂಬುದನ್ನೂ ಮುಖ್ಯಂತ್ರಿಗಳು ಪ್ರ... ಮಂತ್ರಿಗಳ ಗಮನಕ್ಕೆ ತಂದಿದ್ದರಂತೆ.

ಆಗೆಲ್ಲಾ ಎಂದೂ ರಾಜ್ಯಸರಕಾ... ಅಭಿಪ್ರಾಯ ಯುಪಿಎ-2 ಸ 'ರ... ಕ್ಕೆ ನಿರ್ಣಾಯಕ ಎಂದನಿಸಿರಲಿಲ್ಲ. ... ರ ಪರಿಶೀಲನಾ ಸಮಿತಿ ಹಿಂದಾಲ... ಕೇಳಿಕೆಯನ್ನು ಬದಿಗೊತ್ತಿ ಸಾರ್ವ... ವಲಯದ ಕಂಪನಿಗೆ ಕೊಟ್ಟಿದ್ದ ಕಲ್ಲಿ... ಬ್ಲಾಕನ್ನು, ಪರಿಶೀಲನಾ ಸಮಿತಿಯ ಶಿಫಾರ... ಬದಿಗೊತ್ತಿ ಅದೇ ಹಿಂದಾಲ್ಕೊಗೆ ನೀಡು... ಮಾತ್ರ ರಾಜ್ಯಸರಕಾರದ ಶಿಫಾರಸು, ... ಅಭಿಪ್ರಾಯ ಅದಕ್ಕೆ ನಿರ್ಣಾಯಕವಾಗಿ... ಕಂಡಿತು ಎಂಬ ಪ್ರಶ್ನೆ ಈಗ ಎದ್ದಿದೆ.

ಈಗ ಸಿಬಿಐ ಕೂಡ ಪರಿಶೀ... ಸಮಿತಿಯ ಶಿಫಾರಸಿಗೆ ವ್ಯತಿರಿಕ್ತ... ತಲಬೀರ-2 ಬ್ಲಾಕನ್ನು ಹಿಂದಾಲ... ವಹಿಸುವ ಶಿಫಾರಸನ್ನು ಬೆಂಬಲಿಸಲು ... ತರ್ಕಗಳೇನು ಎಂದು ಒಡಿಶಾ ಸರಕಾರ... ವಿವರಣೆ ಕೇಳಲಿದೆಯಂತೆ.

ಈ ನಡುವೆ ಪ್ರಧಾನ ಮಂತ್ರಿಗಳ ... ಮತ್ತು ಯುಪಿಎ-2 ಸರಕಾರದ ವ... ಟೀಕೆ-ಟಿಪ್ಪಣಿಗಳ ಹಿನ್ನೆಲೆಯಲ್ಲಿ ... ಈ ತನಿಖೆಯನ್ನು ಮುಚ್ಚಬಹದು ... ಊಹಾಪೋಹವೂ ಹರಡಿದೆಯಂತೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

...ನಾವಣಾ ಅಭಿಪ್ರಾಯ.....

...7 ರಿಂದ

...ವ ಅವಕಾಶಗಳು ಅಪಾರ. ಹೀಗಾಗಿ, ...ತದ ಸಂದರ್ಭದಲ್ಲಿ ಒಂದು ನಿರ್ದಿಷ್ಟ ... ಮೇಲೆ 'ತರ್ಕಬದ್ಧ ಮಿತಿ'ಗಳನ್ನು ಬಹಳ ...ರವಾಗಿ ಪರಿಗಣಿಸಬೇಕಾಗುತ್ತದೆ.

...ತಹ ಸನ್ನಿವೇಶಗಳಲ್ಲಿ, ಅಭಿಪ್ರಾಯ ...ಹಗಳ ಮೇಲೆ ಸಾರಾಸಗಟು ನಿಷೇಧ ...ರದಾದರೂ, ಇವನ್ನು ಒಂದು ತರ್ಕಬದ್ಧ ...ಯಲ್ಲಿ, ಉದಾಹರಣೆಗೆ, ಚುನಾವಣೆಯ ...ನಾತ್ಮಕ ಅಧಿಸೂಚನೆಯಿಂದ ...ದಾನದ ಪೂರ್ಣಗೊಳ್ಳುವವರೆಗೆ ...ಸಬಾರದು ಎಂದು ಸೂಚಿಸುವುದು ...ಯುತವಾಗುತ್ತದೆ. ಈ ಅವಧಿಯನ್ನು ...ನಾವಣಾ ಆಯೋಗ ಗಂಭೀರ ...ಲೋಚನೆಗಳು ಮತ್ತು ಚರ್ಚೆಗಳ ನಂತರ ...ಪಿಸಬೇಕು ಮತ್ತು ಪ್ರಕಟಿಸಬೇಕು.

...ದಾರರು ಹುಸಿಗೊಳಿಸಿದ್ದಾರೆ

...ಂತಿಮವಾಗಿ, ಈ ಹಿಂದೆ ಸುಮಾರಾಗಿ ಅಭಿಪ್ರಾಯ ಸಂಗ್ರಹಗಳನ್ನು ಮತದಾರರು ...ಗೊಳಿಸಿದ್ದಾರೆ ಎಂಬ ಸಂಗತಿಯನ್ನು ...ಬೇಕು. ಇದು ಅವೈಜ್ಞಾನಿಕ ವಿಧಾನಗಳನ್ನು ಅನುಸರಿಸಿದ್ದರಿಂದಾಗಿ ಇರಬಹುದು, ಅಥವ ಒಂದು ಅತೀ ಸಂಕುಚಿತ ಸರ್ವೆಯು ನೆಲೆಯಲ್ಲಿ ನಡೆಸಿದ್ದರಿಂದಾಗಿ ಇರಬಹುದು. ಈ ಮೂಲಕ ಭಾರತೀಯ ಮತದಾರರ ಮಾನಸಿಕತೆಯ ಮೇಲೆ ತೀರ್ಪಿಗೆ ಇಳಿಯಲಾಗದು. ಇದು ಬಹಳ ಅಪಾಯಕಾರಿ.

ಭಾರತದಲ್ಲಿ ಚುನಾವಣಾಶಾಸ್ತ್ರ ಮತ್ತು ಅಭಿಪ್ರಾಯ ಸಂಗ್ರಹಗಳು ಆರಂಭವಾದಾಗ ಅನನ್ಯ ವ್ಯಂಗ್ಯಚಿತ್ರಕಾರರಾದ ಆರ್. ಕೆ.ಲಕ್ಷ್ಮಣ್ ಬಿಡಿಸಿದ್ದ ಒಂದು ವ್ಯಂಗ್ಯಚಿತ್ರವನ್ನು ನೆನಪಿಸಿಕೊಳ್ಳಬಹುದು. ಅದರಲ್ಲಿ ಒಬ್ಬ ಅದೃಷ್ಟಹೀನ ಗಂಡ ಮನೆಗೆ ಬಂದು ಹೆಂಡತಿಗೆ ಹೇಳುತ್ತಾನೆ– ನಾನು ಮತಪತ್ರದಲ್ಲಿ ತಪ್ಪು ಅಂಕಣದಲ್ಲಿ ಮುದ್ರೆ ಒತ್ತಿದೆ. ಇದರಿಂದ ಹೆಂಡತಿ ಸಿಟ್ಟಿಗೆದ್ದುದನ್ನು ಕಂಡು ತಕ್ಷಣವೇ ಸೇರಿಸುತ್ತಾನೆ–ಏನೂ ಚಿಂತೆ ಮಾಡ್ಬೇಡ, ಈ ತಪ್ಪನ್ನು ಎಕ್ಸಿಟ್ ಪೋಲಿಗೆ ಮುದ್ರೆ ಒತ್ತುವಾಗ ಸರಿಪಡಿಸಿದ್ದೇನೆ! ಇದೀಗ ಭಾರತೀಯ ಸಂದರ್ಭದಲ್ಲಿ ಅಭಿಪ್ರಾಯ ಸಂಗ್ರಹಗಳ, ಮತಗಟ್ಟೆ ಅಭಿಪ್ರಾಯ ಸಂಗ್ರಹಗಳ, ಅಂದರೆ ಎಕ್ಸಿಟ್ ಪೋಲ್‌ಗಳ ನಿಜಸ್ಥಿತಿ. ●

...ಜರಾತ್ ಅಭಿವೃದ್ಧಿ......

...09 ರಿಂದ

...ಗಲ್ಲ. ರೈತರು, ಭೂ ಹೀನರು, ...ಸಂಖ್ಯಾತರು, ಕಾರ್ಮಿಕರು ಮತ್ತು ...ಣ ಜನತೆ ನರಳುತ್ತಿದ್ದಾರೆ. ಆದ–...ಆತ ತನ್ನ ಛಾಪು ಮೂಡಿಸಲು, ತನ್ನ ...ನ್ನು ಪ್ರಚುರಪಡಿಸಲು ತೊಡಗಿದ್ದಾನೆ. ... ಮೂಕ ಬಲಿ ಪಶುಗಳಲ್ಲ. ...ರ– ಕಾರ್ಪೋರೇಟ್ ಪ್ರಾಯೋಜಿತ ...ಯನ್ನವರು ವಿರೋಧಿಸುತ್ತಿದ್ದಾರೆ. ಆದ–...ನಗನ್ನಿಸುವಂತೆ, ಸಮಾಜದಲ್ಲಿ ಬಿತ್ತಿರುವ ... ಮತ್ತು ದ್ವೇಷವನ್ನು ಹಿಮ್ಮೆಟ್ಟಿಸಲು ... ಸಮಯ ಹಿಡಿಯುತ್ತದೆ".

...ಮಗೆ ಅಸ್ತಿತ್ವವೇ ಇಲ್ಲ ಅನ್ನುವ ಭಾವ ...ತ್ತದೆ."

...ಯಾ ಖಾನ್ : 46 ವರ್ಷದ ...ವಾದಿ ಮತ್ತು ವಕೀಲರು.

...ನಮಗೆ ಅಸ್ತಿತ್ವವೇ ಇಲ್ಲ ಅನ್ನುವ ... ಕಾಡುತ್ತದೆ. ನಮಗೂ ಅವರಿಗೂ ... ಉಳಿದಿಲ್ಲ ಅನಿಸುತ್ತದೆ. ನಿರಾಸೆ ...ಾಗ, ಮುಸ್ಲಿಮರು, ವಿನೀತರಾಗಿ ...ದರೆನಿಸುತ್ತದೆ. ಬಹು ಸಂಖ್ಯೆ ಜನರು ...ದಿಂದ ಮತಿಭ್ರಮಣೆಗೊಳಗಾಗಿ ...ನಿಸುತ್ತದೆ. ಅವರಿಗೆ ಮುಸ್ಲಿಮರ ಮೇಲಿನ ... ಹೆಚ್ಚಾಗುತ್ತಿದೆ. 2002ರ ಗಲಭೆಗಳ ...ಯದಲ್ಲಿ ನನ್ನ ಕಛೇರಿಯು, ಹಿಂದುಗಳೇ ...ಬಹುಸಂಖ್ಯೆ ಹೊಂದಿದ್ದ, ಅಹಮದಾಬಾದಿನ ...ಯಣಾಪುರ ಬಡಾವಣೆಯಲ್ಲಿತ್ತು. ...ಚಿತ ಭಾವನೆಗಳಿಂದ ದೂರವಿದ್ದ ... ನಾವೆಲ್ಲರೂ ಒಂದೇ ಎನ್ನುವ ...ವರಣವಿತ್ತು. ಆದರೆ, 2006 ರಲ್ಲಿ, ...ಕಿಸ್ತಾನವೆಂದೇ ಪರಿಗಣಿಸಲಾದ, ...ಮರೇ ಪ್ರತ್ಯೇಕವಾಗಿ ವಾಸಮಾಡುತ್ತಿದ್ದ ... ಕೊಳೆಗೇರಿಗೆ ನನ್ನನ್ನು ಬಲವಂತವಾಗಿ ತಳ್ಳಿದರು. ಇದು ಜೀವನದಲ್ಲಿ ನನಗೆ ತಾಗಿದ ಅತಿ ದೊಡ್ಡ ಕೇಡು.

ನನ್ನ ಐಡೆಂಟಿಟಿ(ಅಸ್ಮಿತೆ)ಯ ಮೇಲೆ ಎರಡು ಗುರುತುಗಳನ್ನು ಬಲವಂತವಾಗಿ ಹೇರಲಾಗಿದೆ–ಮುಸ್ಲಿಂ ಮತ್ತು ಮುಸ್ಲಿಂ ಮಹಿಳೆ. ಜಾತ್ಯಾತೀತ ಮಿತ್ರರು ನನ್ನಿಂದ ದೂರವಾದಾಗ, ಮುಸ್ಲಿಂ ಸಮುದಾಯದ ನಡುವೆ ನನ್ನನ್ನು ನಾನು ಗುರುತಿಸಿಕೊಂಡೆ. ಈಗ ಅವರೇ ನನ್ನ ಮಿತ್ರರು ಮತ್ತು ನನ್ನ ಹೊಸ ಭರವಸೆ. ಇದು ಕೇವಲ ನನ್ನ ಕತೆಯಲ್ಲ. ಕೇವಲ ಮುಸ್ಲಿಂ ಮಹಿಳೆಯರು ಮಾತ್ರ ಸಂಕಷ್ಟದಲ್ಲಿದ್ದಾರೆಂದು ನಾವು ಭಾವಿಸಬಾರದು. ಕೆಲವು ವರ್ಷಗಳಿಂದೀಚೆಗೆ ಲೈಂಗಿಕ ದೌರ್ಜನ್ಯ, ಹಿಂಸೆ ಹೆಚ್ಚುತ್ತಿದೆ. ನಾವು, ರೈಲು/ವಿಮಾನ ನಿಲ್ದಾಣದಿಂದ ಅಥವಾ ಸಾರ್ವಜನಿಕ ಸಮಾರಂಭಗಳಿಂದ ವಾಪಸ್ ಮನೆಗೆ ಸುರಕ್ಷಿತವಾಗಿ ತಲುಪುವ ದಿನಗಳು ಮುಗಿದು ಹೋಗಿವೆ. ಈಗ, ಅಸುರಕ್ಷತೆ ತಾಂಡವವಾಡುತ್ತಿದೆ. ನಾವೆಲ್ಲರೂ ಒಂದೆಂಬುದು ಕೇವಲ ಕಟ್ಟುಕತೆಯಾಗಿದೆ. ನರೇಂದ್ರ ಮೋದಿ ಕೇವಲ ಮುಸ್ಲಿಂ ಮಹಿಳೆಯರ ಅಸ್ಮಿತೆಯನ್ನು ಛಿದ್ರ ಮಾಡಿಲ್ಲ; ರಾಜ್ಯದ ಎಲ್ಲಾ ಹಿಂದೂ ಮತ್ತು ಇತರೆ ಸಮುದಾಯಗಳ ಮಹಿಳೆಯರ ಅಸ್ಮಿತೆಯನ್ನೂ ಛಿದ್ರ ಮಾಡಿದ್ದಾರೆ. ಆದರೆ, ಮಹಿಳೆಯರು ಏಕೆ ಮೋದಿಯವರನ್ನು ಮೆಚ್ಚುತ್ತಾರೆ ಮತ್ತು ಅವರಿಗೆ ಮತ ಹಾಕುತ್ತಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ".

ನರೇಂದ್ರ ಮೋದಿ ಆಡಳಿತದಲ್ಲಿ ಜನಜೀವನ ಹೇಗಿದೆಯೆಂಬುದನ್ನು, ಮೇಲಿನ ಎರಡು ಅಭಿಪ್ರಾಯಗಳು ಬಿಚ್ಚಿಡುತ್ತವೆ. ಅವು ನಮ್ಮ ಮನಸ್ಸನ್ನು ಕಲಕುತ್ತವೆ. ರಾಜ್ಯದ ಒಳಗಿನ ವಿದ್ಯಮಾನಗಳು ಗುಜರಾತ್ ಮಾದರಿ ಅಭಿವೃದ್ಧಿಯನ್ನು ಸಂಪೂರ್ಣವಾಗಿ ನಿರಾಕರಿಸುತ್ತವೆ. ●


'ಅಸಾರಾಮ'ನ ಘೋರ.....

ಪುಟ 11 ರಿಂದ

ಮಾಧ್ಯಮದ ವರದಿಗಳಿಂದ ಬಯಲಾಗುತ್ತಿದೆ. ಅಹಮದಾಬಾದ್ ವೊಂದರಲ್ಲೇ ಅಸಾರಾಮ್ ತನ್ನ ಆಶ್ರಮಕ್ಕಾಗಿ 67,099 ಎಕರೆ ಭೂಮಿ ನುಂಗಿದ್ದ ಎಂಬುದನ್ನು ಸ್ವತಃ ಗುಜರಾತ್ ಸರ್ಕಾರವೇ ಸದನದಲ್ಲಿ ಒಪ್ಪಿಕೊಂಡಿದೆ.

ಆದರೆ, ಅಚ್ಚರಿ ಎಂದರೆ ಇಷ್ಟೆಲ್ಲ ವಿಷಯಗಳು ಬಯಲಾಗುತ್ತಿರುವುದು ಜೋಧ್‌ಪುರದ ಘಟನೆ ಬಳಿಕ. ಇದಕ್ಕೆ ಮುನ್ನ ಯಾವುದೇ ಸಂದರ್ಭದಲ್ಲೂ ರಾಜ್ಯ ಸರ್ಕಾರಗಳ ಯಾವೊಬ್ಬ ಅಧಿಕಾರಿಯೂ ಅಸಾರಾಮನ ಈ ಗಂಭೀರ ಭೂ ಹಗರಣದ ಬಗ್ಗೆ ಸೊಲ್ಲೆತ್ತಿರಲಿಲ್ಲ. ಜಸ್ಟಿಸ್ ಸಿಂಘ್ವಿ ಮತ್ತು ಜಸ್ಟಿಸ್ ಗೋಪಾಲಗೌಡ ಅವರನ್ನೊಳಗೊಂಡ ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠ ಅಸಾರಾಮ್ ಬಂಧನದ ಬಳಿಕವೂ ಆತನಿಗೆ ನೀಡುತ್ತಿರುವ ಅಗಾಧ ಪ್ರಮಾಣದ ಭದ್ರತೆ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದೆ.

ಆದರೆ, ಈ ಎಲ್ಲ ಪಾತ್ರಗಳನ್ನು ಆತ ಏಕಾಂಗಿಯಾಗಿ ಮಾಡಲು ಸಾಧ್ಯವೇ? ಈ ಪ್ರಶ್ನೆಗೆ ಪೂರಕ ಎಂಬಂತೆ ಅಭಿಷೇಕ್ ಮತ್ತು ದೀಪಕ್ ವಘೇಲಾ ಎಂಬ ಇಬ್ಬರು ಗುಜರಾತಿ ಮಕ್ಕಳನ್ನು ಆತ ತನ್ನ ಮೊಟೇರಾ ಆಶ್ರಮದಲ್ಲಿ ಕೊಲೆಮಾಡಿಸಿದ ಪ್ರಕರಣದಲ್ಲಿ ಆತ ಆಡಳಿತ ಮೇಲೆ ಎಷ್ಟು ಪ್ರಭಾವ ಬೀರುತ್ತಾರೆ ಎಂಬುದನ್ನು ತೋರಿಸುತ್ತದೆ.



ವಾಜಪೇಯಿ ಜೊತೆ ಅಸಾರಾಂ 'ಖಾಸಾಬಾತ್'

ನರಬಲಿ !!

'ಮಾನವ ಬಲಿದಾನ' ಎನ್ನಲಾದ ಈ ಕೃತ್ಯದ ಮೂಲಕ ಅಸಾರಾಮ್ ಆಶ್ರಮಕ್ಕೆ ಇಬ್ಬರು ಬಾಲಕರ ಬಲಿ ಪಡೆಯಲಾಯಿತು. 2008ರ ಜುಲೈನಲ್ಲಿ ಈ ಇಬ್ಬರು ಬಾಲಕರು ಇದ್ದಕ್ಕಿದ್ದಂತೆ ಕಾಣೆ–ಯಾದರು. ಈ ಬಾಲಕರ ಪೋಷಕರಾದ ಶಾಂತಿಲಾಲ್ ವಘೇಲಾ ಮತ್ತು ಪ್ರಫುಲ್ ವಘೇಲಾ ಎಂಬವರು ಆಶ್ರಮಕ್ಕೆ ಭೇಟಿ ನೀಡಿ ಸಹಾಯ ಕೇಳುತ್ತಾರೆ. ಆಗ ಪವಿತ್ರ ಮರವೊಂದಕ್ಕೆ 11 ಸುತ್ತು ಬರುವಂತೆ ಆಶ್ರಮದ ಸಿಬ್ಬಂದಿ ಸಲಹೆ ನೀಡುತ್ತಾರೆ. ಬಳಿಕ ಕಾಣೆಯಾದ ಬಾಲಕರ ಬಟ್ಟೆಯನ್ನು ತಲೆಕೆಳಗಾಗಿ ನೇತುಹಾಕುವಂತೆ ಹೇಳುತ್ತಾರೆ. ಅದಾದ ಬಳಿಕ ಶಿಲಾಸ್ಪಟಿಕದ ಕಲ್ಲಿನ ಹರಳನ್ನು ನೀರಿನಲ್ಲಿ ಹಲವು ಬಾರಿ ಬಿಸಿ ಮಾಡಿ ತಣಿಸುವಂತೆ. ಹೇಳುತ್ತಾರೆ. ಇಷ್ಟೆಲ್ಲ ಸಮಯದಲ್ಲಿ ದೇವಮಾನವ ಈ ಬಾಲಕರ ಹತ್ಯಾಕೃತ್ಯದಲ್ಲಿ ಸಾಕ್ಷ್ಯ ನಾಶಮಾಡಲು ಬಳಸಿಕೊಳ್ಳುತ್ತಾನೆ.

ಈ ಘಟನೆಯ ಬಗ್ಗೆ ಪೋಷಕರು ಗುಜರಾತ್ ಪೊಲೀಸರಿಗೆ ದೂರು ನೀಡಿದರೂ ಎಫ್‌ಐಆರ್ ದಾಖಲಿಸಲು ಇಲಾಖೆ ಹಿಂದೇಟು ಹಾಕುತ್ತದೆ. ಈ ಸಂದರ್ಭದಲ್ಲಿ ಆಶ್ರಮದ ಸಿಬ್ಬಂದಿಯಿಂದ ವ್ಯಾಪಕ ಒತ್ತಡ, ಜೀವಬೆದರಿಕೆ ಎದುರಾಗುತ್ತದೆ. ಜುಲೈ 5ರಂದು ಈ ಮಕ್ಕಳ ಮೃತದೇಹದ ಭಾಗಗಳು ದೊರೆಯುತ್ತವೆ. ಈ ಪ್ರಕರಣದಲ್ಲಿ ತನಿಖೆಗೆ ಒತ್ತಾಯ ಮಾಡದಂತೆ ಆಶ್ರಮದ ಸಶಸ್ತ್ರ ಸಿಬ್ಬಂದಿ, ಸ್ಥಳೀಯ ಶಾಸಕ ಗೋವಿಂದ್ ಪ್ರಜಾಪತಿ ಹಾಗೂ ಬಿಜೆಪಿ–ವಿಎಚ್‌ಪಿ ಗೂಂಡಾಗಳು ಪೋಷಕರ ಮೇಲೆ ಒತ್ತಡ ಹಾಕುತ್ತಾರೆ. ಈ ಪ್ರಕರಣವನ್ನು ಸಿಬಿಐಗೆ ಒಪ್ಪಿಸಲು ನರೇಂದ್ರ ಮೋದಿ ಕೂಡ ನಿರಾಕರಿಸುತ್ತಾರೆ. ಆದರೆ, (ಸೌಜನ್ಯ ಪ್ರಕರಣದಂತೆ) ಭಾರೀ ಒತ್ತಡ, ಹೋರಾಟಗಳಿಂದಾಗಿ ನವೆಂಬರ್ 2009ರಲ್ಲಿ ಎಫ್‌ಐಆರ್ ದಾಖಲಾಗುತ್ತದೆ. ಆದರೆ, ಸಾಕ್ಷ್ಯ ನಾಶ ಮತ್ತು ಸಾಂದರ್ಭಿಕ ಸಾಕ್ಷ್ಯಗಳ ಅಲಭ್ಯತೆಯಿಂದ ಸೂಕ್ತ ತನಿಖೆ ನಡೆಯದೆ ಬಾಲಕರ 'ನರಬಲಿ'ಯಂತಹ ಗಂಭೀರ ಪ್ರಕರಣದಲ್ಲಿ ಹೈಕೋರ್ಟ್ ಕೂಡ ಕೈಚೆಲ್ಲುತ್ತದೆ.

ಸಂಘ ಪರಿವಾರದ ಬೆಂಬಲ

ಅಸಾರಾಮ ಇಷ್ಟೆಲ್ಲ ಕಾರುಬಾರು ನಡೆಸಿರುವುದು ಸಂಘ ಪರಿವಾರದ ಬೆಂಬಲದಿಂದ ಎಂಬುದು ಸ್ಪಷ್ಟ. ಈತನ ಕೃತ್ಯಗಳು ಬಯಲಾಗುತ್ತಿದ್ದಂತೆ ಸಿ.ಎಂ. ನರೇಂದ್ರಮೋದಿ ಅಂತರ ಕಾಯ್ದುಕೊಳ್ಳುತ್ತಾರೆ. ಆದರೆ, ಹಿಂದುತ್ವ ಬ್ರಿಗೇಡ್‌ನ ಇತರ ಗೆಳೆಯರು ಮಾತ್ರ ಪರಿತಪಿಸಿ ಸಾಧ್ಯವಾದಷ್ಟು ಮಟ್ಟಿಗೆ ಈತನ ಬೆಂಬಲಕ್ಕೆ ನಿಲ್ಲುತ್ತಾ–ರೆ. 80 ವರ್ಷದ ವಯೋವೃದ್ಧನ ಮೇಲೆ ಇಂತಹ ಆರೋಪ ಮಾಡುವುದು ಸರಿಯಲ್ಲ ಎಂದು ಹೇಳುವ ಮೂಲಕ ವಿಎಚ್‌ಪಿ ನಾಯಕ ಅಶೋಕ್ ಸಿಂಘಾಲ್ ಬೆಂಬಲಕ್ಕೆ ನಿಲ್ಲುತ್ತಾ–ರೆ. ಹಿಂದೂ ಧಾರ್ಮಿಕ ನಾಯಕರ ತೇಜೋವಧೆಗೆ ಮಾಡಲಾದ ಪ್ರಯತ್ನ ಇದು ಎಂದು ಸಿಂಘಾಲ್ ಬಾಯಿ ಬಡಿದುಕೊಳ್ಳುತ್ತಾರೆ. ಉತ್ತರ ಭಾರತದಾದ್ಯಂತ ವಿಎಚ್‌ಪಿ, ಬಜರಂಗ ದಳ, ಹಿಂದೂ ಕ್ರಾಂತಿ ದಳ, ಹಿಂದೂ ಜಾಗೃತಿ ಮಂಚ್, ಹಿಂದೂ ಧರ್ಮ ರಕ್ಷಾಸಮಿತಿ ಮೊದಲಾದ ಸಂಘಟನೆಗಳು ಪತ್ರಿಕಾಗೋಷ್ಠಿ ನಡೆಸಿ ಅಸಾರಾಮನ ಬೆಂಬಲಕ್ಕೆ ನಿಲ್ಲುತ್ತವೆ. ಇದು ಕ್ರೈಸ್ತ ಮಿಷನರಿಗಳ ಪಿತೂರಿ ಎಂದೂ ಹಲುಬಿಕೊಳ್ಳುತ್ತಾರೆ.

ಅಸಾರಾಮ ಮುಗ್ಧ ಎಂದು ಉಮಾಭಾರತಿ ಟ್ವೀಟ್ ಮಾಡುತ್ತಾರೆ. ಇನ್ನು ಕೆಲ ನಾಯಕರು ಸೋನಿಯಾ ಮತ್ತು ರಾಹುಲ್‌ರನ್ನು ವಿರೋಧಿಸಿದ್ದಕ್ಕೆ ಕಾಂಗ್ರೆಸ್ ನಡೆಸಿದ ಪಿತೂರಿ ಇದು ಎಂದು ಮೈಪರಚಿಕೊಳ್ಳುತ್ತಾರೆ.

ಆದರೆ, ಅಸಾರಾಮನ ಆಶ್ರಮದ ಅನ್ಯಾಯದ ವಿರಾಟ್ ಸ್ವರೂಪ ಬಯಲಾಗುತ್ತಿದ್ದಂತೆಯೇ ಬಿಜೆಪಿ ನಾಯಕರು ಈ ವಿಷಯದಲ್ಲಿ ತಮ್ಮ ಬಾಯಿಗೆ ಬೀಗ ಹಾಕಿಕೊಳ್ಳುತ್ತಾರೆ. ಕಾನೂನು ತನ್ನ ಕ್ರಮ ಕೈಗೊಳ್ಳುತ್ತದೆ ಎಂಬ ವೇದವಾಕ್ಯವನ್ನು ಜಪಿಸತೊಡಗುತ್ತಾರೆ. ●

JANASHAKTHI KANNADA VARA PATRIKE NOV 17, 2013 Price : Rs. 10/- RNI No. KARKAN /2006/17926 Posted on ever
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. W



ಮಂಗಳ ಗ್ರಹಕ್ಕೆ ಯಶಸ್ವಿ ಉಪಗ್ರಹ ಉಡಾವಣೆ – 300 ದಿನಗಳಲ್ಲಿ ಮಂಗಳನ ಅಂಗಳದಲ್ಲಿ

'ಮಂಗಳಯಾನ್'

ಅಂತೂ 8 ದಿನ ತಡವಾಗಿಯಾದರೂ ನಮ್ಮ ಬಾಹ್ಯಾಕಾಶ ಸಂಸ್ಥೆ ಇಸ್ರೋ 'ಮಂಗಳಯಾನ'ವನ್ನು ಆರಂಭಿಸಿದೆ. ಅಕ್ಟೋಬರ್ 28ಕ್ಕೆ ಉಡಾವಣೆಯಾಗಬೇಕಿದ್ದ 'ಮಂಗಳಯಾನ್' ಉಪಗ್ರಹವು ಹವಾಮಾನದ ಕಾರಣದಿಂದ ನವೆಂಬರ್ 5ರಂದು ಯಶಸ್ವಿಯಾಗಿ ಅಂತರಿಕ್ಷಕ್ಕೆ ಹಾರಿದೆ.



ನಮ್ಮ ಭೂಗ್ರಹದಿಂದ 22.50 ಕೋಟಿ ಕಿಲೋಮೀಟರ್ ದೂರದಲ್ಲಿರುವ ಮಂಗಳ ಗ್ರಹದೆಡೆಗೆ ಮಂಗಳಯಾನ ಆರಂಭವಾಗಿದೆ. 'ಮಂಗಳಯಾನ್' ಎಂಬ ಹೆಸರಿನ



ಉಪಗ್ರಹವನ್ನು ಹೊತ್ತ 'ಪಿಎಸ್‌ಎಲ್‌ವಿ–25' ಎಂಬ ಹೆಸರಿನ ರಾಕೆಟ್ ಯಶಸ್ವಿಯಾಗಿ ಹಾರಿರುವುದು ಇಸ್ರೋ ವಿಜ್ಞಾನಿಗಳಲ್ಲಿ ಮಾತ್ರವಲ್ಲ ಎಲ್ಲೆಡೆ ಸಂತಸ ಮೂಡಿಸಿದೆ.

ಉಪಗ್ರಹವನ್ನು ಹೊತ್ತ ರಾಕೆಟನ್ನು ಹಾರಿಸಿದ 44 ನಿಮಿಷಗಳಲ್ಲಿ ಅದು ಭೂಮಿಯನ್ನು ಸುತ್ತುವ ಕಕ್ಷೆಯನ್ನು ಸೇರಿತು. ಇದು ಸುಮಾರು 20–25 ದಿನಗಳ ಕಾಲ ಭೂಮಿಯನ್ನು ಸುತ್ತಲಿದ್ದು, ನಂತರ ಮಂಗಳ ಗ್ರಹದೆಡೆಗೆ ಪಯಣಿಸಲಿದೆ. 324 ದಿನಗಳ ಬಳಿಕ ಅಂದರೆ 2014ರ ಸೆಪ್ಟೆಂಬರ್ 24ರಂದು ಕೆಂಪು ಗ್ರಹ 'ಮಂಗಳ'ದ ಕಕ್ಷೆಯನ್ನು ಸೇರಿ ಅದನ್ನು ಸುತ್ತಲಿದೆ. ಅಷ್ಟರಲ್ಲಿ ಸುಮಾರು 60 ಕೋಟಿ ಕಿ.ಮೀ ದೂರ ಕ್ರಮಿಸಲಿದೆ.

ಮಂಗಳ ಗ್ರಹದಲ್ಲಿ ಶೋಧನೆ

ಮಂಗಳ ಗ್ರಹವು ಸೌರಮಂಡಲದ ನಾಲ್ಕನೇ ಗ್ರಹವಾಗಿದ್ದು, ಕಬ್ಬಿಣದ ಧಾತು ಅಧಿಕವಾಗಿರುವುದರಿಂದ ಅದು ಕೆಂಪಾಗಿ ಕಾಣುತ್ತದೆ. ಈ ಗ್ರಹವು ಭೂಗ್ರಹದ ವಾತಾವರಣಕ್ಕೆ ಕೆಲಮಟ್ಟಿಗೆ ಹೋಲಿಕೆ ಹೊಂದಿದ್ದು, ಜಲ ಇದ್ದಿರಬಹುದಾದ ಕುರುಹುಗಳಿವೆ. ಮಂಗಳ ಗ್ರಹದ ಮೇಲ್ಮೈ ಚಿತ್ರಣ ಮತ್ತು ಮೀಥೇನ್ ಎಂಬ ಅನಿಲ ಇಲ್ಲಿದೆಯೇ ಎಂದು ಶೋಧಿಸಲು ಈ ಉಪಗ್ರಹವನ್ನು ವಿನ್ಯಾಸಗೊಳಿಸಲಾಗಿದೆ.


'ಮಂಗಳಯಾನ'ದಲ್ಲಿ ಏನೇನಿದೆ?

1.3 ಟನ್ ತೂಕದ ಉಪಗ್ರಹದಲ್ಲಿ ಥರ್ಮಲ್ ಇನ್‌ಫ್ರಾರೆಡ್ ಸ್ಪೆಕ್ಟ್ರೋಮೀಟರ್ 4ಕೆಜಿ, ಬಣ್ಣದ ಕ್ಯಾಮೆರಾ 1.4ಕೆಜಿ, ಲೈಮನ್ ಅಲ್ಫಾ ಫೋಟೋಮೀಟರ್ 1.5ಕೆಜಿ, ಮಿಥೇನ್ ಸಂವೇದಕ 3.59ಕೆಜಿ ಸಾಧನಗಳಿವೆ.

ಮಂಗಳ ಗ್ರಹಕ್ಕೆ ಹಾರಿಬಿಡಲಾಗಿರುವ ಇತರೆ ದೇಶಗಳ ಉಪಗ್ರಹಗಳು

ಮಂಗಳ ಗ್ರಹಕ್ಕೆ ಈಗಾಗಲೇ ಅಮೇರಿಕಾ, ರಷ್ಯಾ, ಮತ್ತು ಯೂರೋಪ್ ಮಾತ್ರವೇ ಉಪಗ್ರಹ ಕಳುಹಿಸಿರುವುದು. ಮೊದಲಿಗೆ 1964ರಲ್ಲಿ ಅಮೇರಿಕಾದ ಮೆರೀನರ್–4 ಎಂಬ ಉಪಗ್ರಹ ಮಂಗಳ ಗ್ರಹದ ಕಕ್ಷೆ ತಲುಪಿ ಆ ಗ್ರಹದ ಮೇಲ್ಮೈ ಚಿತ್ರಗಳನ್ನು ಕಳುಹಿಸಿಕೊಟ್ಟಿತ್ತು. 1971ರಲ್ಲಿ ಸೋವಿಯತ್ ಒಕ್ಕೂಟದ ಮಾರ್ಸ್–3 ಎಂಬ ಉಪಗ್ರಹ ಮಂಗಳ ಗ್ರಹದ ಮೇಲೆಯೇ ಇಳಿದಿತ್ತು. ಅಮೇರಿಕಾ ಮತ್ತೆ ಇದೇ ತಿಂಗಳಿನಲ್ಲಿ 'ಮಾವೆನ್' ಹೆಸರಿನ ಉಪಗ್ರಹವನ್ನು ಮಂಗಳಕ್ಕೆ ಕಳುಹಿಸುತ್ತಿದ್ದರೆ, ಚೀನಾ 3–4 ತಿಂಗಳಲ್ಲಿ ಉಡಾಯಿಸಲಿದೆ.

ಉಪಗ್ರಹಗಳಿಂದ ಏನು ಪ್ರಯೋಜನ?



ಈ ಉಪಗ್ರಹ ಉಡಾವಣೆಗಾಗಿ ಒಟ್ಟಾರೆ ರೂ. 450 ಕೋಟಿ ವೆಚ್ಚ ತಗುಲಿದ್ದು, ಇಷ್ಟು ದುಬಾರಿ ಹಣವನ್ನು ಉಪಗ್ರಹ ತಯಾರಿಸಲು ಬಳಸುವ ಬದಲು ಬಡತನ ... ಶೌಚಾಲಯ ಕಟ್ಟಿಸಲು, ಇತ್ಯಾದಿ ಕಾರ್ಯಗಳಿಗೆ ವಿನಿಯೋಗಿಸಬೇಕಿ... ಕೆಲವರು ಹೇಳುತ್ತಿದ್ದಾರೆ. ಹಾಗೆ ... ರೆ ಅಮೇರಿಕಾ ಮತ್ತು ಯ... ದೇಶಗಳ ಉಪಗ್ರಹದ ವೆಚ್ಚಕ್ಕೆ ಹೆ... ನಮ್ಮ ವಿಜ್ಞಾನಿಗಳು ಕಡಿಮೆ ... ಮಂಗಳಯಾನ್ ಉಪಗ್ರಹ ತಯಾ... ಜೊತೆಗೆ ಉಪಗ್ರಹಗಳು ಹ... ಪರಿಸ್ಥಿತಿ ಅರಿಯಲು, ಟೆ... ದೂರದರ್ಶನ ಇತ್ಯಾದಿ ಸಂವಹನ... ಬಹಳ ಸಹಕಾರಿ... ಉದಾಹರಣೆಗೆ ... ಒರಿಸ್ಸಾದಲ್ಲಿ ಸಂಭವಿಸಿದ ... ಚಂಡಮಾರುತ ... ಂದು ನಮ್ಮ ಉಪಗ್ರ... ನಮಗೆ ಮುಂ... ತಿಳಿದು ಬಂದಿದ್ದ... ಸಮುದ್ರದಂಚಿನ ಜನರ... ರೆಡೆಗೆ ಸ್ಥಳಾಂತರಿಸ... ಇದರಿಂದ ಉಂಟಾದ ಸಾ... ನಾಲ್ಕೋ ಐದೋ ಅಷ್ಟೆ... 10 ವರ್ಷಗಳ ಹಿಂದೆ ಸಂ... ಫೈಲೀನ್‌ಗಿಂತಲೂ ... ಪ್ರಭಾವದ ಚಂಡಮಾ... ಸಾವಿರಾರು ... ಸಾವಿಗೀಡಾಗಿದ್ದರು. ಬೇರ... ಗುಣಲಕ್ಷಣಗಳು, ವಾ... ಅಲ್ಲಿಯ ಖನಿಜ, ಇತ್ಯಾದಿ ... ಮುಂದೆ ಮನುಕುಲಕ್ಕೆ ಸಹಕಾರಿ... ಸಾಧ್ಯತೆಗಳು ತೆರೆದುಕೊಳ್ಳುತ್ತವೆ.



ಸಹಯಾನದಲ್ಲಿ ಮಕ್ಕಳಿಗೆ ಸಿಕ್ಕಿತು
'ಬಣ್ಣ ಬಣ್ಣದ ರಜಾ'

ವರದಿ ಪುಟ – 12

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI